# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜುಲೈ, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೬

ಚಂದಾ ರೂ. ೩೨೦/- (ಮೇ, ೨೦೧೯ರಿಂದ ಸೆಪ್ಟಂಬರ್, ೨೦೨೦ರವರೆಗೆ) ಬೆಲೆ : ಬಿಡಿ ಪ್ರತಿ: ರೂ. ೨೫/- ಪುಟ: ೨೦

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮೋದಿ ಸರ್ಕಾರದ ಎರಡನೇ ಅವಧಿಯ ಅಧಿಕಾರ ಅದರ ಆ ಭಾರಿ ಜಯದಂತೆಯೇ ಭರ್ಜರಿಯಾಗಿ ಆರಂಭವಾಗಿದೆ. ಈ ಅವಧಿಯ ಸಂಸತ್ತಿನ ಮೊದಲ ಅಧಿವೇಶನದಲ್ಲಿ ಪ್ರಮಾಣವಚನ ಸ್ವೀಕಾರ ಸಂದರ್ಭದಲ್ಲಿ ಬಿಜೆಪಿಯ ಸದಸ್ಯರು 'ಜೈಶ್ರೀರಾಮ್' ಎಂಬ ಘೋಷಣೆಗಳನ್ನು ಮೊಳಗಿಸಿ ಬರಲಿರುವ ದಿನಗಳ ರಾಜಕಾರಣದ ಸ್ವರೂಪದ ಬಗ್ಗೆ ಸ್ಪಷ್ಟ ಸೂಚನೆಗಳನ್ನೇ ನೀಡಿದ್ದಾರೆ. ಎಂದಿನಂತೆ ಪ್ರಧಾನಿ ಮೋದಿ ಮತ್ತು ಪಕ್ಷದ ಇತರ ನಾಯಕರು, ಎಲ್ಲ ಸಾಂಗೋಪಾಂಗವಾಗಿ ಮುಗಿದ ಮೇಲೆ ತಮ್ಮ ಪಕ್ಷದ ಸದಸ್ಯರ ಈ ಅಸಾಂವಿಧಾನಿಕ ವರ್ತನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿ ಸಂವಿಧಾನ ಕುರಿತ ತಮ್ಮ ಸರ್ಕಾರದ ನಿಷ್ಠೆಯನ್ನು ಪುನರುಚ್ಛರಿಸಿದ್ದಾರೆ! ನಂತರದ ದಿನಗಳಲ್ಲಿ ರಾಷ್ಟ್ರಪತಿಯವರ ಭಾಷಣಕ್ಕೆ ಉತ್ತರ ಕೊಡುವ ನೆಪದಲ್ಲಿ ಮೋದಿಯವರು ವಿರೋಧ ಪಕ್ಷಗಳ ವಿರುದ್ಧ, ನಿರ್ದಿಷ್ಟವಾಗಿ ಕಾಂಗ್ರೆಸ್ ವಿರುದ್ಧ ಪ್ರಚಂಡ ದಾಳಿ ನಡೆಸಿದ್ದಾರೆ. ಉತ್ತರ ಕೊಡಲಾಗದ ವಿರೋಧ ಪಕ್ಷಗಳು-ಡಿಎಂಕೆಯ ಹೊರತಾಗಿ-ಬಾಯಿ ಮುಚ್ಚಿಕೊಂಡು ಕೂತಿವೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮ ಪ್ರಜಾಪ್ರಭುತ್ವದ ಭವಿಷ್ಯದ ಬಗ್ಗೆ ನಿಜವಾದ ಆತಂಕ ಉಂಟಾಗುತ್ತದೆ.

ಸರ್ಕಾರ ಎರಡನೇ ಬಾರಿ ಅಧಿಕಾರಕ್ಕೆ ಬಂದೊಡನೆ ಆದ್ಯತೆಯ ಮೇಲೆ ಕೈಗೊಂಡಿರುವ ಎರಡು ಕಾರ್ಯಕ್ರಮಗಳನ್ನೇ ನೋಡಿ. ಒಂದು ರಾಷ್ಟ್ರೀಯ ಶಿಕ್ಷಣ ನೀತಿ, ಇನ್ನೊಂದು ಒಂದು ದೇಶ ಒಂದು ಚುನಾವಣೆ. ಇವೆರಡೂ ಆಡಳಿತ ಪಕ್ಷ ಎತ್ತಿ ಹಿಡಿಯುವ ರಾಷ್ಟ್ರೀಯತೆ ಮಾದರಿಗೆ ತಕ್ಕಂತೆಯೇ ಇವೆ. ಶಿಕ್ಷಣ ಎನ್ನುವುದು ನಮ್ಮ ಸಂವಿಧಾನದ ಸಹವರ್ತಿ ಪಟ್ಟಿಯಲ್ಲಿದ್ದರೂ ಅದನ್ನು ಕೇಂದ್ರ ಸರ್ಕಾರದ ಏಕಪಕ್ಷೀಯ ವಿಷಯವೆಂಬಂತೆ 'ರಾಷ್ಟ್ರೀಯ' ಎಂಬ ಹಣೆಪಟ್ಟಿಯಡಿಯಲ್ಲಿ ರಾಜ್ಯಗಳ ಮೇಲೆ ಪ್ರಯೋಗಿಸ ಹೊರಟಿರುವ ರೀತಿ ಪ್ರಾದೇಶಿಕ ಭಾಷೆ, ಇತಿಹಾಸ ಮತ್ತು ಸಂಸ್ಕೃತಿಗಳ ಉಳಿವಿನ ದೃಷ್ಟಿಯಿಂದ ಆತಂಕಕಾರಿಯಾಗಿದೆ. ಬಿಜೆಪಿ ಈಗ ಕೇವಲ ಇನ್ನೊಂದು ರಾಜಕೀಯ ಪಕ್ಷವಾಗಿ ಉಳಿದಿಲ್ಲ. ಅದು ನಮ್ಮ ಸ್ವಾತಂತ್ರ್ಯಾಂದೋಲನದ ಉದಾರವಾದಿ ಮೌಲ್ಯಗಳ ವಿರುದ್ಧ ಆರಂಭಿಸಿದ ಸಂಘಟಿತ ಹೋರಾಟದಲ್ಲಿ ಈಗ ನಿರ್ಣಾಯಕ ಜಯಗಳಿಸಿದ ಸಂಭ್ರಮದಲ್ಲಿದ್ದು ತನ್ನದೇ ಕಲ್ಪನೆಯ 'ನವ ಭಾರತ'ದ ನಿರ್ಮಾಣದ ಮಹಾ ಯೋಜನೆಯೊಂದರ ಅನುಷ್ಠಾನದ ಸಂಕಲ್ಪ ಮಾಡಿದೆ ಎಂಬ ಸಂಗತಿಯ ಹಿನ್ನೆಲೆಯಲ್ಲಿ ನೋಡಿದಾಗ ಈ ಶಿಕ್ಷಣ ನೀತಿಯ 'ರಾಷ್ಟ್ರೀಯ' ಉದ್ದೇಶ ಏನೆಂದು ಅರ್ಥವಾಗುತ್ತದೆ. (ಪತ್ರಿಕೆಯ ಮೂರನೇ ಪುಟದಲ್ಲಿನ ಪ್ರೊ. ಪುರುಷೋತ್ತಮ ಅಗರ್ವಾಲ್‌ರ ಲೇಖನ ಗಮನಿಸಿ). ಸಂಘ ಪರಿವಾರದ ಘಟಕಗಳು ವಿವಿಧ ಮಾಧ್ಯಮಗಳ ಮೂಲಕ ಈಗಾಗಲೇ ನಮ್ಮ ಇತಿಹಾಸವನ್ನು ಮತೀಯ ಪರಿಭಾಷೆಯಲ್ಲಿ ಮರುವ್ಯಾಖ್ಯಾನ ಮಾಡುವ ಸಂಘಟಿತ ಮತ್ತು ವಿದ್ವದ್ ರೂಪದ ಕೆಲಸಗಳನ್ನು ಆರಂಭಿಸಿದೆ ಎಂಬುದನ್ನು ಬಹಳ ಜನ ಗಮನಿಸಿದಂತಿಲ್ಲ. 'ಇನ್‌ಫಿನಿಟಿ ಫೌಂಡೇಶನ್' ಎಂಬ ಹಿಂದುತ್ವವಾದಿ ಸಂಸ್ಥೆಯೊಂದು ಎಡಪಂಥಿಯ ಇತಿಹಾಸಜ್ಞೆ ರೋಮಿಲಾ ಥಾಪರ್ ಅವರ ಪ್ರಮೇಯಗಳನ್ನೆಲ್ಲ ಒಂದೊಂದಾಗಿ ಎತ್ತಿಕೊಂಡು ಅವೆಲ್ಲ 'ವಸಾಹತೀಕೃತ' (ಅಂದರೆ ಪಶ್ಚಿಮದ ಮನಸ್ಸಿನ) ಫಲಗಳೆಂದು ಹೇಳುತ್ತಾ ತನ್ನದೇ 'ರಾಷ್ಟ್ರೀಯ' ನುಡಿಗಟ್ಟಿನಲ್ಲಿ ಇತಿಹಾಸದ ಹೊಸ ಪಾಠಗಳನ್ನು ಸಾಮಾಜಿಕ ತಾಣಗಳ ಮೂಲಕ ಆರಂಭಿಸಿದೆ ಎಂಬುದನ್ನು ಯಾವ ವಿರೋಧ ಪಕ್ಷವೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಆಘಾತಕರ ಚುನಾವಣಾ ಸೋಲು ಅವುಗಳ ಮನಸ್ಸಿಗೆ ಮಂಕು ಹಿಡಿಸಿದಂತಿದೆ.

ಇನ್ನು 'ಒಂದು ದೇಶ, ಒಂದು ಚುನಾವಣೆ' ಎಂಬ ಕಾರ್ಯಕ್ರಮವನ್ನು ಹಲವು ಚುನಾವಣೆಗಳಿಂದ ಸರ್ಕಾರದ ಮೇಲೆ ಬೀಳುವ ಹಣಕಾಸಿನ ಭಾರ ಮತ್ತು ಸಂಬಂಧಿತ ಚುನಾವಣಾ ನೀತಿ ಸಂಹಿತೆಗಳ ಕಾರಣದಿಂದ ಅಭಿವೃದ್ಧಿ ಚಟುವಟಿಕೆಗಳ ಮೇಲಾಗುವ ಪ್ರತಿಕೂಲ ಪರಿಣಾಮಗಳ 'ಜನಪ್ರಿಯ' ಕಾರಣಗಳನ್ನು ಮುಂದೊಡ್ಡಿ ಮುನ್ನುಗ್ಗುತ್ತಿರುವ ರಭಸವನ್ನು ನೋಡಿದರೆ, ಅದು ಅಭಿವೃದ್ಧಿಗೆ ಅಡ್ಡಿಯಾಗುವುದಾದರೆ ಚುನಾವಣೆಗಳೇ ಬೇಡ ಎಂದು ಜನರ ಮನ ಒಲಿಸುವ ಮಟ್ಟವನ್ನೂ ತಲುಪಬಹುದು ಎಂಬ ಆತಂಕವನ್ನು ಹುಟ್ಟಿಸಿದೆ. ಕಳೆದ ಚುನಾವಣೆಯ ಫಲಿತಾಂಶಗಳನ್ನು ನೋಡಿದರೆ, ಸಾಕಷ್ಟು ಮೇವು ಒದಗಿಸಿ ದೇಶಭಕ್ತಿಯ ಹುಚ್ಚು ಹತ್ತಿಸಿದರೆ ಸಾಕು ಅವರಿಗೆ ಪ್ರಜಾಪ್ರಭುತ್ವವೂ ಬೇಡ, ಚುನಾವಣೆಯೂ ಬೇಡ ಎಂಬ ಮನಃಸ್ಥಿತಿಗೆ ಒಂದು ದೊಡ್ಡ ಜನವರ್ಗ ತಲುಪಿದಂತಿದೆ. ಇದು ನಮ್ಮ ವಿರೋಧ ಪಕ್ಷಗಳಿಗೆ ಮತ್ತು ಸಾರ್ವಜನಿಕ ಬುದ್ಧಿಜೀವಿಗಳಿಗೆ ಧೃತಿಗೆಡಿಸುವ ಸಂಗತಿಯಾಗದೆ, ಎಚ್ಚರಿಕೆಯ ಗಂಟೆಯಂತೆ ಕೆಲಸ ಮಾಡಿ ಈ 'ಒಂದು ದೇಶ, ಒಂದು ಚುನಾವಣೆ'ಯ ಘೋಷವನ್ನು ಸ್ಪಷ್ಟ ಮತ್ತು ದೊಡ್ಡ ಮನಸ್ಸಿನಿಂದ ಎದುರ್ಗೊಳ್ಳಬೇಕಿದೆ. ನಮ್ಮ ಬಹು ಪಕ್ಷೀಯ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯ ಭವಿಷ್ಯಕ್ಕೆ ಮುಳುವಾಗದಂತೆ ವಿಪರೀತವಾಗಿರುವ ಚುನಾವಣಾ ಹಾವಳಿಯನ್ನು ಹೇಗೆ ತಪ್ಪಿಸಬಹುದೆಂಬುದರ ಬಗ್ಗೆ ಜನ ಒಪ್ಪುವಂತಹ ಸಲಹೆಗಳನ್ನು ನೀಡುವ ಛಾತಿಯನ್ನೀಗ ಅದು ಪ್ರದರ್ಶಿಸಬೇಕಿದೆ.

### ಕಾಂಗ್ರೆಸ್ ಪುನರುಜ್ಜೀವನಕ್ಕಾಗಿ ಕೆಲವು ಸಲಹೆಗಳು

ಕಣ್ತುಂಬುವಷ್ಟು ಮೇವು ಒದಗಿಸಿ ದೇಶಭಕ್ತಿಯ ಹುಚ್ಚು ಹತ್ತಿಸಿದರೆ ಚುನಾವಣೆಗಳು ಇಲ್ಲದಿದ್ದರೂ ನಡೆದೀತು ಎನ್ನುವ ಒಂದು ಜನವರ್ಗದ ಬಗ್ಗೆ ಹೇಳಿದೆ. ಹಿಂದೊಮ್ಮೆ ಇಲ್ಲಿಯೇ ಬರೆದಂತೆ ಈ ವರ್ಗದ ಪಿತಾಮಹ ಕಾಂಗ್ರೆಸ್ಸಿನ ಮನಮೋಹನ ಸಿಂಗ್ ಅವರೇ ಆಗಿದ್ದಾರೆ. ಜಾಗತೀಕರಣ ಎಂಬ ಸಂಸ್ಕೃತಿಹೀನ ಶುದ್ಧ ವ್ಯಾಪಾರಿ ಕಾರ್ಯಕ್ರಮದ ಉದ್ಘಾಟನೆಯ ಮೂಲಕ ಸೃಷ್ಟಿಸಿದ ಈ ತಣಿಯದ ದಾಹದ ಹೊಸ ಮಧ್ಯಮ ವರ್ಗವನ್ನು ಬಿಜೆಪಿ ತನ್ನೆಡೆಗೆ ಸೆಳೆದುಕೊಂಡದ್ದೇ ತನ್ನ ಹಿಂದುತ್ವದ ಆಧಾರ ಸ್ತಂಭವಾದ ಬಲು ರೂಕ್ಷವಾದ ದೇಶಭಕ್ತಿಯ ಹುಚ್ಚುಹೊಳೆಯನ್ನು ಸೃಷ್ಟಿಸುವ ಮೂಲಕ. ಸೋಲಿನ ಭಾರದಿಂದ ತತ್ತರಿಸಿ ಬದುಕುಳಿಯಲು ಏದುಸಿರು ಬಿಡುತ್ತಿರುವ ಕಾಂಗ್ರೆಸ್ ಇದನ್ನರಿತರೆ ಮಾತ್ರ ತನ್ನನ್ನು ತಾನು ಪುನರನ್ವೇಷಿಸಿಕೊಳ್ಳಬಹುದು. ಒಂದು ಕಾಲದಲ್ಲಿ ದೇಶಪ್ರೇಮಕ್ಕೆ ಇನ್ನೊಂದು ಹೆಸರಾಗಿ ಅದರ ಸುತ್ತಲೇ ರಾಷ್ಟ್ರ ನಿರ್ಮಾಣದ ಒಂದು ಖಚಿತ ಸಿದ್ಧಾಂತವನ್ನು ಕಟ್ಟಿಕೊಂಡು ಬಹುಕಾಲ ಜನಪ್ರೀತಿ ಗಳಿಸಿದ್ದ ಕಾಂಗ್ರೆಸ್-ತನ್ನ ಟೀಕಾಕಾರರ ಎಚ್ಚರಿಕೆಯ ಮಾತುಗಳನ್ನು ನಿರ್ಲಕ್ಷಿಸುತ್ತಾ- ಆ ಜನಪ್ರೀತಿಯನ್ನು ದುರುಪಯೋಗಪಡಿಸಿಕೊಂಡು ಕ್ರಮೇಣ ಭ್ರಷ್ಟರ, ಪುಂಡು ಪೋಕರಿಗಳ ಮತ್ತು ಅವಕಾಶವಾದಿಗಳ ಪಕ್ಷವಾಗಿ ಅವನತಿಗೊಂಡು ಇದೀಗ ಅವಶೇಷ ರೂಪ ತಾಳಿರುವುದು ಇತಿಹಾಸ. ಆದರೆ ಬಿಜೆಪಿ ಸರ್ವಾಂತರ್ಯಾಮಿಯಾಗಿ ಬೆಳೆಯುತ್ತಾ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಜೀವಾಳವಾದ ಬಹುತ್ವ ಮತ್ತು ಸಾಂಸ್ಕೃತಿಕ ವೈವಿಧ್ಯಗಳ ರಕ್ಷಣೆಯ ಕೊಡೆಯಂತಿರುವ ಒಕ್ಕೂಟ ತತ್ವವನ್ನು ನಿಧಾನವಾಗಿ ನಾಶಮಾಡತೊಡಗಿರುವ ಈ ಸಂದರ್ಭದಲ್ಲಿ ಈ ಮೌಲ್ಯಗಳ ರಕ್ಷಕನಾಗಿ ಕಾಂಗ್ರೆಸ್‌ನ ಉಳಿವು, ಪುನರುಜ್ಜೀವನ ದೇಶಕ್ಕೆ ಅನಿವಾರ್ಯವಾಗಿದೆ.

ಹಾಗೆ ನೋಡಿದರೆ ಈ ರಕ್ಷಕ ಪಾತ್ರ ಮಾತ್ರ ಅದನ್ನು ಜನರಿಗೆ ಬಿಜೆಪಿಯಿಂದ ಭಿನ್ನವಾಗಿ ಮತ್ತು ಹೊಚ್ಚಹೊಸದಾಗಿ ಕಾಣಿಸುವಂತೆ ಮಾಡಬಲ್ಲ ಮಂತ್ರದಂಡವಾಗಿದೆ. ಕಾಂಗ್ರೆಸ್‌ಗೆ ಈಗ ದಿಕ್ಕು ಬದಲಿಸುವ ಕಾಲ. ತನ್ನ ಮೂಲವನ್ನು ಹುಡುಕಿಕೊಂಡು ಹೋಗುವ ಕಾಲ. ಅದು ಮತ್ತೆ ತಾನು ಕೈಬಿಟ್ಟ ಮಹಾತ್ಮ ಗಾಂಧಿಯವರ ಪರಂಪರೆಯತ್ತ ಮರಳಬೇಕಿದೆ. ಅದರಲ್ಲಿ ವಿವೇಕಾನಂದ, ನೆಹರೂ, ಪಟೇಲ್, ಲೋಹಿಯಾ, ಅಂಬೇಡ್ಕರ್ ಎಲ್ಲರೂ ಹದವಾಗಿ ಸೇರಿರುತ್ತಾರೆ. ಇದಕ್ಕೆ ಮುಖ್ಯವಾಗಿ ಪಕ್ಷ, ಅಭಿವೃದ್ಧಿಯ ದರದ ಹುಚ್ಚನ್ನು ತೊರೆದು ಜನರನ್ನು ಶಾಂತಿ-ಸಮಾನತೆ ಮತ್ತು

ಸಮತೋಲನಗಳತ್ತ ಒಯ್ಯುವ ಒಂದು ಮಿತಿ ಇರುವ ಸರಳ ಸಭ್ಯ ಜೀವನ ಮಟ್ಟದ ಆಶಯವನ್ನು ಜನಮನದಲ್ಲಿ ಬಿತ್ತುವ ಮಿಶನರಿ ಕೆಲಸ ಆರಂಭಿಸಬೇಕಿದೆ. ಇದು ಈಗ ಪಕ್ಷ ಇರುವ ಸ್ಥಿತಿಯಲ್ಲಿ ಕಷ್ಟ ಎಂಬುದು ನಿಜ. ಆದರ ಉಸಿರು ಉಳಿಸಿಕೊಳ್ಳುವ ಮತ್ತು ಕಳೆದ ಐದು ವರ್ಷಗಳಲ್ಲಿ ನಮ್ಮ ಆರ್ಥಿಕತೆಯನ್ನು ಅಸ್ತವ್ಯಸ್ತಗೊಳಿಸಿಯೂ ಮೋದಿ ಈಗ ಹಾರಿಬಿಡಲೆತ್ನಿಸಿರುವ ಮೂರು ಟ್ರಿಲಿಯನ್ ರೂ. ಗಳ ಆರ್ಥಿಕತೆಯ ಯೋಜನೆಯ ಹುಸಿ ಬಲೂನಿನ ಅನಾಹುತಗಳನ್ನು ಜನರಿಗೆ ಮನದಟ್ಟು ಮಾಡಿ ತನ್ನ ಹೊಸ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಅದು ದೊಡ್ಡ ತ್ಯಾಗವನ್ನೇ ಮಾಡಬೇಕಿದೆ. ಈವರೆಗೆ ಅದರ ನಾಯಕರು ಸಂಗ್ರಹಿಸಿಟ್ಟುಕೊಂಡಿರುವ ಎಲ್ಲ ರೀತಿಯ ಕೊಬ್ಬನ್ನೂ ಇಳಿಸಿಕೊಳ್ಳಬೇಕಿದೆ. ಸರಳತೆ, ಸಮಾನತೆ ಮತ್ತು ನೆಮ್ಮದಿ ಅದರ ಬೀಜ ಮಂತ್ರಗಳಾಗಬೇಕಿದೆ. ನಮ್ಮ ಭೂಮಿಯನ್ನು ದುರಂತದ ಅಂತ್ಯಕ್ಕೆ ಒಯ್ದಿರುವ ನಮ್ಮ ಅಭಿವೃದ್ಧಿಯ ಅನಾಹುತಗಳ ಅರಿವೇ ಈ ಜನಾಂದೋಲನಕ್ಕೆ ದಾರಿದೀಪವಾಗಬೇಕಿದೆ. ನಾವು ಒಪ್ಪಲಿ ಬಿಡಲಿ, ಮೋದಿಯವರು ದೇಶದ ವಿಷಯದಲ್ಲಿ ಜನಮನದಲ್ಲಿ ಬಿತ್ತಿರುವ ಆದರ್ಶಗಳಿಗೆ ಇವು ಮಾತ್ರ ನಿಜ ಸವಾಲಾಗಬಲ್ಲವು. ನಿಧಾನವಾಗಿಯಾದರೂ; ಆದರೆ ಆಳದಲ್ಲಿ, ಖಚಿತವಾಗಿ.

ಇದಕ್ಕೆ ಪಕ್ಷವನ್ನು ಸಿದ್ಧಪಡಿಸಲು ಕಾಂಗ್ರೆಸ್ ಬಿಜೆಪಿಯಿಂದಲೇ ಹಲವು ಪಾಠಗಳನ್ನು ಕಲಿಯಬೇಕಿದೆ, ಪಕ್ಷವನ್ನು ಹೊಸ ಸಾಹಸಕ್ಕೆ ಬೌದ್ಧಿಕವಾಗಿ ಸಿದ್ಧಪಡಿಸಲು ತನ್ನ ಸೇವಾದಳವನ್ನು ಪುನರ್ರೂಪಿಸಬೇಕಿದೆ. ಇದಕ್ಕಾಗಿ ಚೇಲಾ 'ಚಿಂತಕ'ರ ಬದಲಾಗಿ ಸ್ವತಂತ್ರ ಬುದ್ಧಿಯ ಚಿಂತಕರನ್ನು ಗುರುತಿಸಿ ಅವರದೊಂದು ಚಾವಡಿ ಮಾಡಿ ಈಗ ತುಕ್ಕು ಹಿಡಿದು ಕಿಸಬಾಯಿ ದಾಸಗಳಾಗಿ ನಾ.ಮಾತ್ರವಾಗಿ ಉಳಿದಿರು ಯುವ, ವಿದ್ಯಾರ್ಥಿ, ಮಹಿಳಾ, ಕಾರ್ಮಿಕ ಇತ್ಯಾದಿ ಅಂಗ ಸಂಸ್ಥೆಗಳ ಬೌದ್ಧಿಕ ಮಟ್ಟವನ್ನು ಸುಧಾರಿಸಿ ಅವು ಜನರ ವಿಶ್ವಾಸಕ್ಕೆ ಪಾತ್ರವಾಗುವಂತೆ ಪರಿವರ್ತಿಸಬೇಕಿದೆ. ಇದು ಬಹು ಬಹು ದೊಡ್ಡ ಕೆಲಸವೇ, ಒಮ್ಮೆಗೇ ನೋಡಿದರೆ ಅಸಾಧ್ಯವೆಂಬಂತೆ ಕಾಣುವ ಸಾಹಸವೇ. ಆದರೆ ದೇಶ ಎದುರಿಸುತ್ತಿರುವ ರಾಜಕೀಯ ದುರಂತದ ಸವಾಲು ಅಷ್ಟು ಬೃಹತ್ತಾಗಿದೆ. ದೇಶ ಕಟ್ಟಿದ ಕಾಂಗ್ರೆಸ್ ಅದನ್ನು ಈಗ ದುರಂತದ ಅಂಚಿಗೆ ತಂದು ನಿಲ್ಲಿಸಿರುವ ಪಾಪ ಪರಿಹಾರಕ್ಕಾದರೂ ಪ್ರಾಯಶ್ಚಿತ್ತ ರೂಪವಾಗಿ ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕಿದೆ. ಸೋಲು ಗೆಲವುಗಳು ಇದ್ದದ್ದೇ ಎಂದು ಎಂದಿನಂತೆ ಆಕಳಿಸುತ್ತಾ ಮತ್ತೆ ಅವಕಾಶಕ್ಕಾಗಿ ಆಡಳಿತ ಪಕ್ಷದ ತಪ್ಪಿಗಾಗಿ ಹದ್ದಿನಂತೆ ಕಾಯುತ್ತಾ ಕೂತರೆ ಆ ಅವಕಾಶ ಎಂದೂ ಬರದ ಸಾಧ್ಯತೆ ಇಂದು ಎದುರಾಗಿದೆ, ನೆನಪಿರಲಿ!

## ಕರ್ನಾಟಕದ ಆತಂಕಕಾರಿ ರಾಜಕೀಯ ಸ್ಥಿತಿ

ಕರ್ನಾಟಕದ ಸ್ಥಿತಿ ನೋಡಿದರೆ ಭಯವಾಗುತ್ತದೆ. ಈ ಸಮ್ಮಿಶ್ರ ಸರ್ಕಾರ ಬದುಕಲೂ ಒಲ್ಲದೆ ಸಾಯಲೂ ಒಲ್ಲದೆ ಜನರ ಶಾಪಕ್ಕೆ ತುತ್ತಾಗುತ್ತಿರುವ ರೀತಿ ಕಳವಳಕಾರಿಯಾಗಿದೆ. ಈ ಸರ್ಕಾರದ ಅಡಿಪಾಯವೇ ದುರ್ಬಲವಾಗಿದೆ. ಮೊದಲ ದೌರ್ಬಲ್ಯವೆಂದರೆ ಚುನಾವಣೆಗಳಲ್ಲಿ ಜನರಿಂದ ನಿರ್ಣಾಯಕವಾಗಿ ತಿರಸ್ಕೃತವಾದ ಮತ್ತು ಪರಸ್ಪರ ಕತ್ತಿ ಮಸೆವ ಚರಿತ್ರೆ ಇರುವ ಎರಡು ಪಕ್ಷಗಳು ಯಾವುದೇ ಘನ ಜನಪರ ನಿರೂಪಣೆಯಿಲ್ಲದೆ ಮೂರನೆಯ ಪಕ್ಷವೊಂದನ್ನು ಅಧಿಕಾರದಿಂದ ದೂರವಿಡುವ ಏಕೈಕ ಅಧಿಕಾರ ರಾಜಕೀಯ ಕಾರಣಕ್ಕಾಗಿ ಒಂದುಗೂಡಿರುವುದು. ಇದು ನೈತಿಕವಾಗಿ ಸರಿಯಿಲ್ಲದಿದ್ದರೂ ನಮ್ಮ ಸಂವಿಧಾನದ ಪ್ರಕಾರ ತಾಂತ್ರಿಕವಾಗಿ ಸರಿಯಿದೆ ಎಂದು ಒಪ್ಪಿಕೊಂಡರೂ ದೊಡ್ಡ ಪಕ್ಷವೊಂದು ಗಾತ್ರದಲ್ಲಿ ತನ್ನ ಅರ್ಧದಷ್ಟಿರುವ ಪಕ್ಷಕ್ಕೆ ಸರ್ಕಾರದ ನಾಯಕತ್ವ ಬಿಟ್ಟುಕೊಟ್ಟಿರುವುದು ಎರಡನೆಯ ದೌರ್ಬಲ್ಯವಾಗಿದೆ. ಇದನ್ನು ಕಾಂಗ್ರೆಸ್‌ನ ಉನ್ನತ ನಾಯಕತ್ವ ಸ್ಥಳೀಯ ನಾಯಕತ್ವದೊಂದಿಗೆ ಸಮಾಲೋಚಿಸದೆ ಮೇಲಿಂದ ಹೇರಿತು ಮತ್ತು ಅದನ್ನು ರಾಜ್ಯ ನಾಯಕತ್ವ ಬಾಯಿ ಮುಚ್ಚಿಕೊಂಡು ಒಪ್ಪಿತು ಎಂಬುದು ಈ ಸರ್ಕಾರ ರಚನೆಯ ಅಡಿಪಾಯದ ಇನ್ನೊಂದು ಸಡಿಲ ಕಲ್ಲಾಗಿದೆ ಮತ್ತು ಅದಕ್ಕಿಂತ ಮುಖ್ಯವಾಗಿ ಕಾಂಗ್ರೆಸ್ ಒಂದು ಪಕ್ಷವಾಗಿ ಯಾವ ಸ್ಥಿತಿಗೆ ತಲುಪಿದೆ ಎಂಬುದರ ದ್ಯೋತಕವಾಗಿದೆ. ಇವೇ ಇಂದು ಈ ಸರ್ಕಾರದ ನಿರಂತರ ಅಸ್ಥಿರ ಸ್ಥಿತಿಗೆ ಕಾರಣವಾಗಿರುವುದು. ಮತ್ತು ಈ ಅಸ್ಥಿರತೆ ಅನೇಕ ಅವಿವೇಕದ ನೀತಿ ನಿರ್ಧಾರಗಳಿಗೂ ಕಾರಣವಾದಂತಿದೆ. ನ್ಯಾಯಾಲಯಗಳ ಆದೇಶಗಳನ್ನು ಧಿಕ್ಕರಿಸಿ ೧೯೯೮ರ ಕೆಪಿಎಸ್‌ಸಿ ಅಕ್ರಮ ನೇಮಕಾತಿಗಳನ್ನು ಸಕ್ರಮಗೊಳಿಸುವ, ಜಿಂದಾಲ್‌ಗೆ ಗಣಿಭೂಮಿ ಮಾರಾಟ ಮಾಡುವ, ನಾಡಿನ ಸಾಂಸ್ಕೃತಿಕ ಬಂಡವಾಳದ ಸಂರಕ್ಷಣೆಯ ನೆದರೇ ಇಲ್ಲದಂತೆ ಸರ್ಕಾರಿ ಕನ್ನಡ ಶಾಲೆಗಳನ್ನು ಹಂತಾನುಹಂತವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವ ಮತ್ತು ಕೋಟ್ಯಾಂತರ ರೂಪಾಯಿಗಳ ವೆಚ್ಚದ ಎತ್ತಿನಹೊಳೆ ಯೋಜನೆಯ ನಿರಾಶಾದಾಯಕ ಫಲಗಳು ನಿಚ್ಚಳವಾಗಿ ಕಾಣುತ್ತಿರುವ ಹೊತ್ತಿನಲ್ಲೂ ಬೆಂಗಳೂರು ನಗರದ ರಾಕ್ಷಸ ದಾಹವನ್ನು ಹಿಂಗಿಸಲು ೪೦೦ ಕಿಮೀ. ದೂರದಿಂದ ಸಾವಿರಾರುಕೋಟಿ ರೂ. ಗಳ ವೆಚ್ಚದಲ್ಲಿ ಲಿಂಗನಮಕ್ಕಿ ಜಲಾಶಯದಿಂದ ನೀರು ತರುವ ಪರಿಸರ ವಿನಾಶಕ ಮತ್ತು ಕಾಮಗಾರಿ ಕಾಂಟ್ರ್ಯಾಂಕ್ಟುಗಳ ದಂಧೆಯ ಯೋಜನೆಯ ಸಿದ್ಧತೆ ನಡೆಸಿರುವುದು ಇದಕ್ಕೆ ಕೆಲವು ಉದಾಹರಣೆಗಳು.

ಅದೇನೇ ಇರಲಿ, ರಾಷ್ಟ್ರದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಈ ಸರ್ಕಾರ ಉಳಿಯಬೇಕು ಎಂದು ಪ್ರಜಾಪ್ರಭುತ್ವದ ಉದಾರ ಮೌಲ್ಯಗಳಲ್ಲಿ ನಂಬಿಕೆ ಇರುವ ಜನರ ಆಶಯವಾಗಿದೆ. ಈ ಸರ್ಕಾರದಲ್ಲಿ ಭಾಗವಹಿಸಿರುವ ಎರಡೂ ಪಕ್ಷಗಳ ನಾಯಕರು ಈ ಆಶಯವನ್ನು ಗೌರವಿಸುವುದಾದರೆ ಈ ಸರ್ಕಾರಕ್ಕೊಂದು ಸ್ಥಿರತೆ ಮತ್ತು ಗೌರವಾನ್ವಿತತೆ ತರುವ ತುರ್ತು ಪ್ರಯತ್ನ ಮಾಡಬೇಕಿದೆ. ಅದೆಂದರೆ ಕಾಂಗ್ರೆಸ್‌ನ ಓರ್ವ ಗೌರವಾನ್ವಿತ ಹಿರಿಯ ನಾಯಕರನ್ನು ಈ ಸರ್ಕಾರದ ಮುಖ್ಯಮಂತ್ರಿಯನ್ನಾಗಿ ಮಾಡುವುದು. ಇದಕ್ಕೆ ಬಹುಶಃ ಮಲ್ಲಿಕಾರ್ಜುನ ಖರ್ಗೆಯವರಿಗಿಂತ ಒಳ್ಳೆಯ ಅಭ್ಯರ್ಥಿ ಇರಲಾರರು. ಅವರೀಗ ಲೋಕಸಭಾ ಚುನಾವಣೆಯಲ್ಲಿ ಸೋತಿರುವರಾದರೂ, ರಾಜ್ಯದ ಜನತೆಯ ಕಣ್ಣಲ್ಲಿ ಸಾಕಷ್ಟು ಗೌರವ ಉಳಿಸಿಕೊಂಡ ನಾಯಕರಾಗಿದ್ದಾರೆ. ಅವರ ಮೇಲಿರುವ ಕುಟುಂಬ ರಾಜಕಾರಣದ ಟೀಕೆಯನ್ನು ಈಗ ನಿವಾರಿಸಿಕೊಳ್ಳಲಾಗುವಂತೆ ಅವರ ಮಗ ಪ್ರಿಯಾಂಕ್ ಖರ್ಗೆಯವರಿಂದ ರಾಜೀನಾಮೆ ಕೊಡಿಸಿ ಆ ಕ್ಷೇತ್ರದಿಂದಲೇ ಹಿರಿಯ ಖರ್ಗೆಯವರನ್ನು ಸರ್ಕಾರದ ಎರಡೂ ಪಕ್ಷಗಳೂ ಸೇರಿ ಒಮ್ಮತದಿಂದ ಗೆಲ್ಲಿಸಿಕೊಂಡು ಬಂದು ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಾದರೆ ಈ ಸರ್ಕಾರಕ್ಕೊಂದು ಹೊಸ ಬಿಂಬ ಮತ್ತು ಸ್ಥಿರತೆ ದೊರಕಿ ಉಳಿಯಬಹುದು.

**–ಸಂಪಾದಕ**


**ಹೊಸ ಮನುಷ್ಯ ವಿಶೇಷ ಸಂಚಿಕೆ-೨೦೧೯**

**ನಮ್ಮ ಆಗಸ್ಟ್ ಸಂಚಿಕೆ ಹೆಚ್ಚಿನ ಪುಟಗಳೊಂದಿಗೆ ವಾರ್ಷಿಕ ವಿಶೇಷ ಸಂಚಿಕೆಯಾಗಿ ಹೊರಬರಲಿದೆ!**

**ವಿಶೇಷ ಸಂಚಿಕೆಯ ವಿಶೇಷಗಳು:**

ಗಾಂಧಿ ವಿದ್ವಾಂಸ ಅಕೀಲ್ ಬಿಲ್ಗ್ರಾಮಿ ಅವರೊಂದಿಗೆ ಮಾತುಕತೆಯ ಅನುವಾದ, **ಜಿ.ರಾಜಶೇಖರ್** ಅವರಿಂದ –ವಿಲ್ ಡುರ್ರ್ಯಾಟ್ ಅವರ 'ಎ ಕೇಸ್ ಫಾರ್ ಇಂಡಿಯಾ ಪುಸ್ತಕದ ಒಂದು ಅವಲೋಕನ, **ಡಾ.ರಾಜೇಂದ್ರ ಚೆನ್ನಿ** ಅವರಿಂದ – ಈ ಭೂಮಿ, ಈ ಜೀವರಾಶಿ, ಈ ನಾಗರೀಕತೆ ಉಳಿಯಲು... ಹಿರಿಯ ಮಾನವ ಶಾಸ್ತ್ರಜ್ಞ **ಸಮರ್ ಬಾಗ್ಚಿ** ಅವರ ಲೇಖನದ ಅನುವಾದ, **ಟಿ.ಎಲ್ ರೇಖಾಂಬ** ಅವರಿಂದ – 'ಗಾಂಧಿಯವರ ಪ್ರೇಮ ಪ್ರಸಂಗ': **ಡಿ.ಎಸ್. ನಾಗಭೂಷಣ** ಅವರ 'ಗಾಂಧಿ ಕಥನ'ದಿಂದ ಆಯ್ದ ಒಂದು ಅಧ್ಯಾಯ – ಗಾಂಧಿ–ಅಂಬೇಡ್ಕರ್ ಸಂವಾದ ಒಂದು ವಿಭಿನ್ನ ನೋಟ: **ಸುಹಾಸ್ ಪಲ್ಶೀಕರ್** ಅವರ ಲೇಖನದ ಅನುವಾದ, **ಎಂ. ರಾಜು** ಅವರಿಂದ – ದ್ವೈತ–ಅದ್ವೈತ–ವಿಶಿಷ್ಟಾದ್ವೈತಗಳ ಸುತ್ತಮುತ್ತ, **ಲಕ್ಷ್ಮೀಶ ತೋಳ್ಪಾಡಿ**ಯವರ ವಿಶಿಷ್ಟ ಚಿಂತನೆ – **ಪ್ರೊ. ಎಂ.ಎಸ್. ಶ್ರೀರಾಮ್** ಅವರ ಕಥೆ – **ಎಚ್.ಎಸ್. ಶಿವಪ್ರಕಾಶ್, ಚಂದ್ರಶೇಖರ ತಾಳ್ಯ, ಸುಬ್ಬು ಹೊಲೆಯಾರ್, ಸವಿತಾ ನಾಗಭೂಷಣ, ವಿನಯಾ ಒಕ್ಕುಂದ, ಜ.ನಾ ತೇಜಶ್ರೀ** ಅವರ ಕವನಗಳು – ಐರೋಪ್ಯ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಕಲಿಕೆಯ ಆಸಕ್ತಿ ವೈವಿಧ್ಯ ಕುರಿತು. ಪ್ರೊ. **ಬಿ.ಎ. ವಿವೇಕ ರೈ** ಅವರಿಂದ ವಿಶೇಷ ಲೇಖನ – ಬದಲಾಗುತ್ತಿರುವ ನಮ್ಮ ಸಾಹಿತ್ಯದ ನೆಲೆಗಳು ಕುರಿತ ಒಂದು ವಿಶ್ಲೇಷಣೆ, **ಪ್ರೊ. ಎಚ್. ಎಸ್. ರಾಘವೇಂದ್ರ ರಾವ್** ಅವರಿಂದ – 'ನವೋದಯದ ನಂದನವನದಲ್ಲಿ': **ಕೆ. ಸತ್ಯನಾರಾಯಣ** ಅವರ ಒಂದು ಹಿನ್ನೋಟ ಕುಮಾರವ್ಯಾಸ –ಕೋಳಿವಾಡಕ್ಕೊಂದು ಭೇಟಿ: **ಡಾ. ಹನೂರು ಕೃಷ್ಣಮೂರ್ತಿ**ಯವರ ಪ್ರವಾಸ ಕಥನ – ವಿಜಯೇಂದ್ರ ಪಾಟೀಲರ ವಿಶಿಷ್ಟ ವಿನೋದ ಬರಹ – 'ಹೊಸ ಮನುಷ್ಯ'ದ ವರ್ಷದ ಸಂಚಿಕೆಗಳ ಒಂದು ಹಿನ್ನೋಟ, **ಡಾ. ಗೀತಾ ವಸಂತ** ಅವರಿಂದ – ಎಂದಿನ ಸಂಪಾದಕೀಯ ಟಿಪ್ಪಣಿಗಳು, ಪುಸ್ತಕಾವಲೋಕನಗಳು, ನಿಮ್ಮ ಪತ್ರಗಳು ಇತ್ಯಾದಿ.

ಈ ಸಂಚಿಕೆಗೆ ಶುಭ ಕೋರಿ ಪ್ರಕಟಣೆಗೆ ನೆರವಾಗಬಯಸುವ ಓದುಗರು ಕನಿಷ್ಟ ಐದು ನೂರು ರೂಪಾಯಿಗಳಿಗೂ ಮೇಲ್ಪಟ್ಟ ಧನ ಸಹಾಯ ಮಾಡಬಹುದು. ಅಂಥವರ ಹೆಸರುಗಳನ್ನು ಶುಭ ಕೋರಿದವರ ಪಟ್ಟಿಯಲ್ಲಿ ಸೇರಿಸಿ ಸ್ಮರಿಸಲಾಗುವುದು.

**ದಯವಿಟ್ಟು ಸಂಪರ್ಕಿಸಿ: 94492 42284**

# ಹಳೆಯ ವರಸೆಗಳು ನಡೆಯದ ಈ ಹೊಸ ಭಾರತ

(೨೦೧೯ರ ಲೋಕಸಭಾ ಚುನಾವಣಾ ಫಲಿತಾಂಶಗಳ ಒಂದು ತಳ ವಿಶ್ಲೇಷಣೆ)

**-ಪ್ರೊ. ಪುರುಷೋತ್ತಮ ಅಗರ್‌ವಾಲ್**



**ಭೂ**ಪಾಲ್ ಕ್ಷೇತ್ರದ ಬಿಜೆಪಿಯ ವಿಜೇತ ಲೋಕಸಭಾ ಅಭ್ಯರ್ಥಿ ಪ್ರಜ್ಞಾ ಠಾಕೂರ್ ಚುನಾವಣಾ ಎಣಿಕೆ ಕೇಂದ್ರಕ್ಕೆ ಕೊನೆಯ ಹಂತದಲ್ಲಿ ಭೇಟಿ ನೀಡಿದಾಗ ಆಕೆಯನ್ನು 'ಗೋಡ್ಸೆ ಚಿರಾಯುವಾಗಲಿ' ಎಂಬ ಘೋಷಣೆಗಳೊಂದಿಗೆ ಸ್ವಾಗತಿಸಲಾಯಿತು. ಆದರೆ ಈಕೆ 'ಗೋಡ್ಸೆ ಎಂದೆಂದಿಗೂ ದೇಶಭಕ್ತನೇ' ಎಂದು ಆತನ ಪರ ವಹಿಸಿದ್ದು ಪ್ರಧಾನಿ ಮೋದಿ ಅವರನ್ನು ಎಷ್ಟು ವ್ಯಗ್ರಗೊಳಿಸಿದೆ ಎಂದರೆ ಅವರು ಆಕೆಯನ್ನು ಎಂದೂ ತಮ್ಮ ಹೃದಯದಿಂದ ಕ್ಷಮಿಸುವುದಿಲ್ಲ ಎಂದು ತಿಳಿಸಿದ್ದಾರೆ. ಪ್ರಜ್ಞಾ ಠಾಕೂರ್ ಗೋಡ್ಸೆ ಪರ ವಹಿಸಿದಕ್ಕೆ ನಾನಾ ದಿಕ್ಕುಗಳಿಂದ ಸರಿಯಾದ ಪ್ರತಿಕ್ರಿಯೆಗಳೆ ಬಂದಿವೆ. ಹಾಗೆಯೇ ಗಾಂಧಿಯ ಹತ್ಯೆ ಮಾಡಿದಕ್ಕಾಗಿ ನೇಣಿಗೇರಿಸಲ್ಪಟ್ಟ ಗೋಡ್ಸೆಯ ಕೃತ್ಯವನ್ನು ಸಂಪೂರ್ಣ ಸಮರ್ಥಿಸುವ ಪ್ರಚಂಡ ಧ್ವನಿಗಳು ಕೂಡಾ ದೊಡ್ಡ ಮಟ್ಟದಲ್ಲೆ ಕೇಳಿಬಂದವು.

ಇದು ಸಂಘಪರಿವಾರದಲ್ಲಿ ಚಾಲ್ತಿಯಲ್ಲಿರುವ ಒಂದು ಬಗೆಯ ಸಂಜ್ಞಾ ಭಾಷೆ ಮತ್ತು ಸಂವಹನದ ಪರಿಣಾಮವೂ ಹೌದು. ರಾಷ್ಟ್ರದ ಬಗ್ಗೆ ಸಂಘಪರಿವಾರದ ಇಂತಹ ಎಲ್ಲರ ಕಲ್ಪನೆ ಒಂದೇ ಆಗಿರುವುದರಿಂದ ಈ ಬಗೆಯ ಸಂಜ್ಞಾ ಭಾಷೆ ಯಶಸ್ವಿಯಾಗಿ ಕೆಲಸ ಮಾಡುತ್ತದೆ. ಸಂಘಪರಿವಾರದ ಮನೋಭೂಮಿಕೆ ಮತ್ತು ಸಂಘಟನೆಗೆ ಮೋದಿ-ಅಮಿತ್ ಷಾ ಜೋಡಿ ಹೊಸಕಾಲದ ಕಾರ್ಪೊರೆಟ್ ದಕ್ಷತೆ ಮತ್ತು ತೀವ್ರ ಆಕ್ರಮಣಕಾರಿ ಪ್ರವೃತ್ತಿಯನ್ನು ಒದಗಿಸಿದೆ. ಹಾಗಿದ್ದರಿಂದಲೇ ಮೋದಿಯವರು ೨೦೧೪ರಲ್ಲಿ ತಮ್ಮ ಪ್ರಥಮ ಅವಧಿಯ ಅಧಿಕಾರವನ್ನು 'ಐದು ತಲೆಮಾರುಗಳ ತ್ಯಾಗ'ವನ್ನು ಸ್ಮರಿಸುತ್ತಾ ಸ್ವೀಕರಿಸಿದ್ದು ಸುಖಾಸುಮ್ಮನೆ ಅಲ್ಲ. ೧೯೨೫ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಮೋದಿಯ ೨೦೧೪ರ ವಿಜಯಕ್ಕೆ ಕಾಣಿಕೆ ಸಲ್ಲಿಸಿದ್ದಕ್ಕಾಗಿ ಮೋದಿ ಸಲ್ಲಿಸಿದ ಗೌರವ ಇದಾಗಿತ್ತು. ಈಗ ಇದು ಐದು ವರ್ಷಗಳ ಸಾಧಾರಣ ಕಾರ್ಯನಿರ್ವಹಣೆಯ ಹೊರತಾಗಿಯೂ ಇನ್ನೂ ಹೆಚ್ಚು ಜನಬೆಂಬಲದೊಂದಿಗೆ ನವೀಕರಿಸಲ್ಪಟ್ಟಿದೆ.

ಪ್ರತಿಪಕ್ಷಗಳಿಗೆ ಮತ್ತು ಮೋದಿ ವಿರೋಧಿಗಳಿಗೆ ೨೦೧೪ರ ವಿಜಯದ ದೀರ್ಘಾವಧಿ ಪರಿಣಾಮ ಸರಿಯಾಗಿ ಅರ್ಥವಾಗಲೇ ಇಲ್ಲ. ಅದು ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಇರಬಹುದು ಅಥವಾ ಎಲೆಕ್ಟ್ರಾನಿಕ್ ಮತ್ತು ಸಾಮಾಜಿಕ ಜಾಲತಾಣದ ಮೂಲಕ ತಮ್ಮ ತತ್ವವನ್ನು ಬೃಹತ್ ನೆಲೆಯಲ್ಲಿ ಪ್ರಚಾರ ಮಾಡಿದ್ದಿರಬಹುದು ಅಥವಾ ಮೋದಿಯವರು ನೆಹರೂ ಹೆಸರನ್ನು ಖಳತ್ವದೊಂದಿಗೆ ಬಹಳ ಪರಿಣಾಮಕಾರಿಯಾಗಿ ತಳಕು ಹಾಕಿದ್ದಿರಬಹುದು, ಎಲ್ಲವೂ ಬಹಳ ಎಚ್ಚರಿಕೆಯಿಂದ ರೂಪಿಸಿದ ಯೋಜನೆ ಆಗಿದ್ದವು. ಈ ಚುನಾವಣಾ ದಿಗ್ವಿಜಯವು ಕೇವಲ ಸರ್ಕಾರಗಳ ಬದಲಾವಣೆ ಆಗಿರಲಿಲ್ಲ. ಬದಲಾಗಿ ಅದು 'ಐದು ತಲೆಮಾರುಗಳು ಸತತವಾಗಿ ಮಾಡಿದ ಕೆಲಸದ ಪರಿಣಾಮ ಮತ್ತು ಸರ್ಕಾರಿ ಯಂತ್ರದ ಮೂಲಕ ಭಾರತದ ಪರಿಕಲ್ಪನೆಯನ್ನು ಬದಲಿಸುವ ಹಾಗೂ ಆ ಬದಲಾವಣೆಯನ್ನು ಬಲಪಡಿಸುವ ಮಹಾ ಕಾರ್ಯಾಚರಣೆಯ ಪ್ರಾರಂಭ' ಎಂದು ತಿಳಿಯಬೇಕು. ಈ ಬದಲಾವಣೆ ಸಹಜವೇನಲ್ಲ. ಅದು ಸಾವರ್ಕರ್ ಹೇಳಿದಂತೆ ರಾಜಕೀಯವನ್ನು ಹಿಂದುತ್ವಗೊಳಿಸುವ ಕಡೆಗೆ ಚಲಿಸುತ್ತಿರುವ ಪ್ರಯಾಣದ ಮಹತ್ವದ ಘಟ್ಟ. ಇಲ್ಲಿ ನಾವು ಗ್ರಹಿಸಬೇಕಾದುದೇನೆಂದರೆ - ಸಾವರ್ಕರ್ ಕಲ್ಪನೆಯ ಉಗ್ರ ಹಿಂದುತ್ವಕ್ಕೂ ಸ್ಥೂಲವಾದ, ಹಲವು ಗಡಿಗೆರೆಗಳ, ಬಹು ಸಮೂಹಗಳ ಹಿಂದೂ ಧರ್ಮಕ್ಕೂ ವ್ಯತ್ಯಾಸವಿದೆ. ಸಾವರ್ಕರ್ ಮತ್ತು ಸಂಘಪರಿವಾರವು ಪ್ರಯತ್ನಿಸುತ್ತಿರುವುದು ಜನರನ್ನು ಹೆಚ್ಚು ಧಾರ್ಮಿಕರನ್ನಾಗಿಸುವುದಲ್ಲ. ಬದಲಾಗಿ ಅವರನ್ನು ಉಗ್ರ ಹಿಂದೂ ರಾಷ್ಟ್ರೀಯತಾವಾದಿಗಳಾಗಿ ಪರಿವರ್ತಿಸುವುದು.

ಮೋದಿ ವಿರೋಧಿಗಳು ಈ ಅಂಶವನ್ನು ಅರ್ಥಮಾಡಿಕೊಳ್ಳಲೇ ಇಲ್ಲ. ಒಂದು ವೇಳೆ ಇದನ್ನವರು ಸರಿಯಾಗಿ ಅರ್ಥೈಸಿಕೊಂಡಿದ್ದರೆ ಅವರು ತಮ್ಮ ಕ್ಷುದ್ರ ಸ್ವಾರ್ಥ ಹಿತಾಸಕ್ತಿಗಳನ್ನು ಮೀರಿ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವುದಷ್ಟೆ ಅಲ್ಲ, ಬದಲಾಗಿ ಹೆಚ್ಚು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಒಳಗೊಳ್ಳುವ ಭಾರತದ ಅಗತ್ಯವನ್ನು ದೊಡ್ಡ ಮಟ್ಟದಲ್ಲಿ ಒತ್ತಿ ಹೇಳಬೇಕಾಗಿತ್ತು. ಬಿಜೆಪಿಯ ಅಭೂತಪೂರ್ವ ವಿಜಯಕ್ಕೆ ಬಹಳ ಮುಖ್ಯ ಕಾರಣ ಎಂದರೆ ಹೊಸ ಕಾಲದ ಹೆಮ್ಮೆಯ ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ ಮತ್ತು ಅದರ ಯಶಸ್ವಿ ಪ್ರತಿಪಾದನೆ. ಇದರೊಂದಿಗೆ ಟಿವಿ ಮಾಧ್ಯಮದವರ ಸಹಾಯದೊಂದಿಗೆ ಕಾಂಗ್ರೆಸ್ ಪಕ್ಷವನ್ನು ಈ ಬಗೆಯ ರಾಷ್ಟ್ರೀಯತೆಗೆ ವಿರೋಧಿ ಎಂದು ಬಿಂಬಿಸಿದ್ದಾಗಿತ್ತು. ಎಲ್ಲ ಕಾಲದಲ್ಲೂ ಜನ ಸಮುದಾಯಗಳಿಗೆ ಗತಕಾಲದೊಂದಿಗೆ ಒಂದು ಬಗೆಯ ಭಾವನಾತ್ಮಕ ಸಂಬಂಧವಿರುತ್ತದೆ ಮತ್ತು ಭವಿಷ್ಯದ ಬಗ್ಗೆ ಆತಂಕವಿರುತ್ತದೆ. ಇವೆರಡೂ ಅಂಶವನ್ನು ಭಿನ್ನ ಬಗೆಗಳಿಂದ ಅನುಸಂಧಾನ ಮಾಡಬಹುದು: ೧. ವಿಪರೀತ ದ್ವೇಷ ಹುಟ್ಟಿಸುವ ಆತಂಕಮಯ ರಾಷ್ಟ್ರೀಯತೆಯ ಉದ್ದೀಪನೆ ೨. ಪ್ರಜಾಪ್ರಭುತ್ವ ಮಾದರಿಯ ಎಲ್ಲರನ್ನು ಒಳಗೊಳ್ಳುವ ರಾಷ್ಟ್ರೀಯತೆಯ ಭಾವ. ಬಿಜೆಪಿ ಅಧಿಕಾರ ಹಿಡಿಯಲು ಅಪ್ಪಿಕೊಂಡಿದ್ದು ಮೊದಲನೆಯ ಮಾದರಿಯನ್ನು.

ನಮ್ಮ ಸ್ವಾತಂತ್ರ್ಯ ಚಳವಳಿ ಬಹಳ ವಿಶಿಷ್ಟವಾಗಿತ್ತು. ಅದು ವಸಾಹತುಶಾಹಿ ವಿರೋಧಿ ಭಾವವನ್ನು ಮತ್ತು ಜನರ ರಾಷ್ಟ್ರಪ್ರೇಮವನ್ನು ಹೆಚ್ಚು ಪ್ರಜಾಸತ್ತಾತ್ಮಕವಾದ ಮತ್ತು ಎಲ್ಲರನ್ನು ಒಳಗೊಳ್ಳುವ ರಾಷ್ಟ್ರೀಯತೆಯನ್ನಾಗಿ ನಿರೂಪಿಸಿತ್ತು. ದಾದಾ ಧರ್ಮಾಧಿಕಾರಿಯವರ ಒಂದು ಪದ ಬಳಸಬಹುದಾದರೆ ಭಾರತೀಯ ಸ್ವಾತಂತ್ರ್ಯ ಚಳವಳಿಯು 'ಮಾನವೀಯತೆಯ ಭಾರತೀಯತೆ' ಅಂದರೆ ಮಾನವೀಯತೆಯ ಆಯಾಮ ಇರುವ ಭಾರತೀಯತೆಯನ್ನು ಪ್ರತಿಪಾದಿಸಿತ್ತು. ಪ್ರತಿಗಾಮಿ ಶಕ್ತಿಗಳು ಈ ಬಗೆಯ ಉದಾರವಾದಿ ರಾಷ್ಟ್ರೀಯತೆಯನ್ನು ಒಪ್ಪಿರಲಿಲ್ಲ. ಆದ್ದರಿಂದ ನೆಹರೂ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರು ರಾಷ್ಟ್ರೀಯತೆಯಿಂದ ದೂರ ಉಳಿದಿರಲಿಲ್ಲ. ಬದಲಾಗಿ ಈ ಪ್ರತಿಗಾಮಿ ಶಕ್ತಿಗಳನ್ನು ಕೋಮುವಾದಿಗಳೆಂದು ತಿರಸ್ಕರಿಸಿ ಮಾನವೀಯತೆಯ ನೆಲೆಯ ಭಾರತೀಯತ್ವವನ್ನು ಪುರಸ್ಕರಿಸಿದ್ದರು.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎಂಟೂವರೆ ಕೋಟಿ ಜನ ಹೊಸ ಮತದಾರರು ಇದ್ದರು. ಈ ಯುವಕ ಯುವತಿಯರಿಗೆ ರಾಷ್ಟ್ರೀಯತೆಯ ಭಾವವನ್ನು ಉದ್ದೀಪಿಸಿದ್ದು ಯಾರು? ಮತ್ತು ಈ ಉಗ್ರ ಹಿಂದುತ್ವದ ರಾಷ್ಟ್ರೀಯತೆಗೆ ಪರ್ಯಾಯವನ್ನು ತೋರಿಸಿದ್ದು ಯಾರು? ಈ ಯುವ ಭಾರತೀಯರು ಬೆಳೆದು ಬಂದ ಶೈಕ್ಷಣಿಕ ವ್ಯವಸ್ಥೆ ಕೇವಲ 'ಉದ್ಯೋಗ ಮತ್ತು ಕೌಶಲ್ಯ'ಕ್ಕೆ ಮಾತ್ರ ಪ್ರಾಮುಖ್ಯತೆ ನೀಡುತ್ತಿದೆ.

ಇವರಿಗೆ ಚಾರಿತ್ರಿಕ ಮತ್ತು ಸಾಮಾಜಿಕ ಜ್ಞಾನ ಸಿಗುತ್ತಿರುವುದು ವಾಟ್ಸಪ್ ವಿಶ್ವವಿದ್ಯಾಲಯಗಳಿಂದ ಮಾತ್ರ. ಈ ವಾಟ್ಸಪ್ ವಿಶ್ವವಿದ್ಯಾಲಯದಲ್ಲಿ ಬಿಜೆಪಿ ಪ್ರಣೀತ ಉಗ್ರ ರಾಷ್ಟ್ರೀಯತೆಯ ಭಾವ ಮಾತ್ರ ನೈಜ ದೇಶಪ್ರೇಮದ ಮಾದರಿಯಾಗಿ ದೊರಕುತ್ತದೆ.

**ವ್ಯಂಗ್ಯವೆಂದರೆ, ರಾಷ್ಟ್ರೀಯ ಶೈಕ್ಷಣಿಕ ನೀತಿಯ ಮೂಲಕ ಶಿಕ್ಷಣವೆಂದರೆ ಮಾನವ ಸಂಪನ್ಮೂಲಗಳ ನಿರ್ವಹಣೆ ಎಂಬ ಮಟ್ಟಕ್ಕೆ ಅದನ್ನು ಕುಬ್ಜಗೊಳಿಸಿ, ಉದಾರವಾದಿ ಕಲಾ ಮತ್ತು ಮಾನವಿಕ ಶಿಸ್ತುಗಳನ್ನು ಎಲ್ಲ ಹಂತಗಳಲ್ಲಿ, ಅಂದರೆ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಲಯಗಳಲ್ಲಿ ಮೂಲೆಗುಂಪು ಮಾಡಿದ್ದು, ತನ್ನ ಅಲ್ಪ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷವೇ. ಅದರ ಫಲವನ್ನು ಈಗ ಅದಕ್ಕಿಂತ ಹೆಚ್ಚಾಗಿ ದೇಶ ಅನುಭೋಗಿಸುತ್ತಿದೆ. ಯಾವಾಗ ಕೋಟಿಗಟ್ಟಲೆ ಯುವಜನರು ತಮ್ಮ ಭಾಷೆ, ಚರಿತ್ರೆ ಮತ್ತು ಸಮಾಜದ ಬಗ್ಗೆ ಪ್ರಾಥಮಿಕ ಜ್ಞಾನದಿಂದ ವ್ಯವಸ್ಥಿತರಾಗಿ ವಂಚಿತರಾಗುತ್ತಾರೋ ಆಗ ಕೊಲೆಗಾರ ಗೋಡ್ಸೆಯನ್ನು ಪ್ರಚಂಡವಾಗಿ ಬೆಂಬಲಿಸುವುದನ್ನು ಬಿಟ್ಟು ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?**



**(ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಲೇಖಕ ಪುರುಷೋತ್ತಮ ಅಗರ್‌ವಾಲ್ ದೇಶೀ ಆಧುನಿಕತೆ ಕುರಿತು ವ್ಯಾಪಕವಾಗಿ ಬರೆದಿರುವ ವಿಶಿಷ್ಟ ವಿದ್ವಾಂಸರು)**

(ಕನ್ನಡಕ್ಕೆ: **ಟಿ. ಅವಿನಾಶ್**

(ಕೃಪೆ: **ಔಟ್‌ಲುಕ್**, ಜೂನ್ ೩, ೨೦೧೯)

ವೃತ್ತಿರಂಗಭೂಮಿಯ ಹಿರಿಯ ತಲೆ ಮಾಸ್ಟರ್ ಹಿರಣ್ಣಯ್ಯ, ಹಿರಿಯ ರಂಗಕರ್ಮಿ ಹಾಗೂ ಲೇಖಕ ಡಿ.ಕೆ ಚೌಟ ಮತ್ತು ಕವಿ ಎ.ಕೆ. ಹಂಪಣ್ಣ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ಸೂಚಿಸುತ್ತದೆ.-ಸಂ.



# ಗಾಂಧಿ ಮತ್ತು ಈ ಭೂಮಿ

**–ವಂದನಾ ಶಿವ**

ಎಲ್ಲರ ಅಗತ್ಯಗಳನ್ನು ಪೂರೈಸಲು ಈ ಭೂಮಿ ಸಾಕು. ಆದರೆ ಕೆಲವೇ ಜನರ ದುರಾಸೆಗೆ ಸಾಲದು. ಗಾಂಧಿ ಈ ರೀತಿ ತಮ್ಮ ಪ್ರಖ್ಯಾತ ಮಾತುಗಳಲ್ಲಿ ಪರಿಸರಜ್ಞಾನದ ಸಾರವನ್ನು ತೆರೆದಿಟ್ಟಿದ್ದಾರೆ.

ಗಾಂಧಿ ಗುರುತಿಸಿರುವಂತೆ ಪರಿಸರ ವ್ಯವಸ್ಥೆಯ ಸುಸ್ಥಿರತೆ ಮತ್ತು ಸಾಮಾಜಿಕ–ಆರ್ಥಿಕ ನ್ಯಾಯ ಒಂದೇ ನಾಣ್ಯದ ಎರಡು ಮುಖಗಳು. ಏಕೆಂದರೆ ನಾವು ಪರಸ್ಪರ ಸಂಬಂಧ ಹೊಂದಿರುವ ಜಗತ್ತಿನಲ್ಲಿ ಜೀವಿಸುತ್ತಿದ್ದೇವೆ ಮತ್ತು ಭೂಮಿಯೊಂದಿಗೆ ನಮ್ಮ ಸಂಬಂಧ ಕರುಣೆ ಮತ್ತು ಅಹಿಂಸೆಯ ತತ್ವವನ್ನು ಆಧರಿಸಿರಬೇಕೆಂದು ಹೇಳಿದ್ದಾರೆ.

ನಾವು ಸುಸ್ಥಿರವಲ್ಲದ ಉತ್ಪಾದನೆ ಮತ್ತು ಬಳಕೆಯ ಮಾದರಿಗಳನ್ನು ಅನುಸರಿಸಿದಾಗಲೆಲ್ಲಾ ಹಿಂಸೆಯಲ್ಲಿ ತೊಡಗಿಕೊಳ್ಳುತ್ತೇವೆ ಮತ್ತು ಹಿಂಸೆಗೆ ಇನ್ನಷ್ಟು ಪ್ರಚೋದನೆ ನೀಡುತ್ತೇವೆ. ಸುಸ್ಥಿರವಲ್ಲದ ಮಾದರಿ, ಪರಿಸರ ವ್ಯವಸ್ಥೆಯಲ್ಲಿನ ಇನ್ನೊಬ್ಬರ ಪಾಲನ್ನು ಕಸಿದುಕೊಳ್ಳುವಂತೆ ಮಾಡುತ್ತದೆ ಮತ್ತು ಪ್ರಕೃತಿಯ ಪುನಶ್ಚೇತನಕ್ಕೆ ಅವಕಾಶವಿರದಂತೆ ಪರಿಸರದ ಚೇತನವನ್ನು ಮತ್ತು ಇತರರ ಹಕ್ಕುಗಳನ್ನು ಕುಗ್ಗಿಸುತ್ತದೆ. ಅತಿ ಆಸೆಯನ್ನು ಆಧರಿಸಿದ ಆರ್ಥಿಕ ಮಾದರಿ ಸಮಾಜದಲ್ಲಿ ಹಿಂಸಾತ್ಮಕ ಸಂಘರ್ಷಗಳಿಗೆ ಎಡೆಮಾಡಿಕೊಡುವುದರೊಂದಿಗೆ ಮನುಷ್ಯ ಮನುಷ್ಯರ ನಡುವೆ ಮತ್ತು ಇತರ ಪ್ರಾಣಿಗಳೊಡನೆ ಸಂಘರ್ಷಕ್ಕೆ ದಾರಿ ಮಾಡುತ್ತದೆ. ನಿಜಾರ್ಥದಲ್ಲಿ ಹೇಳಬೇಕೆಂದರೆ, ಹಿಂಸಾತ್ಮಕ ಆರ್ಥಿಕತೆಗೆ ಹಿಂಸಾತ್ಮಕ ಆಡಳಿತವೇ ಬೇಕಾಗುತ್ತದೆ. ಅಂತಹ ಸರ್ಕಾರಗಳು ಜನರು ಸಂಪನ್ಮೂಲಗಳನ್ನು ಸುಸ್ಥಿರವಾಗಿ ಉಳಿಸಿ ಮುಂದುವರಿಸಿಕೊಂಡು ಹೋಗುವುದನ್ನು ತಡೆಯುವಂತಹ ಮತ್ತು ಮೂಲಭೂತ ಅಗತ್ಯಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲು ಅಡ್ಡಿಯಾಗುವಂತಹ ಕಾನೂನುಗಳನ್ನು ಜಾರಿಗೆ ತರುತ್ತವೆ ಮತ್ತು ನೀತಿಗಳನ್ನು ರೂಪಿಸುತ್ತವೆ. ಇವನ್ನೆಲ್ಲಾ ಭೂಮಿಯ ಸಂಪನ್ಮೂಲಗಳನ್ನು ಏಕಸ್ವಾಮ್ಯ ಮಾಡಿಕೊಂಡಿರುವ ಕೆಲವೇ ಅತಿ ಆಸೆಯ ಜನರ ಹಿಂಸಾಮಯವಾದ ಆರ್ಥಿಕ ಸ್ಥಿತಿಯನ್ನು ಖಾತರಿಗೊಳಿಸುವ ಸಲುವಾಗಿ ಸರ್ಕಾರ ಮಾಡುತ್ತಿದೆ.

ಕಾಲ ಬದಲಾವಣೆಯಾದರೂ, ವಸಾಹತೀಕರಣದ ಮಾದರಿಗಳು ಮಾತ್ರ ಹಾಗೆಯೇ ಉಳಿದಿವೆ. ಇದು ಹಿಂಸೆಯನ್ನೇ ಅವಲಂಬಿಸಿದೆ. ಇದು ಜನರ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ಥಿತಿಗಳನ್ನು ನಾಶಮಾಡುವಂತಹದು, ನಿಮ್ಮದಲ್ಲ ಇದು ಎಂದು ಹೇಳಿ ಕಸಿದುಕೊಂಡು ಹೋಗುವಂತಹದು, ನ್ಯಾಯವಲ್ಲದ ಬಾಡಿಗೆ ವಸೂಲು ಮಾಡುವುದು, ಒಡೆದು ಆಳುವ ನೀತಿಯನ್ನು ಪ್ರಯೋಗಿಸುವುದು ಮತ್ತು ಪರಮಾಧಿಕಾರವನ್ನು ಉಪಯೋಗಿಸುವುದು, ಇತ್ಯಾದಿ.

ಮತ್ತೊಂದು ಕಡೆ ನೋಡಿದರೆ, ಬಿಡುಗಡೆ ಮತ್ತು ಸ್ವಾತಂತ್ರ್ಯದ ಮಾದರಿಗಳು ಅವ್ಯಾಹತವಾದವುಗಳು. ಸ್ವಾತಂತ್ರ್ಯದ ಈ ಬಾಹ್ಯಲಕ್ಷಣಗಳನ್ನು ಗಾಂಧಿ ಸಮಗ್ರವಾಗಿ ನಿರೂಪಿಸಿದ್ದಾರೆ. ನಾನು ಕಳೆದ ನಾಲ್ಕೂವರೆ ದಶಕಗಳ ಕಾಲ ಭೂಮಿಗೆ ಸಂಬಂಧಿಸಿದ ಕೆಲಸ ಮಾಡಿರುವುದು, ಪರಿಸರದ ಚಳುವಳಿಗಳಲ್ಲಿ ತೊಡಗಿಕೊಂಡಿರುವುದು, ಕಾರ್ಪೊರೇಟ್ ಜಾಗತೀಕರಣದ, ಅತಿಯಾಸೆಯವರ, ಭಾರೀ ಹಣವಂತರ ವಿರುದ್ಧ ಚಳುವಳಿಗಳನ್ನು ರೂಪಿಸುವಲ್ಲಿ, ಚರಿತ್ರೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಗಾಂಧಿ ನಡೆಸಿದ ಹೋರಾಟ ಮತ್ತು ಸವೆಸಿದ ದಾರಿ ತೋರಿಸಿದ ಮೂರು ತತ್ವಗಳಿಂದ ಪ್ರೇರಣೆ ಪಡೆದಿದ್ದೇನೆ. ಅವುಗಳೆಂದರೆ –ಸ್ವರಾಜ್ (ಸ್ವಯಂ ಸಂಘಟನೆ, ಸ್ವಯಮಾಡಳಿತ, ಸ್ವಯಂ ನಿರ್ವಹಣೆಯ ಸ್ವಾತಂತ್ರ್ಯ), ಸ್ವದೇಶಿ (ಸ್ವಯಂ ರೂಪಿಸಿಕೊಳ್ಳುವುದು, ಸ್ವಾವಲಂಬನೆ, ಸ್ಥಳೀಯ ಆರ್ಥಿಕತೆಯನ್ನು ಸೃಜಿಸುವುದು) ಮತ್ತು ಸತ್ಯಾಗ್ರಹ (ಸತ್ಯಕ್ಕೆ ಆಗ್ರಹಿಸುವುದು, ಹೊಸ ಹೊಸ ರೀತಿಗಳಲ್ಲಿ ನಾಗರಿಕ ಅಸಹಕಾರ ತೋರುವುದು)

**ಸ್ವರಾಜ್:** ಸ್ವರಾಜ್ ಎಂಬ ಪರಿಕಲ್ಪನೆ ನೈಜವಾದ ಸ್ವಾತಂತ್ರ್ಯಕ್ಕೆ ತಳಹದಿಯಾಗಿದೆ. ಅದು ಪ್ರಕೃತಿಯಲ್ಲಿ ಮತ್ತು ಸಮಾಜದಲ್ಲಿ ಸಣ್ಣಮಟ್ಟದಿಂದ ಪ್ರಾರಂಭವಾಗಿ ಅತ್ಯಂತ ಗರಿಷ್ಠ ಮಟ್ಟದಲ್ಲಿ ಹೊರಹೊಮ್ಮುವಂತಹದು. ಈಗ ಅಳಿವಿನಂಚಿಗೆ ಬಂದು ದುರವಸ್ಥೆಯಲ್ಲಿರುವಂತಹ ಜೈವಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಉಳಿಸಲು 'ಸ್ವರಾಜ್' ಅವಕಾಶ ಮಾಡಿಕೊಡುತ್ತದೆ.

'ಸ್ವರಾಜ್' ಭಾರತದ ಸ್ವಾತಂತ್ರ್ಯ ಚಳುವಳಿಯ ಅರ್ಥ ವಿವರಣೆಯೇ ಆಗಿದೆ. ಅದು ರಾಜಕೀಯ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಆರ್ಥಿಕ ಸ್ವಾತಂತ್ರ್ಯವನ್ನೂ ಒಳಗೊಂಡಿದೆ. ನನಗಂತೂ ಗಾಂಧಿಯ 'ಹಿಂದ್ ಸ್ವರಾಜ್', ಕೈಗಾರಿಕೀಕರಣ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಸಂದರ್ಭದಲ್ಲಿ ನಿಜವಾದ ಸ್ವಾತಂತ್ರ್ಯ ಕುರಿತ ಅತ್ಯುತ್ತಮ ಬೋಧನೆಯಾಗಿ ಕಂಡಿದೆ. ಕಾರ್ಪೊರೇಟ್ ಆಡಳಿತದ(ಇದನ್ನು ಕಾರ್ಪೊರೇಟ್ ಜಾಗತೀಕರಣ ಮತ್ತು ನವ ಉದಾರವಾದದ ಆರ್ಥಿಕ ಸುಧಾರಣೆ ಎಂದೂ ಕರೆಯಲಾಗುತ್ತಿದೆ.) ಈ ಕಾಲದಲ್ಲಿ, ಸ್ವಾತಂತ್ರ್ಯದ ಹುಡುಕಾಟದ ಸಂದರ್ಭದಲ್ಲಿ ಇದು ಇನ್ನಷ್ಟು ಹೆಚ್ಚು ಪ್ರಸ್ತುತವಾಗಿದೆ.

**ಸ್ವದೇಶಿ:** ಅಕ್ಷರಶಃ ಹೇಳಬೇಕೆಂದರೆ, ಸ್ವದೇಶಿಯೆಂದರೆ ನಮ್ಮನ್ನು ನಾವೇ ರೂಪಿಸಿಕೊಳ್ಳುವುದು. ಅದೆಂದರೆ ಸ್ಥಳೀಯ ಸಂಪನ್ಮೂಲ, ಸ್ಥಳೀಯ ಜ್ಞಾನ ಮತ್ತು ಸಮುದಾಯವನ್ನು ಆಧರಿಸಿದ ಒಂದು ಜೀವಂತ ಆರ್ಥಿಕತೆಯನ್ನು ಸೃಷ್ಟಿಸುವುದು. ಅದರಿಂದ ಪರಿಸರ ವ್ಯವಸ್ಥೆಯಲ್ಲಿ ನಮ್ಮ ಪಾಲಿನ ಬಳಕೆ ಕಡಿಮೆಯಾಗುವುದಲ್ಲದೆ (ಪರಿಸರದಲ್ಲಿ ನಮ್ಮ ಹೆಜ್ಜೆ ಗುರುತಿನ ಪ್ರಮಾಣವನ್ನು ಕಡಿಮೆ ಮಾಡುತ್ತದೆ) ನಮ್ಮ ಅರಿವು ಮತ್ತು ಬುದ್ಧಿಶಕ್ತಿ ವಿಸ್ತಾರಗೊಳ್ಳುತ್ತದೆ. ಅದು ಮನುಷ್ಯರಾಗಿ ಮತ್ತು ಈ ಭೂಮಿಯ ಪ್ರಜೆಗಳಾಗಿ ನಮ್ಮ ಪೂರ್ಣ ಸೃಜನಶೀಲತೆಯ ಅಭಿವ್ಯಕ್ತಿಗೆ ಅವಕಾಶಮಾಡಿಕೊಡುತ್ತದೆ. 'ಸ್ವದೇಶಿ'ಯಲ್ಲಿ ನಾವು ಪ್ರಕೃತಿಯ ಬುದ್ಧಿಶಕ್ತಿ, ಸೃಜನಶೀಲತೆ, ಮರು ಉತ್ಪಾದನಾ ಸಾಮರ್ಥ್ಯ ಮತ್ತು ನಮ್ಮ ಸಹಮಾನವ ಜೀವಿಗಳ ಬುದ್ಧಿಶಕ್ತಿ ಮತ್ತು ಸೃಜನಶೀಲತೆಯೊಂದಿಗೆ ನಾವು ಸಹ–ಸೃಜನಶೀಲರಾಗಿ ಭಾಗಿಯಾಗುತ್ತೇವೆ. ಪ್ರಕೃತಿಯೊಡನೆಯ ಇಂತಹ ಸಹ–ಸೃಜನಶೀಲ ಚಟುವಟಿಕೆಯಿಂದ ಉತ್ಪಾದನೆ, ಸಂರಕ್ಷಣೆ, ನವೀಕರಣ ಮತ್ತು ಪುನರುತ್ಪಾದನೆಯ ಒಂದು ನಿರಂತರ ಚಕ್ರವನ್ನು ನಿರ್ಮಾಣ ಮಾಡುವ ಮೂಲಕ ನಿರಂತರ ಸುಸ್ಥಿರತೆಯ ಆರ್ಥಿಕತೆ ಸೃಷ್ಟಿಯಾಗಿ ಪ್ರಕೃತಿಗೆ ಮತ್ತು ಸಮಾಜಕ್ಕೆ ವಾಪಾಸು ನೀಡುವುದು, ಹಂಚಿಕೊಳ್ಳುವುದು ಮತ್ತು ಪರಸ್ಪರ ಕಾಳಜಿ ವಹಿಸುವುದು ಇತ್ಯಾದಿ ಲಾಭಗಳೇ ದೊರೆತು ಸಮೃದ್ಧಿ ಸಾಧಿತವಾಗುತ್ತದೆ. ಇದೇ ನಿಜವಾದ ಸುಸ್ಥಿರ ಬದುಕಿನ ಮಾದರಿಗೆ ಬುನಾದಿ. ನಮ್ಮ ಭೂಗ್ರಹವನ್ನು ಮತ್ತು ಮಾನವ ಸಮುದಾಯವನ್ನು ಮಲಿನಗೊಳಿಸಿ, ಅಧೋಗತಿಗೆ ತರುವಂತಹ, ಒಂದೇ ದಿಕ್ಕಿನಲ್ಲಿ ಚಲಿಸುತ್ತಾ ಹಿಂಡಿ ಹಿಪ್ಪೆ ಮಾಡುವಂತಹ ಆರ್ಥಿಕ ವ್ಯವಸ್ಥೆಯಲ್ಲ ಇದು.

ಸ್ವದೇಶಿ ಎಂಬ ಪರಿಕಲ್ಪನೆ ಆರ್ಥಿಕ ಪ್ರಜಾಪ್ರಭುತ್ವದ ಹೃದಯಭಾಗವೆಂದೇ ಹೇಳಬಹುದು. ಇದು ಎಲ್ಲರ ಹಿತ ಮತ್ತು ಸಂತೋಷವನ್ನು ಬಯಸುವ ನಿಜವಾದ ಸಂಪತ್ತಿನ ಮೂಲವಾಗಿದೆ. ಸ್ವದೇಶಿ ಎಂಬ ಪರಿಕಲ್ಪನೆ ಸ್ಥಳೀಯ ಆರ್ಥಿಕತೆಯನ್ನು ಆಧರಿಸಿದೆ. ಅದು ರಾಷ್ಟ್ರೀಯ ಆರ್ಥಿಕತೆಯಾಗಿ ಮತ್ತು ಅಂತಿಮವಾಗಿ ಪ್ರಕೃತಿಯೊಂದಿಗೆ ಹೊಂದಿಕೊಂಡು ಹೋಗುವಂತಹ, ಜನರ ನೈಜವಾದ ಸ್ವಾತಂತ್ರ್ಯದ, ನೈಜವಾದ ಸಂಪತ್ತಿನ ಸೃಷ್ಟಿಗೆ ಮತ್ತು ಪ್ರತಿಯೊಂದು ಹಂತದಲ್ಲೂ ನೆಮ್ಮದಿಯ ಜೀವನಕ್ಕಾಗಿ ಇರುವಂತಹ ಇಡೀ ಭೂಗ್ರಹದ ಆರ್ಥಿಕತೆಯಾಗಿ ಅಭಿವೃದ್ಧಿ ಹೊಂದುವಂತಹದು. ಅಂತಾರಾಷ್ಟ್ರೀಯ ಆರ್ಥಿಕ ಮತ್ತು ವ್ಯಾಪಾರಸಂಸ್ಥೆಗಳು ಜಾಗತೀಕರಣದ ಈ ಪರಿಸ್ಥಿತಿಯಲ್ಲಿ ಕುರುಡಾದ ಮತ್ತು ವಿವೇಚನಾಶೂನ್ಯ ಪ್ರಯೋಗಗಳನ್ನು ಮಾಡಲು ಸರ್ಕಾರವನ್ನು ಬಲಾತ್ಕರಿಸುತ್ತವೆ ಮತ್ತು ಮಾಡಿಸುತ್ತವೆ ಕೂಡ. ಇಂತಹ ಸಮಯದಲ್ಲಿ ಗಾಂಧಿ 'ಸ್ಥಳೀಕರಣ' ಮತ್ತು ಸ್ವಯಮಾಡಳಿತದ ಅರ್ಥಶಾಸ್ತ್ರವನ್ನು ನಮಗೆ ನೆನಪಿಸುತ್ತಾರೆ.

**ಸತ್ಯಾಗ್ರಹ:** ಈ ಭೂಮಿಯನ್ನು ನಾಶಮಾಡುವಂತಹ ಮತ್ತು ನಮ್ಮ ಮನುಷ್ಯತ್ವವನ್ನು ಹಾಗೂ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತಹ, ಸಹಾನುಭೂತಿಯ ಮತ್ತು ಹಂಚಿಕೊಳ್ಳುವ ಸ್ವಭಾವದ ನಮ್ಮ ಸಾಮರ್ಥ್ಯವನ್ನು ಪುಡಿ ಪುಡಿ ಮಾಡುವ, ನಮ್ಮ ಹೃದಯಗಳನ್ನು, ನಮ್ಮ ಮನಸ್ಸುಗಳನ್ನು, ನಮ್ಮ ಕೈಗಳನ್ನು ದುರ್ಬಲಗೊಳಿಸುವಂತಹ ವ್ಯವಸ್ಥೆಗಳಿಗೆ, ಅದರ ರಚನೆಗಳಿಗೆ, ಅದರ ಮಾದರಿಗಳಿಗೆ ಮತ್ತು ನೀತಿನಿಯಮಗಳಿಗೆ ಅಸಹಕಾರ ತೋರಿಸಿ, ಅವುಗಳಲ್ಲಿ ಭಾಗವಹಿಸದೇ ಇರುವುದೇ ಗಾಂಧಿಯ ಸತ್ಯಾಗ್ರಹ, ಅಥವಾ ಸತ್ಯದ ಶಕ್ತಿ ಎಂಬ ಮಾತಿನ ಅರ್ಥ. ಬದಲಾವಣೆಗೆ, ಅನ್ಯಾಯದ ಆಡಳಿತದಿಂದ ಮುಕ್ತವಾಗುವುದಕ್ಕೆ ಸ್ವಾತಂತ್ರ್ಯದ ಬೀಜ ಬಿತ್ತುವುದಕ್ಕೆ ಮತ್ತು ನಮ್ಮ ಸ್ವಾತಂತ್ರ್ಯದ ಮೂಲಕ ಭವಿಷ್ಯದ ಬೀಜ ಬಿತ್ತುವುದಕ್ಕೂ ಸತ್ಯದ ಶಕ್ತಿಯೇ ಅತ್ಯಂತ ಗರಿಷ್ಠ ಸಾಧನವಾಗಿದೆ. ಗಾಂಧಿ ಹೇಳುವಂತೆ, ಎಲ್ಲಿಯವರೆಗೆ ಅನ್ಯಾಯದ ಕಾನೂನುಗಳನ್ನು ಪಾಲಿಸಬೇಕಾಗುತ್ತದೆ ಎಂಬ ಮೂಢನಂಬಿಕೆ ಇರುತ್ತದೆಯೋ ಅಲ್ಲಿಯ ತನಕ ಗುಲಾಮಗಿರಿ ಇರುತ್ತದೆ.

ಗಾಂಧಿ ೧೯೦೬ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಜನಾಂಗದ ಆಧಾರದ ಮೇಲೆ ಕಡ್ಡಾಯವಾಗಿ ಜನರ ನೋಂದಣಿ ಮಾಡಬೇಕೆಂಬ ವರ್ಣಭೇದ ನೀತಿಯ ಆಡಳಿತದೊಂದಿಗೆ ಸಹಕರಿಸಲು ನಿರಾಕರಿಸಿ ಸತ್ಯಾಗ್ರಹವನ್ನು ಮೊದಲು ಪ್ರಯೋಗಿಸಿದರು. ವರ್ಣಭೇದದಂತೆಯೇ ಧರ್ಮ ಮತ್ತು ಜನಾಂಗದ ಆಧಾರದ ಮೇಲೆ ಜನರನ್ನು ಪ್ರತ್ಯೇಕಿಸುವ ನೀತಿಗಳ ವಿರುದ್ಧದ ಸಮಕಾಲೀನ ಚಳುವಳಿಗಳು ಗಾಂಧಿ, ಮಂಡೇಲಾ ಮಾರ್ಟಿನ್ ಲೂಥರ್ ಕಿಂಗ್ ಇವರುಗಳಿಂದ ಸ್ಫೂರ್ತಿ ಪಡೆದೇ ಮುನ್ನಡೆದಿವೆ.

೧೯೧೫ ರಲ್ಲಿ ಗಾಂಧಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದಾಗ ಸ್ವಾತಂತ್ರ್ಯಾನಂತರ ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರಪ್ರಸಾದ್ ಅವರಂತಹ ಸ್ವಾತಂತ್ರ್ಯ ಹೋರಾಟಗಾರರು ಅವರನ್ನು, ಚಂಪಾರಣ್ ಎಂಬಲ್ಲಿ ರೈತರನ್ನು ನೀಲಿ ಬೆಳೆಯಲು ಬಲವಂತ ಮಾಡಿದುದರ ವಿರುದ್ಧದ ಚಳುವಳಿಯನ್ನು ಸಂಘಟಿಸಲು ಆಹ್ವಾನಿಸಿದರು. ೨೦೧೭ ಈ ಚಂಪಾರಣ್‌ನ ನೀಲಿ ಸತ್ಯಾಗ್ರಹದ ನೂರನೇ ವರ್ಷವಾಗಿತ್ತು. ನೀಲಿ ಬೆಳೆಯಲು ನಿರಾಕರಿಸಿದ್ದೇ ನೀಲಿ ಸತ್ಯಾಗ್ರಹ. ರೈತರು ಮತ್ತೆ ಮತ್ತೆ ಇದನ್ನೇ ಹೇಳಿದ್ದಾರೆ; 'ನಾವು ಸಾಯುತ್ತೇವೆ ಬೇಕಾದರೆ. ಆದರೆ ನೀಲಿ ಬೆಳೆಯುವುದಿಲ್ಲ'. ಗಾಂಧಿಯ ಆಗಮನ ಚಂಪಾರಣ್‌ನ ರೈತರಿಗೆ ಬೆಂಬಲ, ಶಕ್ತಿ ತುಂಬಿತು. ಅವರು ಬರುತ್ತಿದ್ದಂತೆಯೇ ಜಿಲ್ಲಾಡಳಿತ ಅವರನ್ನು ತಡೆದುದು, ಇವೆಲ್ಲಾ ಸತ್ಯಾಗ್ರಹವನ್ನು ತೀವ್ರಗೊಳಿಸಿದವು.

ಭಾರತದ ಜನತೆ ಸ್ವತಂತ್ರವಾಗಿ ಉಪ್ಪನ್ನು ತಯಾರಿಸಿ ಮಾರಾಟ ಮಾಡುವುದನ್ನು ನಿಷೇಧಿಸಿ ಬ್ರಿಟಿಷರು ಉಪ್ಪಿನ ಕಾನೂನನ್ನು ಜಾರಿಗೆ ತಂದರು. ಅದರಿಂದಾಗಿ ಭಾರತೀಯರು ಅತ್ಯಂತ ದುಬಾರಿ, ಅತ್ಯಂತ ಹೆಚ್ಚು ತೆರಿಗೆ ವಿಧಿಸಿದ ಮತ್ತು ಕೆಲವೊಮ್ಮೆ ಆಮದು ಮಾಡಿಕೊಂಡ ಉಪ್ಪನ್ನು ಖರೀದಿಸಬೇಕಾಯಿತು. ಈ ಅನ್ಯಾಯದ ಕಾನೂನನ್ನು ವಿರೋಧಿಸಲು ಗಾಂಧಿ ಉಪ್ಪಿನ ಸತ್ಯಾಗ್ರಹವನ್ನು ಕೈಗೆತ್ತಿಕೊಂಡರು. ದಂಡಿ ಕಡಲತೀರಕ್ಕೆ ನಡೆದರು. ಸಮುದ್ರದಿಂದ ಉಪ್ಪನ್ನು ತೆಗೆದು ಹೇಳಿದರು; 'ಪ್ರಕೃತಿ ನಮಗೆ ಪುಕ್ಕಟೆಯಾಗಿ ಇದನ್ನು ಕೊಡುತ್ತದೆ. ನಮ್ಮ ಉಳಿವಿಗೆ ಇದು ಬೇಕು. ನಾವು ಉಪ್ಪು ತಯಾರಿಸುವುದನ್ನು ಮುಂದುವರಿಸುತ್ತೇವೆ. ನಾವು ನಿಮ್ಮ ಕಾನೂನನ್ನು ಪಾಲಿಸುವುದಿಲ್ಲ'. ಉಪ್ಪಿನ ಸತ್ಯಾಗ್ರಹವು ತ್ವರಿತಗತಿಯಲ್ಲಿ ಅರಣ್ಯ ಕ್ಷೇತ್ರಕ್ಕೂ ಹಬ್ಬಿತು. ಮತ್ತು ಇದು ಬ್ರಿಟಿಷರು ಸಮುದಾಯದ ಅರಣ್ಯವನ್ನು ವಶಪಡಿಸಿಕೊಳ್ಳುವುದನ್ನು ವಿರೋಧಿಸುವ ಅರಣ್ಯ ಸತ್ಯಾಗ್ರಹವಾಯಿತು. ಚಿಪ್ಕೋ, ನಾವು ಅದನ್ನು ಪರಿಸರ ವ್ಯವಸ್ಥೆಯ ವಿಶ್ವವಿದ್ಯಾಲಯ ಎನ್ನುತ್ತೇವೆ, ಅದರ ಬೇರು ೧೯೩೦ ರಲ್ಲಿ ಗಡವಾಲದ ತಿಲಾರಿಯಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿದೆ. ಉಪ್ಪಿನ ಸತ್ಯಾಗ್ರಹವು ನವಧಾನ್ಯದ ಬೀಜ ಸತ್ಯಾಗ್ರಹಕ್ಕೆ ಮತ್ತು ಬೀಜ ಸ್ವಾತಂತ್ರ್ಯಕ್ಕೆ ಪ್ರೇರಣೆ ನೀಡಿದೆ.

ಈ ಸತ್ಯಾಗ್ರಹ, ಸತ್ಯದ ಶಕ್ತಿಯು ನಮ್ಮ 'ಸತ್ಯೋತ್ತರ' ಕಾಲದಲ್ಲಿ ಹಿಂದೆಂದಿಗಿಂತಲೂ ಅತ್ಯಂತ ಮುಖ್ಯವಾಗಿದೆ. ನಮ್ಮ ಹೊರಗಿನ, ಮೃಗೀಯ ಶಕ್ತಿಗೆ ಪ್ರತಿರೋಧ ಒಡ್ಡಲು ಸತ್ಯಾಗ್ರಹ ಹಿಂದೆಯೂ, ಯಾವಾಗಲೂ ನಮ್ಮ ಆತ್ಮಸಾಕ್ಷಿಯನ್ನು, ನಮ್ಮ ಒಳಗಿನ ಶಕ್ತಿಯನ್ನು ಎಚ್ಚರಗೊಳಿಸುವಂತಹದ್ದಾಗಿತ್ತು ಮತ್ತು ಆಗಿದೆ ಕೂಡಾ.

ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹವೆಂಬುದು ಅತ್ಯಂತ ಆಳದ ಆಚರಣೆಯಾಗಿದೆ. ಅನ್ಯಾಯವಾದ, ಮೃಗೀಯವಾದ ಮತ್ತು ಶೋಷಣೆ ಮಾಡುವಂತಹ ಪ್ರಜಾಪ್ರಭುತ್ವವಿರೋಧೀ ಕಾರ್ಯವಿಧಾನಗಳಿಗೆ ನಮ್ಮ ಪ್ರಜ್ಞೆಯ ಅತಿ ಎತ್ತರದ ಸ್ತರಗಳಿಂದ 'ಇಲ್ಲ' ಎಂದು ಹೇಳುವುದೇ ನಮ್ಮ ನೈತಿಕ ಕರ್ತವ್ಯ. ಏಕೆಂದರೆ, ಈ ಒಂದು ಭೂಗ್ರಹದ, ಒಂದು ಮಾನವಕುಲದ ಸದಸ್ಯರಾಗಿರುವ ನಾವು ಪರಿಸರ ವ್ಯವಸ್ಥೆ ಮತ್ತು ಮಾನವಕುಲದ ಉನ್ನತೋನ್ನತ ನಿಯಮಗಳನ್ನು ಪಾಲಿಸುವ ಕರ್ತವ್ಯ ನಮ್ಮದಾಗಿದೆ.

(ಕನ್ನಡಕ್ಕೆ: **ಕೆ. ಪದ್ಮಾಕ್ಷಿ**

ಕೃಪೆ: **ಜನತಾ,** ಅಕ್ಟೋಬರ್ ೧೪, ೨೦೧೮)

---

# ಔಷಧ ಉದ್ಯಮ: ಸಾವಿನ ವ್ಯಾಪಾರಿಗಳ ಛದ್ಮ ವೇಷದ ಬಗ್ಗೆ ವಂದನಾ ಶಿವ ಎಚ್ಚರಿಕೆ!

**'ದ್ವೇಷ, ಹಗೆತನದ ಮಾರಣಾಂತಿಕ ತರ್ಕವೇ ಇದೀಗ ಪಲ್ಲಟಗೊಂಡು, ನಮ್ಮ ಆಹಾರ ಹಾಗೂ ಕೃಷಿ ಪದ್ಧತಿಯಲ್ಲಿ ವಿಷವಾಗಿ ಮೈತುಂಬಿಕೊಂಡಿದೆ. ಅದೇ ತರ್ಕ ನಮ್ಮೆಲ್ಲರ ಆರೋಗ್ಯದ ಬೇರುಗಳನ್ನೇ ಸರ್ವನಾಶಗೊಳಿಸುತ್ತಿದೆ', ಎನ್ನುವ ನಮ್ಮ ನಡುವಿನ ಖ್ಯಾತ ಪರಿಸರ ತಜ್ಞೆ ವಂದನಾಶಿವಾ ಆಹಾರ ಮತ್ತು ಔಷಧೋದ್ಯಮಗಳ ನೀಚ ಹೊಂದಾಣಿಕೆ ಬಗ್ಗೆ ತೀವ್ರ ಟೀಕಾಪ್ರಹಾರ ಮಾಡುತ್ತಲೇ ಇರುತ್ತಾರೆ.**

'ವಿಷದ ಒಕ್ಕೂಟಗಳು' ಎಂದೇ ಈ ಕೈಗಾರಿಕೆಗಳನ್ನು ಗುರುತಿಸುವ ಅವರು, "ಈ ಕಂಪನಿಗಳೇ ನಮ್ಮ ಪರಿಸರದ, ಕೀಟಗಳು, ದುಂಬಿಗಳು, ಪತಂಗಗಳಂತಹ ಸೂಕ್ಷ್ಮ ಜೀವಿಗಳನ್ನು ಶಾಶ್ವತವಾಗಿ ಅಳಿವಿನಂಚಿಗೆ ತಳ್ಳುವ ರಾಸಾಯನಿಕಗಳನ್ನು ಕಂಡುಹಿಡಿದಿವೆ. ಇದೇ ಕಂಪನಿಗಳು, ನಮ್ಮ ಸಸ್ಯ ಪ್ರಭೇದಗಳನ್ನು ನಿರ್ನಾಮಗೊಳಿಸಿ, ನಮಗೆ ಹಲವು ಬಗೆಯ ಕ್ಯಾನ್ಸರ್‌ಗಳು, ಮೂತ್ರಪಿಂಡ ವೈಫಲ್ಯದಂತಹ ರೋಗಗಳಿಗೆ ಕಾರಣವಾಗುವ ಗ್ಲೈಫೋಸೈಟ್ ತಯಾರಿಸುತ್ತಿದೆ. ಇದೇ ಕಂಪನಿಗಳು ತಾವು ಹರಡುತ್ತಿರುವ ಖಾಯಿಲೆಗಳಿಂದ ಅಪಾರ ಲಾಭ ಕೊಳ್ಳೆ ಹೊಡೆಯುತ್ತವೆ. ಏಕೆಂದರೆ ಅವುಗಳೇ ಕ್ಯಾನ್ಸರ್ ಔಷಧಗಳನ್ನು ತಯಾರಿಸಿ, ಮಾರುತ್ತಿವೆ. ಆದ್ದರಿಂದಲೇ ನಾವು ಈ ವಿಷ ಒಕ್ಕೂಟಗಳಿಗೆ ಅಂತ್ಯ ಹಾಡಬೇಕು, ಆ ಮೂಲಕ ಈ ಧರೆಯ ಜೀವ ಪರಿಸರ ಹಾಗೂ ಜನತೆ ಪಾಷಾಣ ಮುಕ್ತರಾಗಬೇಕು, ಮಾರಣಾಂತಿಕ ರೋಗರುಜಿನಗಳಿಂದ ದೂರವಾಗಬೇಕು ಮತ್ತು ಈ ವಿಷ ಒಕ್ಕೂಟದ ಹೊಸ ಗುಲಾಮಗಿರಿಯ ಸಂಕೋಲೆಯನ್ನು ಕಳಚಬೇಕು.

ಈ ಒಕ್ಕೂಟದಲ್ಲಿ ವಿಲೀನಗೊಂಡ ಕಂಪನಿಗಳೆಂದರೆ, ಎರಡೂ ಮಹಾಯುದ್ಧಗಳಲ್ಲಿ ಆಸ್ಫೋಟಕಗಳನ್ನು ತಯಾರಿಸುತ್ತಿದ್ದ ಡ್ಯುಪಾಂಟ್ ಮತ್ತು ನಾಝಿ ರಕ್ಕಸರೊಂದಿಗೆ ಕೈಜೋಡಿಸಿದ್ದ ಐಜಿ ಫಾರ್ಬೆನ್ ಎಂದು ಈ ಹಿಂದೆ ಕರೆಯಲ್ಪಡುತ್ತಿದ್ದ, ಬಾಯರ್ ಕಂಪನಿ. ವಿಷದ ಒಕ್ಕೂಟದಲ್ಲಿರುವ ಕಂಪನಿಗಳ ಈ ಸಣ್ಣ ಗುಂಪುಗಳನ್ನು ಯುದ್ಧದ ಸಮಯದಲ್ಲಿ ಸಜ್ಜುಗೊಳಿಸಲಾಗಿತ್ತು. ಬಾಯರ್ ಕಂಪನಿಯು ಜರ್ಮನಿಯ ನಾಝಿ ಸೆರೆ ಶಿಬಿರದಲ್ಲಿದ್ದ ಯಹೂದಿಗಳನ್ನು ಕೊಲ್ಲಲು ಝೈಲಾನ್ ಬಿ ಯಂತಹ ವಿಷಾನಿಲಗಳನ್ನು ಉತ್ಪಾದಿಸುತ್ತಿತ್ತು. ಮೊನ್ಸಾಂಟೊ ಕಂಪನಿಯು, ವಿಯಟ್ನಾಂ ಯುದ್ಧದಲ್ಲಿ ಅಮೆರಿಕ ಸೈನ್ಯಕ್ಕೆ ಹಳದಿ ಅನಿಲ ಎನ್ನುವ ಭೀಕರ ವಿಷ ರಾಸಾಯನಿಕವನ್ನು ತಯಾರಿಸಿಕೊಡುತ್ತಿತ್ತು. ಈಗ ಒಟ್ಟು ಮೂರು ವಿಷ ಒಕ್ಕೂಟಗಳಿವೆ. ಬಾಯರ್ ಕಂಪನಿ, ಮೊನ್ಸಾಂಟೊ ಖರೀದಿಸಿ, ಮಾಬೇ ಎಂಬುದೊಂದು ವಿಷ ಒಕ್ಕೂಟವಾದರೆ, ಸಿಂಜೆಂಟಾ ಮತ್ತು ಕೆಮ್ ಚೈನಾ ಮತ್ತೊಂದು, ಡ್ಯುಪಾಂಟ್ ಮತ್ತು ಡೋ ಸೇರಿ ಬೀಜ ಹಾಗೂ ಕ್ರಿಮಿನಾಶಕ ಮಾರುಕಟ್ಟೆಯ ಶೇಕಡ ಅರವತ್ತರಷ್ಟನ್ನು ಈ ಮೂರು ಒಕ್ಕೂಟಗಳು ನಿಯಂತ್ರಿಸುತ್ತಿವೆ. ಶೇ ಒಂದರಷ್ಟಿರುವ ಈ ಉದ್ಯಮಗಳು ಶತಕೋಟಿ, ಸಹಸ್ರಕೋಟಿ ಒಡೆಯರಾಗುವುದರಿಂದ ನಾವು ಶ್ರೀಮಂತರಾಗುತ್ತೇವೆ ಎಂದು ಆಲೋಚಿಸುವ ಬದಲು ಇಂದಿನ ಯುವಜನತೆ ನಮ್ಮ ಭವಿಷ್ಯವನ್ನು, ನಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಕಾರ್ಯಪ್ರವೃತ್ತರಾಗಬೇಕಿದೆ. ಆಹಾರ ಎಲ್ಲರಿಗೆಂದೇ ಸೃಷ್ಟಿಯಾಗಿರುವುದು. ಆಹಾರ ಎಲ್ಲರನ್ನು ಬೆಸೆದಿದೆ. ಆದರೂ ಶತಕೋಟಿ ಜನ ಹಸಿವಿನಿಂದ ಕಂಗೆಟ್ಟಿದ್ದಾರೆ. ಆಹಾರವಿರುವುದೇ ಪೌಷ್ಟಿಕತೆಗೆ ಹಾಗೂ ಆರೋಗ್ಯಕ್ಕಾಗಿ. ಆದರೂ ಶೇಕಡ ಎಪ್ಪತ್ತರಷ್ಟು ಸಾಂಕ್ರಾಮಿಕ ರೋಗ ಮತ್ತು ದೀರ್ಘಕಾಲಿನ ಕಾಯಿಲೆಗಳಾದ ಕ್ಯಾನ್ಸರ್, ನರ ರೋಗ ಸಮಸ್ಯೆಗಳು, ಬುದ್ಧಿ ಮಾಂದ್ಯತೆ, ಬೊಜ್ಜು, ಮಧುಮೇಹ, ಹಾರ್ಮೋನ್‌ಗಳ ವೈಪರೀತ್ಯ, ಇವೆಲ್ಲವೂ ನಮ್ಮ ಪರಿಸರದ ಸೂಕ್ಷ್ಮ ಜೀವಿಗಳನ್ನು ವಿನಾಶದ ಅಂಚಿಗೆ ತಳ್ಳುವ, ಭೌಗೋಳಿಕ ಹವಾಮಾನವನ್ನು ಏರುಪೇರು ಮಾಡುವ, ಅದೇ ರಾಸಾಯನಿಕಗಳು, ಅದೇ ವಿಷಗಳು, ಅದೇ ಕ್ರಿಮಿನಾಶಕಗಳಿಂದ ಉಂಟಾಗುತ್ತಿರುವುದು.

ಆದರೆ ಈ ಭೂಮಿಯ ಆರೈಕೆಯನ್ನು ನಮ್ಮ ಕೈಗೆತ್ತಿಕೊಳ್ಳಬೇಕಿದೆ. ನಮ್ಮ ದೇಹದ ಆರೈಕೆ ನಮ್ಮ ಕೈಯಲ್ಲಿದೆ. ಭಗ್ನಗೊಂಡ ನಮ್ಮ ಪ್ರಜಾಸತ್ತೆಯನ್ನು ಗುಣಮುಖಪಡಿಸುವುದು ನಮ್ಮಿಂದ ಸಾಧ್ಯವಿದೆ. ಮೊದಲು ಈ ವಿಷ ಒಕ್ಕೂಟಗಳ ಹಲ್ಲುಕಿತ್ತು ಬಲಹೀನಗೊಳಿಸಬೇಕು. 'ವಿಷಮುಕ್ತ ಆಹಾರ, ವಿಷಮುಕ್ತ ಕೃಷಿ' ಎಂಬ ವ್ಯಾಪಕ ಪ್ರಚಾರಾಂದೋಲನಕ್ಕೆ ಚಾಲನೆ ನೀಡಿದ್ದೇವೆ. ವಿಷಮುಕ್ತ ಆಹಾರ ಸ್ವೀಕರಿಸುವ ಜನ ಸಮುದಾಯಗಳನ್ನು ಸೃಷ್ಟಿ ಮಾಡುವುದು ನಮ್ಮಿಂದ ಸಾಧ್ಯ. ಬಡತನ ಎಂದರೆ, ಹಣವಿಲ್ಲ ಎಂದಲ್ಲ. ಬದಲಿಗೆ ಬಡತನವೆಂದರೆ ಸಾಮರ್ಥ್ಯ ಮತ್ತು ಕ್ಷಮತೆಗಳ ಕೊರತೆ ಎಂದು ಮರುವ್ಯಾಖ್ಯಾನಿಸಿ, ಐಕಮತ್ಯದಿಂದ ಆಹಾರ ಸಮುದಾಯಗಳನ್ನು ಸೃಷ್ಟಿಸಲು ಪ್ರತಿಯೊಬ್ಬರೂ ಇತರರೊಡನೆ ಕೈಜೋಡಿಸಬೇಕಿದೆ. ಆಹಾರ ಸಮುದಾಯಗಳ ಸೃಷ್ಟಿ ನಮ್ಮಿಂದ ಸಾಧ್ಯ. ಪ್ರತಿಯೊಬ್ಬರಿಗೂ ಒಳ್ಳೆಯ ಆಹಾರ ಬೇಕು. ಪ್ರತಿ ದುಂಬಿ, ಪತಂಗಕ್ಕೂ ಆಹಾರ ಬೇಕು ಮತ್ತು ಆ ಆಹಾರದಿಂದ ಅವು ಸಾಯಬಾರದು. ಪ್ರತಿ ಮಗುವಿಗೂ ಒಳ್ಳೆಯ ಆಹಾರ ಬೇಕೇಬೇಕು.



**(ದೆಹಲಿ ನಿವಾಸಿಯಾದ ಪ್ರಖ್ಯಾತ ಪರಿಸರವಾದಿ ಮತ್ತು ಆಹಾರ ಸ್ವಾಯತ್ತವಾದಿಯಾದ ವಂದನಾ ಶಿವ ಜಾಗತೀಕರಣಕ್ಕೆ ಪರ್ಯಾಯ ಕುರಿತ ಅಂತಾರಾಷ್ಟ್ರೀಯ ವೇದಿಕೆಯ ಸದಸ್ಯರಾಗಿದ್ದು, ಈ ವಿಷಯಗಳ ಬಗ್ಗೆ ಹಲವು ಕೃತಿಗಳನ್ನೂ ರಚಿಸಿದ್ದಾರೆ.)**

(ಅನುವಾದ ಮತ್ತು ಧ್ವನಿಯಿಂದ ಲಿಪಿಗೆ: ಬಿ.ಎಸ್. ದಿವಾಕರ)

# ಸಾವರ್ಕರ್ ಮತ್ತು ಗೋಲ್ವಲ್ಕರ್ ಹಾಗೂ ನಮ್ಮ ಸ್ವಾತಂತ್ರ್ಯ ಆಂದೋಲನ

ಮೂಲ ಇಂಗ್ಲಿಷ್‌ನಲ್ಲಿ: **ರಾಮ್ ಪುನಿಯಾನಿ**
ಕನ್ನಡಕ್ಕೆ: **ಎಂ. ರಾಜು**




ಹಿಂದುತ್ವವಾದಿ ರಾಜಕಾರಣ ಇಂದು ರಾಷ್ಟ್ರದಲ್ಲಿ ಭದ್ರವಾಗಿ ಬೇರೂರುತ್ತಿರುವ ಸಂದರ್ಭದಲ್ಲಿ ಈ ರಾಜಕಾರಣದ ಸಿದ್ಧಾಂತ ಮತ್ತು ಸಂಘಟನೆಯ ರೂವಾರಿಗಳಾದ ಸಾವರ್ಕರ್ ಮತ್ತು ಗೋಲ್ವಲ್ಕರ್ ಅವರ ವ್ಯಕ್ತಿತ್ವ ಮತ್ತು ಚರಿತ್ರೆಯನ್ನು ದಿಟ್ಟಿಸಿ ನೋಡುವ ಕಾಲ ಕೂಡಿ ಬಂದಿದೆ. ಮುಖ್ಯವಾಗಿ ಹಿಂದುತ್ವದ ಪಿತಾಮಹರೆನಿಸಿದ ಸಾವರ್ಕರರನ್ನು ಪುರಾಣ ಪುರುಷನನ್ನಾಗಿ ಮಾಡಲು ನಡೆಯುತ್ತಿರುವ ಬಹು ವ್ಯವಸ್ಥಿತ ಪ್ರಯತ್ನದ ಹಿಂದೆ, ಮೂಲತಃ ಒಕ್ಕೂಟ ಧರ್ಮವಾದ ಹಿಂದೂ ಧರ್ಮವನ್ನು ಒಂದು ಬಿಗಿಯಾದ ಸಮವಸ್ತ್ರದೊಳಕ್ಕೆ ಅಳವಡಿಸುವ ಮತ್ತು ನಮ್ಮ ಬಹುಮುಖಿ ರಾಷ್ಟ್ರೀಯ ಆಂದೋಲನವು ರೂಪಿಸಿದ ಪ್ರಜಾಸತ್ತಾತ್ಮಕ ರಾಷ್ಟ್ರೀಯತೆಯನ್ನು ಮತೀಯತೆಯಲ್ಲಿ ಉಸಿರುಗಟ್ಟುವಂತೆ ಮಾಡುವ ಬೃಹತ್ ಯೋಜನೆ ಇರುವ ಸೂಚನೆಗಳಿದ್ದು ಇದರ ಬಗ್ಗೆ ಗಂಭೀರ ಚರ್ಚೆಗಳು ನಡೆಯಬೇಕಾಗಿದೆ.-ಸಂ.

**ರಾ**ಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ರಾಜಕೀಯವಾಗಿ ಪ್ರಾಮುಖ್ಯತೆಯನ್ನು ಪಡೆಯತೊಡಗಿದ ಹಾಗೆ, ಅದಕ್ಕೆ ತಾನು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ ದೇಶಪ್ರೇಮಿ ಸಂಘಟನೆ ಎಂದು ಬಿಂಬಿಸಿಕೊಳ್ಳಬೇಕಾದ ಅಗತ್ಯ ಹೆಚ್ಚುತ್ತಿದೆ. ಜನರನ್ನು ರಾಷ್ಟ್ರಪ್ರೇಮಿಗಳು ಮತ್ತು ರಾಷ್ಟ್ರದ್ರೋಹಿಗಳು ಎಂದು ವಿಭಾಗಿಸುವ ಅಗತ್ಯ ಅದಕ್ಕೆ ಇದೆ. ಹಿಂದುವಾದಿ ವಿನಾಯಕ ದಾಮೋದರ ಸಾವರ್ಕರರನ್ನು ಸ್ವಾತಂತ್ರ್ಯವೀರ ಅಭಿದಾನದೊಂದಿಗೆ ವೈಭವೀಕರಿಸಿ ಅವರ ಹೆಸರನ್ನು ರಸ್ತೆಗಳಿಗೆ ಇಡಲಾಗುತ್ತಿದೆ ಅವರ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತಿದೆ. ೧೯೯೮–೨೦೦೪ ರ ಎನ್‌ಡಿಎ ನೇತೃತ್ವದ ಸರ್ಕಾರದ ಅವಧಿಯಲ್ಲಿ ಪಾರ್ಲಿಮೆಂಟ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು. ಪೋರ್ಟ್‌ಬ್ಲೇರ್ ವಿಮಾನ ನಿಲ್ದಾಣಕ್ಕೆ ಸಾವರ್ಕರರ ಹೆಸರನ್ನು ಇಡಲಾಯಿತು. ಸಾವರ್ಕರರೇ ನಿಜವಾದ ರಾಷ್ಟ್ರಪಿತ ಎಂಬ ಮಾತುಗಳನ್ನು ಹರಿಯಬಿಡಲಾಯಿತು.

ಭಾರತದ ಸ್ವಾತಂತ್ರ್ಯ ಹೋರಾಟವನ್ನು ಜಗತ್ತಿನ ಅತಿ ದೊಡ್ಡ ಜನಾಂದೋಲನ ಎಂದು ಕರೆಯಲಾಗುತ್ತದೆ. ೧೯೨೦ರ ನಂತರದಲ್ಲಿ ಗಾಂಧೀಜಿಯವರ ಪ್ರಯತ್ನದಿಂದ ಅಲ್ಲಿಯವರೆಗೆ ಕೇವಲ ಸಮಾಜದ ಪ್ರತಿಷ್ಠಿತ ವರ್ಗಕ್ಕೆ ಸೀಮಿತವಾಗಿದ್ದ ಚಳುವಳಿ ಒಂದು ಜನಾಂದೋಲನದ ರೂಪ ಪಡೆದುಕೊಂಡಿತು. ಕೈಗಾರಿಕೀಕರಣ ಮತ್ತು ಆಧುನಿಕ ವಿದ್ಯಾಭ್ಯಾಸ ಕ್ರಮಗಳ ಹಿನ್ನೆಲೆಯಲ್ಲಿ ನವ ಶ್ರೀಮಂತ ವ್ಯಾಪಾರೀ ವರ್ಗ, ವಿದ್ಯಾವಂತ ಮಧ್ಯಮವರ್ಗ ಮತ್ತು ಕಾರ್ಮಿಕ ವರ್ಗಗಳು ಹೊಸದಾಗಿ ಹುಟ್ಟಿಕೊಂಡವು. ಮಹಿಳೆಯರು ಮತ್ತು ದಲಿತರು ಶಿಕ್ಷಣ ಪಡೆದು ಸಾಮಾಜಿಕ ಚಳುವಳಿಗಳಲ್ಲಿ ಪಾಲ್ಗೊಳ್ಳ ತೊಡಗಿದರು. ಈ ಇಡೀ ಪ್ರಕ್ರಿಯೆಯು 'ನಿರ್ಮಾಣವಾಗುತ್ತಿರುವ' ಎಂಬ ನುಡಿಗಟ್ಟಿನಿಂದ ಗುರುತಿಸಲ್ಪಡುತ್ತದೆ. ಆ ಕಾಲಕ್ಕೆ ಭಾರತೀಯ ರಾಷ್ಟ್ರಿಯ ಕಾಂಗ್ರೆಸ್ಸಿಗರು, ಬಹುಪಾಲು ಎಡಪಂಥೀಯರು ಮತ್ತು ದಲಿತ ನಾಯಕರು ಪ್ರಜಾತಾಂತ್ರಿಕ ಮೌಲ್ಯಗಳ ಬಗ್ಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಬಗ್ಗೆ ಮಾತನಾಡತೊಡಗಿದರು. ಇವು ಭಾರತದ ಸ್ವಾತಂತ್ರ್ಯ ಚಳುವಳಿಯ ಘೋಷಣೆಗಳೇ ಆದವು.

ಈ ನವೋದಿತ ವರ್ಗಗಳ ಮತ್ತು 'ನಿರ್ಮಾಣವಾಗುತ್ತಿರುವ' ಭಾರತ ರಾಷ್ಟ್ರದ ಪರಿಕಲ್ಪನೆಗೆ ಪ್ರತಿಯಾಗಿ ಭೂಮಾಲೀಕ, ರಾಜಪರಿವಾರ ಮತ್ತು ಪುರೋಹಿತಶಾಹಿ ವರ್ಗಗಳು ಜಾತ್ಯಾಧಾರಿತ ಅಸಮಾನತೆಯ ಆಧುನಿಕಪೂರ್ವ ಮೌಲ್ಯಗಳಿಗೆ ಅಂಟಿಕೊಂಡವು. ಅವು ೮ನೆಯ ಶತಮಾನದಿಂದೀಚಿನ ಮುಸ್ಲಿಂ ರಾಷ್ಟ್ರೀಯತೆ ಮತ್ತು ಅನಾದಿಕಾಲದಿಂದಲೂ ಇದ್ದಿತೆಂದು ಭಾವಿಸಲಾದ ಹಿಂದೂ ರಾಷ್ಟ್ರೀಯತೆಗಳನ್ನು ನಂಬಿದವು.

## ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸದ ಆರ್‌ಎಸ್‌ಎಸ್

ಈ ಬಗೆಯ ಪ್ರತಿಚಿಂತನೆಗಳ ಫಲವಾಗಿ ಮೂಡಿಬಂದ ರಾಜಕೀಯ ಧಾರೆಗಳೇ ಮುಸ್ಲಿಂ ಲೀಗ್, ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್. ಸಂಘಟನೆಗಳು. ತಾನೂ ಸಹ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ದೇಶ ಕಟ್ಟುವ ಕಾರ್ಯದಲ್ಲಿ ಕ್ರಿಯಾಶೀಲವಾಗಿದ್ದುದಾಗಿ ಆರ್‌ಎಸ್‌ಎಸ್. ಹೇಳಿಕೊಳ್ಳುತ್ತದೆ. ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳಲ್ಲಿ ಪಠ್ಯಪುಸ್ತಕಗಳನ್ನು ತಿದ್ದಿ ಬರೆದು ಆರ್‌ಎಸ್‌ಎಸ್‌ನ ಈ ಹೇಳಿಕೆಗಳಿಗೆ ಸಮರ್ಥನೆಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ ಆರ್‌ಎಸ್‌ಎಸ್ ಒಂದು ಸಂಘಟನೆಯಾಗಿ ಎಂದೂ ಬ್ರಿಟಿಷ್‌ರ ವಿರುದ್ಧದ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಲಿಲ್ಲ ಎಂಬುದು ವಾಸ್ತವ. ಆರ್‌ಎಸ್‌ಎಸ್‌ನ ಸಂಸ್ಥಾಪಕರಾದ ಹೆಗಡೇವಾರ್ ಅವರು ಆರ್‌ಎಸ್‌ಎಸ್ ಸ್ಥಾಪನೆಗೆ ಮೊದಲು ಖಿಲಾಫತ್ ಚಳುವಳಿಯ ಸಂದರ್ಭದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಆರ್‌ಎಸ್‌ಎಸ್ ಒಂದು ಸಂಘಟನೆಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಾಗದು; ವೈಯಕ್ತಿಕ ಆಸಕ್ತಿಯಿಂದ ಯಾರಾದರೂ ಚಳುವಳಿಗಳಲ್ಲಿ ಭಾಗವಹಿಸಬಹುದು ಎಂದು ಹೆಡ್ಗೇವಾರ್ ಹೇಳುತ್ತಿದ್ದರು. ಅವರು ಜೈಲಿನಲ್ಲಿ ಇರುವಾಗ ಸ್ವಾತಂತ್ರ ಪ್ರೇಮಿಗಳೂ ತ್ಯಾಗಿಗಳೂ ಆದ ಜನರನ್ನು ಸಂಧಿಸಿ ತಮ್ಮ ಸಂಘಟನೆಗೆ ಅಂತಹವರನ್ನು ಸೆಳೆಯುವುದು ಅವರ ಉದ್ದೇಶವಾಗಿತ್ತು ಎಂದು ಅವರ ಜೀವನ ಚರಿತ್ರೆಕಾರರು ಬರೆಯುತ್ತಾರೆ.

## ಬ್ರಿಟಿಷರ ವಿರೋಧಿ ಹೋರಾಟ ಸಲ್ಲದು: ಗೋಲ್ವಲ್ಕರ್

ಆರ್‌ಎಸ್‌ಎಸ್ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸದೇ ಇರುವುದರ ಹಿಂದಿನ ತಾತ್ವಿಕತೆಯನ್ನು ಅದರ ಸರಸಂಘಚಾಲಕರಾಗಿದ್ದ ಎಂ.ಎಸ್. ಗೋಲ್ವಲ್ಕರ್ ಹೀಗೆ ವಿವರಿಸುತ್ತಾರೆ: ಅವರ ಪ್ರಕಾರ ಬ್ರಿಟಿಷರ ವಿರುದ್ಧ ಹೋರಾಡುವುದು ಒಂದು ಪ್ರತಿಗಾಮಿ ನಡೆ. ಕೇವಲ ಬ್ರಿಟಿಷರ ವಿರುದ್ಧ ಹೋರಾಡುವುದು ರಾಷ್ಟ್ರೀಯ ಚಳುವಳಿಯಲ್ಲ ಮುಸ್ಲಿಮರ ವಿರುದ್ಧ ಹೋರಾಡುವುದೇ ನಿಜವಾದ ರಾಷ್ಟ್ರೀಯ ಹೋರಾಟ. ಆ್ಯಂಡರ್‌ಸನ್ ಮತ್ತು ಡಾಮ್ಲೆ ಅವರು ತಮ್ಮ 'Brotherhood in saffron' ಎಂಬ ಪುಸ್ತಕದಲ್ಲಿ ಬ್ರಿಟಿಷ್‌ರಿಂದ ನಿಷೇಧಕ್ಕೆ ಒಳಗಾಗದಿರುವ ಕಾರ್ಯತಂತ್ರದ ಭಾಗವಾಗಿ ಆರ್‌ಎಸ್‌ಎಸ್ ಸ್ವಾತಂತ್ರ್ಯ ಚಳುವಳಿಯಿಂದ ದೂರ ಉಳಿಯಿತು ಎಂದು ಬರೆಯುತ್ತಾರೆ.

ಹೀಗೆ ಆರ್‌ಎಸ್‌ಎಸ್, ಹಿಂದೂ ಮಹಾಸಭಾ ಮತ್ತು ಮುಸ್ಲಿಮ್ ಲೀಗ್ ನಂತಹ ಗುಂಪುಗಳು ಸ್ವಾತಂತ್ರ್ಯ ಚಳುವಳಿಯ ವಿರುದ್ಧವಾಗಿದ್ದವು. ಸ್ವಾತಂತ್ರ್ಯ ಚಳುವಳಿಯು ಪ್ರಜಾತಾಂತ್ರಿಕ ಮೌಲ್ಯಗಳನ್ನು ಹೊಂದಿದ್ದು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಿದರೆ ಈ ಜಾತ್ಯಾಧಾರಿತ ಗುಂಪುಗಳು ಸಾಮಾಜಿಕ ಅಸಮಾನತೆಯನ್ನು ನಂಬುತ್ತಿದ್ದುದರ ಪರಿಣಾಮವಾಗಿ ಇವು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳಲು ನಿರಾಕರಿಸಿದವು. ಆದರೆ ಪ್ರಜಾತಾಂತ್ರಿಕ ಮೌಲ್ಯಗಳನ್ನು ನಂಬಿದ ಹಿಂದುಗಳು, ಮುಸ್ಲಿಮರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು.

ಹಿಂದೂ ಬಲಪಂಥೀಯ ಊಳಿಗಮಾನ್ಯ ಮೌಲ್ಯಗಳಿಗೆ ಆಧಾರವಾದ ಹಿಂದುತ್ವ ಸಿದ್ಧಾಂತದ ಪ್ರತಿಪಾದಕ ಸಾವರ್ಕರ್ ಪ್ರಾರಂಭದಲ್ಲಿ ಬ್ರಿಟಿಷ್‌ವಿರೋಧಿ ಕ್ರಾಂತಿಕಾರಿಯೇ ಆಗಿದ್ದರು. ಆದರೆ ಬ್ರಿಟಿಷ್ ಅಧಿಕಾರಿಯೊಬ್ಬರ ಕೊಲೆಯ ಪ್ರಕರಣವೊಂದರಲ್ಲಿ ಶಿಕ್ಷೆಯಾಗಿ ಅಂಡಮಾನ್ ಸೆರೆಮನೆಯಲ್ಲಿ ಇದ್ದ ಅವಧಿಯಲ್ಲಿ ಅವರು ಸಂಪೂರ್ಣ ಬದಲಾಗಿ ಮುಂದೆ ಜೀವನ ಪರ್ಯಂತ ಯಾವ ರೀತಿಯ ಬ್ರಿಟಿಷ್ ವಿರೋಧೀ ಚಟುವಟಿಕೆಯಲ್ಲೂ ಪಾಲ್ಗೊಳ್ಳಲಿಲ್ಲ.

## ಸಾವರ್ಕರ್ ಅವರ ಕ್ಷಮಾಪಣಾ ಮನವಿಗಳ ಸರಮಾಲೆ

ಅಂಡಮಾನ್ ಜೈಲಿನಲ್ಲಿ ಖೈದಿಗಳನ್ನು ಅಮಾನುಷವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಅಲ್ಲಿ ನೀಡಲಾಗುತ್ತಿದ್ದ ಹಿಂಸೆಯನ್ನು ತಡೆದುಕೊಳ್ಳಲು ಸಾಧ್ಯವಾಗದೆ ಕೇವಲ ಒಂದೇ ತಿಂಗಳ ಸೆರೆವಾಸದ ನಂತರ ಅಂದರೆ ೧೯೧೧ರ ಆಗಸ್ಟ್ ೩೦ರಂದು ಸಾವರ್ಕರ್ ತಮ್ಮ ಪ್ರಥಮ ಕ್ಷಮಾಯಾಚನಾ ಪತ್ರವನ್ನು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದರು. ಅದು ತಿರಸ್ಕೃತಗೊಂಡಿತು. ೧೯೧೩ರ ನವೆಂಬರ್‌ನಲ್ಲಿ ಎರಡನೆಯ, ೧೯೧೭ರಲ್ಲಿ ಮೂರನೆಯ, ೧೯೨೦ರ ಮಾರ್ಚ್‌ನಲ್ಲಿ ನಾಲ್ಕನೆಯ ಮನವಿಯನ್ನು ಸಲ್ಲಿಸಿದರು.

ಈ ಮನವಿಗಳಲ್ಲಿ ಅವರು 'ಸರ್ಕಾರವು ಕೃಪೆ ಮಾಡಿ ತಮ್ಮನ್ನು ಬಿಡುಗಡೆ ಮಾಡಿದಲ್ಲಿ ಅಂಗ್ರೇಜಿ ಸರ್ಕಾರಕ್ಕೆ ನಿಷ್ಠೆಯಿಂದಿದ್ದು ಸಾಂವಿಧಾನಿಕ ಪ್ರಗತಿಯ ಕಟ್ಟಾ ಬೆಂಬಲಿಗನಾಗಿರುತ್ತೇನೆ' ಎಂದು ವಾಗ್ದಾನ ಮಾಡಿದರು. ಮುಂದುವರಿದು ಅವರು 'ಸಾಂವಿಧಾನಿಕ ಮಾರ್ಗಕ್ಕೆ ನಾನು ಪರಿವರ್ತನೆ ಹೊಂದುವುದು ಭಾರತದ ಒಳಗೆ ಮತ್ತು ಹೊರಗೆ ನನ್ನನ್ನು ಒಬ್ಬ ಮಾರ್ಗದರ್ಶಿ ಎಂದು ಪರಿಗಣಿಸುವ ಹಲವಾರು ಹಾದಿ ತಪ್ಪಿದ ಯುವಕರನ್ನು ಮರಳಿ ಹಿಂದಕ್ಕೆ ಕರೆತರಲು ಸಹಕಾರಿಯಾದೀತು. ಸರ್ಕಾರವು ಬಯಸುವ ಯಾವುದೇ ರೀತಿಯಲ್ಲೂ ಸೇವೆ ಮಾಡಲು ನಾನು ಸಿದ್ಧ. ನನ್ನ ಪರಿವರ್ತನೆಯು ಪ್ರಜ್ಞಾಪೂರ್ವಕವಾದದ್ದರಿಂದ ಭವಿಷ್ಯದಲ್ಲಿ ನನ್ನ ನಡವಳಿಕೆಯೂ ಸಹ ಹಾಗೇ ಇರುವುದು' ಎಂದು ಬ್ರಿಟಿಷ್ ಸರ್ಕಾರವನ್ನು ಬೇಡಿಕೊಂಡರು. ಆದರೆ ಸಾವರ್ಕರರು ಸಲ್ಲಿಸಿದ್ದ ಕ್ಷಮಾಪಣಾ ಮನವಿಯ ಬಗ್ಗೆ ತಿಳಿಯದೆ, ೧೯೨೦ರ ಪ್ರಾರಂಭದಲ್ಲಿ ಅವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕಾಂಗ್ರೆಸ್ ಚಳುವಳಿ ನಡೆಸಿತು.

ಸಾವರ್ಕರರ ಮನವಿಗಳು ಮತ್ತು ವಾಗ್ದಾನಗಳ ನಂತರ ೧೯೨೧ರ ಮೇ ತಿಂಗಳಲ್ಲಿ ಬ್ರಿಟಿಷ್ ಸರ್ಕಾರವು ಅವರನ್ನು ರತ್ನಗಿರಿ ಕಾರಾಗೃಹಕ್ಕೆ ವರ್ಗಾಯಿಸಿತು. ಅಂತಿಮವಾಗಿ ೧೯೨೪ರ ಜನವರಿ ೬ ರಂದು ಅವರನ್ನು ಬಿಡುಗಡೆ ಮಾಡಲಾಯಿತು. ಅವರ ಬಿಡುಗಡೆಗೆ ಮೊದಲು ಬ್ರಿಟಿಷ್ ಸರ್ಕಾರವು ಹಲವಾರು ಕಠಿಣ ನಿಬಂಧನೆಗಳನ್ನು ವಿಧಿಸಿತು. ಸಾವರ್ಕರರು ಈ ನಿಬಂಧನೆಗಳನ್ನು ಒಪ್ಪಿಕೊಂಡದ್ದು ಮಾತ್ರವಲ್ಲದೆ, 'ನನ್ನ ವಿಚಾರಣೆಯು ನ್ಯಾಯಬದ್ಧವಾಗಿ ನಡೆದಿದೆ. ನನಗೆ ನೀಡಲಾದ ಶಿಕ್ಷೆಯು ನ್ಯಾಯವಾಗಿದೆ. ಈ ಹಿಂದಿನ ದಿನಗಳಲ್ಲಿ ಕೈಗೊಂಡ ಹಿಂಸೆಗಾಗಿ ನಾನು ಅಸಹ್ಯ ಪಡುತ್ತೇನೆ. ನನ್ನ ಶಕ್ತಿಯಿರುವಷ್ಟು ನಾನು ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಭವಿಷ್ಯದಲ್ಲಿ ನನಗೆ ಅವಕಾಶ ದೊರೆತಿರುವ ಮಟ್ಟಿಗೆ ಸುಧಾರಣೆಗಳ ಜಾರಿಯನ್ನು ಯಶಸ್ವಿಗೊಳಿಸಲು ನಾನು ಸಮ್ಮತಿಸುತ್ತೇನೆ.' ಎಂಬ ಹೇಳಿಕೆಯನ್ನೂ ನೀಡಿದರು. ಇಲ್ಲಿ ಅವರು ಪ್ರಸ್ತಾಪಿಸುವ ಸುಧಾರಣೆಗಳು ಎಂದರೆ ರಾಷ್ಟ್ರೀಯ ಚಳುವಳಿಯ ಬೇಡಿಕೆಗಳನ್ನು ಪೂರೈಸದ ಕಾರಣಕ್ಕೆ ತಿರಸ್ಕರಿಸಲ್ಪಟ್ಟ ೧೯೧೯ರ ಮಾಂಟೆಗೋ-ಚೆಮ್ಸ್‌ಫೋರ್ಡ್ ಪಸ್ತಾಪಿಸಿದ ಸುಧಾರಣೆಗಳು.

ಸಾವರ್ಕರರನ್ನು ಬಿಡುಗಡೆ ಮಾಡಿದಾಗ ಬ್ರಿಟಿಷ್ ಸಕಾರವು ವಿಧಿಸಿದ್ದ ನಿಬಂಧನೆಗಳು ೧೯೩೭ರಲ್ಲಿ ಕಾಂಗ್ರೆಸ್ ಸರ್ಕಾರವು ಅಧಿಕಾರ ವಹಿಸಿಕೊಳ್ಳುವವರೆಗೆ ಜಾರಿಯಲ್ಲಿದ್ದವು. ಇದರ ನಂತರ ಅವರು 'ಹಿಂದೂ ಮಹಾ ಸಭಾ'ದ ಅಧ್ಯಕ್ಷರಾದರು. ಆಗ ಹಿಂದುತ್ವ ಸಂಘಟನೆಗಳು ಸಾವರ್ಕರರಿಗೆ 'ವೀರ ಸಾವರ್ಕರ್' ಎಂಬ ವಿಶೇಷಣವನ್ನು ನೀಡಿದವು. ಆದರೆ ಅವರ ಜೀವನಕ್ಕೆ ಸಂಬಂಧಿಸಿದ ಮೇಲಿನ ವಿವರಗಳನ್ನು ಗೌಪ್ಯವಾಗಿ ಇರಿಸಿದವು. ಈಗಲೂ ಅದೇ ಆಗುತ್ತಿದೆ.

## 'ಕ್ವಿಟ್ ಇಂಡಿಯಾ' ಚಳುವಳಿಗೆ ಸಹಕಾರ ಬೇಡ: ಸಾವರ್ಕರ್

ತಮ್ಮ ಜೀವಮಾನದಲ್ಲಿ ಮುಂದೆಂದೂ ಅವರು ಯಾವುದೇ ಬ್ರಿಟಿಷ್‌ವಿರೋಧಿ ಚಳುವಳಿಗಳಲ್ಲಿ ಪಾಲ್ಗೊಳ್ಳದಿದ್ದುದು ಮಾತ್ರವಲ್ಲ, ಪ್ರತಿಯಾಗಿ ಬ್ರಿಟಿಷ್ ಸೇನೆಗೆ ನಮ್ಮ ಯುವಕರನ್ನು ಸೆಳೆಯಲು ಕೂಡ ಅವರು ನೆರವಾದರು. ೧೯೩೭ರ ನಂತರದಲ್ಲಿ ಅವರ ಎಲ್ಲ ರಾಜಕೀಯ ನಡೆಗಳೂ ಅಂದಿನ ರಾಷ್ಟ್ರೀಯ ಚಳುವಳಿಗಳ ವಿರುದ್ಧವಾಗೇ ಇದ್ದವು. ಗಾಂಧೀಜಿಯವರ ನೇತೃತ್ವದ ೧೯೪೨ರ 'ಕ್ವಿಟ್ ಇಂಡಿಯಾ' ಚಳುವಳಿಯ ಕರೆಗೆ ಓಗೊಟ್ಟು ಬ್ರಿಟಿಷ್ ಸರ್ಕಾರದ ಸೇವೆಯಲ್ಲಿದ್ದ ಭಾರತೀಯರು ತಮ್ಮ ಹುದ್ದೆಗಳನ್ನು ತ್ಯಜಿಸುತ್ತಿದ್ದಾಗ, ಹಿಂದೂಗಳು ತಮ್ಮ ಹುದ್ದೆಗಳನ್ನು ತ್ಯಜಿಸಬಾರದೆಂದು ಸಾವರ್ಕರ್ ಅವರು ನೀಡಿದ ಕರೆಯನ್ನನುಸರಿಸಿ ಹಿಂದೂ ಸಂಘಟನೆಗಳಲ್ಲಿದ್ದ ಜನರು ತಮ್ಮ ಹುದ್ದೆಗಳಲ್ಲಿ ಮುಂದುವರಿದರು. ೧೯೪೨ರ ಆಗಸ್ಟ್ ೩೧ರಂದು ಎಲ್ಲ 'ಹಿಂದು ಮಹಾಸಭಾ' ಸದಸ್ಯರು ತಮ್ಮ ಹುದ್ದೆಗಳಲ್ಲಿ ಮುಂದುವರಿಯಬೇಕೆಂದು ಸಭಾದ ಕಾರ್ಯಕಾರಿ ಸಮಿತಿಯು ನಿರ್ಣಯವನ್ನೇ ಕೈಗೊಂಡಿತು.

ಪುರೋಹಿತಶಾಹಿ ಹಿಂದುತ್ವವನ್ನು ರಾಷ್ಟ್ರೀಯತೆಯೊಂದಿಗೆ ಬೆರೆಸಿದ 'ಕೀರ್ತಿ 'ಹಿಂದುತ್ವದ ಪ್ರಥಮ ಪ್ರವರ್ತಕರಾದ ಸಾವರ್ಕರ್ ಅವರಿಗೆ ಸಲ್ಲಬೇಕು. ಸಾವರ್ಕರರ ಪ್ರಾರಂಭಿಕ ಬ್ರಿಟಿಷ್ ವಿರೋಧಿ ಹೋರಾಟವು ಆಸಕ್ತಿದಾಯಕವಾಗಿದ್ದರೂ ಅಂಡಮಾನ್ ಕಾರಾಗೃಹದಿಂದ ಬಿಡುಗಡೆಯಾದ ನಂತರದಲ್ಲಿ ಅವರು ಹಿಂದುತ್ವದ ಪ್ರತಿಪಾದಕರಾಗಿ ದ್ವೇಷದ ರಾಜಕಾರಣವನ್ನು ಬಲಗೊಳಿಸುವ ದಿಸೆಯಲ್ಲಿ ಮತ್ತು ಮತೀಯವಾದಿ ಆರ್‌ಎಸ್‌ಎಸ್‌ನಿಂದ ಬೇಕೆಂದೇ ದೂರದಲ್ಲಿದ್ದುಕೊಂಡು ಆ ಸಂಸ್ಥೆಯನ್ನು ಬಲಗೊಳಿಸುವಲ್ಲಿ ಕ್ರಿಯಾಶೀಲರಾದರು.

## ಹಿಂದೂ ಯಾರು? ಸಾವರ್ಕರರ ಹೊಸ ವ್ಯಾಖ್ಯಾನ

೧೯೨೩ ರಲ್ಲಿ ನಾಗಪುರದಲ್ಲಿ ಬಿಡುಗಡೆಯಾದ ಅವರ 'ಹಿಂದುತ್ವ : ಹಿಂದು ಎಂದರೆ ಯಾರು?' ಎಂಬ ಪುಸ್ತಕದಲ್ಲಿ ಅವರು 'ಇತಿಹಾಸದ ಆರಂಭದಲ್ಲಿ ಭಾರತದಲ್ಲಿ ನೆಲೆಗೊಂಡ ಆರ್ಯರು ಹಿಂದೂಗಳಾಗಿ ಒಂದು ರಾಷ್ಟ್ರವಾಗಿದ್ದರು. ಹಿಂದೂಗಳು ಒಂದು ಸಮಾನ ಪಿತೃಭೂಮಿಯ ಬಗೆಗಿನ ಪ್ರೀತಿಯಿಂದ ಮಾತ್ರವಲ್ಲದೆ ನಮ್ಮ ಧಮನಿಗಳಲ್ಲಿ ಹರಿದು ನಮ್ಮ ಹೃದಯಗಳನ್ನು ಮಿಡಿಯುವಂತೆ ಮಾಡಿ ಬೆಚ್ಚನೆಯ ಪ್ರೀತಿಯನ್ನು ಉಂಟುಮಾಡುತ್ತಿರುವ ಸಮಾನ ರಕ್ತದಿಂದಲೂ, ನಮ್ಮ ಮಹಾನ್ ನಾಗರೀಕತೆಗೆ, ಹಿಂದೂ ಸಂಸ್ಕೃತಿಗೆ ನಾವು ನೀಡುವ ಗೌರವದಿಂದಲೂ ನಾವು ಒಂದಾಗಿದ್ದೇವೆ' ಎಂದು ಪ್ರತಿಪಾದಿಸುತ್ತಾರೆ.

ಸಾವರ್ಕರರ ಪ್ರಕಾರ ಹಿಂದುತ್ವವು, ಭೌಗೋಳಿಕ ಏಕತೆ, ಜನಾಂಗೀಯ ಲಕ್ಷಣಗಳು, ಮತ್ತು ಸಾಮಾನ್ಯ ಸಂಸ್ಕೃತಿ ಎಂಬ ಮೂರು ಆಧಾರ ಸ್ತಂಭಗಳನ್ನು ಆಧರಿಸಿ ನಿಂತಿದೆ. ಅವರ ಪ್ರಕಾರ ಈ ನೆಲವನ್ನು ಯಾರು ತಮ್ಮ ಪಿತೃಭೂಮಿ ಮತ್ತು ತಮ್ಮ ಪವಿತ್ರ ಭೂಮಿ ಎಂದು ಭಾವಿಸುತ್ತಾರೋ ಅವರೆಲ್ಲರೂ ಹಿಂದೂಗಳು ಮತ್ತು ಈ ನೆಲ ಅವರಿಗೆ ಮಾತ್ರವೇ ಸೇರುತ್ತದೆ. ಇದರರ್ಥ ಕ್ರಿಶ್ಚಿಯನ್ನರ ಪವಿತ್ರ ಭೂಮಿ ಜೆರೂಸಲೆಮ್, ಮತ್ತು ಮುಸ್ಲಿಮರ ಪವಿತ್ರ ಭೂಮಿ ಮೆಕ್ಕಾ ಆಗಿರುವುದರಿಂದ ಸಹಜವಾಗಿಯೇ ಅವರು ಈ ಭೂಮಿಯ ಹಕ್ಕು ಹೊಂದಿರುವ ಹಿಂದೂಗಳಿಗೆ ಸಮಾನರಲ್ಲ. ಹೀಗೆ ಸಾವರ್ಕರರು ಮುಸ್ಲಿಮರ ದೇಶಪ್ರೇಮವನ್ನು ಸಂದೇಹಿಸುವಂತೆ ಮಾಡಿದರು. 'ಕೆಲವೊಮ್ಮೆ ಸಂಸ್ಕೃತಿ ಮಾತ್ರವಲ್ಲದೆ ಪುಣ್ಯ ಭೂಮಿಯ ಬಂಧನವು ಮಾತೃಭೂಮಿಯ ಬಂಧನಕ್ಕಿಂತ ಪ್ರಬಲವಾಗುತ್ತದೆ. ಮುಸ್ಲಿಮರಿಗೆ ಮೆಕ್ಕಾವು ದೆಹಲಿ ಅಥವಾ ಆಗ್ರಾಕ್ಕಿಂತ ಹೆಚ್ಚು ಎಂಬುದು ಕಟು ವಾಸ್ತವ' ಎಂಬುದು ಅವರ ವಾದ.

## ಸಾವರ್ಕರರ ಕಟ್ಟಾ ಅಭಿಮಾನಿಯಾಗಿದ್ದ ಗೋಡ್ಸೆ

ಸಾವರ್ಕರರ ರಾಜಕಾರಣವು ಗಾಂಧೀಜಿಯವರ ರಾಜಕಾರಣಕ್ಕೆ ಸಂಪೂರ್ಣ ವಿರುದ್ಧವಾದುದು. ಅವರು ಭಾರತದ ರಾಷ್ಟ್ರೀಯತೆಯ ಪ್ರತಿನಿಧಿಯಾದ ಗಾಂಧೀಜಿಯವರನ್ನು ಒಬ್ಬ ರಾಜಿಕೋರ, ಮುಸ್ಲಿಮರ ಓಲೈಕೆದಾರ ಎಂದು ಕರೆಯುತ್ತಾರೆ. ಬ್ರಿಟಿಷರು ಹೊರಹೋದ ನಂತರ ಉಳಿಯುವ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ನಮ್ಮ ಶತ್ರುಗಳು. 'ಹಿಂದುತ್ವದ' ಮೂಲಕ ಮಾತ್ರ ಅವರನ್ನು ಸೋಲಿಸಬಹುದು ಎಂಬುದು ಅವರ ಪ್ರತಿಪಾದನೆ. ಗಾಂಧೀಜಿಯವರನ್ನು ಹತ್ಯೆ ಮಾಡಿದ ಗೋಡ್ಸೆಯು ಸಾವರ್ಕರರ ಕಟ್ಟಾ ಅನುಯಾಯಿ ಎಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಗಾಂಧೀಜಿಯವರ ಹತ್ಯೆಯಲ್ಲಿ ಸಾವರ್ಕರರು ಸಹ ಒಬ್ಬ ಆರೋಪಿಯಾಗಿದ್ದು, ಅವರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆಯದೇ ಹೋದದ್ದರಿಂದ ಮತ್ತು ಕೊಲೆಯ ಆರೋಪವನ್ನು ಗೋಡ್ಸೆ ತಾನೊಬ್ಬನೇ ಹೊತ್ತದ್ದರಿಂದ ಸಾವರ್ಕರರನ್ನು ಖುಲಾಸೆಗೊಳಿಸಲಾಯಿತು.

## ಸಾವರ್ಕರ್ ಪುರಾಣ ಸೃಷ್ಟಿ

ಇಂದು ಸಾವರ್ಕರರನ್ನು ಕೀರ್ತಿಸುವುದಕ್ಕಾಗಿ ಅವರ ಅನುಯಾಯಿಗಳು ಅಂದಿನ ಘಟನೆಗಳ, ಅವರ ಬರಹಗಳ ಹುಸಿ ವ್ಯಾಖ್ಯಾನ ಮಾಡುತ್ತಿದ್ದಾರೆ ಮತ್ತು ಹಲವಾರು ಹೊಸ ವಿಚಾರಗಳನ್ನು ಹೊಸೆದು ಅವರಿಗೆ ಆರೋಪಿಸುತ್ತಿದ್ದಾರೆ. ಬಿಡುಗಡೆಯ ನಂತರ ಬ್ರಿಟಿಷ್ ವಿರೋಧಿ ಲೇಖನಗಳನ್ನು ಅವರು ಬರೆದರು ಎಂಬುದು ಶುದ್ಧ ಸುಳ್ಳು. ಅವರ ಬರಹಗಳಿಂದ ಅಧಿಕೃತ ಪ್ರಕಟಣೆಗಳಿಂದ ಇತರೆ ಮೂಲಗಳಿಂದ ದೊರೆಯುವ ನೈಜ ಇತಿಹಾಸವನ್ನು ಮರೆಮಾಚಿ ಒಂದು ಸಾವರ್ಕರ್ ಪುರಾಣವನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿವೆ. ಇತ್ತೀಚೆಗೆ ಇವರು ಹರಿಯಬಿಡುತ್ತಿರುವ ಒಂದು ವಾದವೆಂದರೆ, ಹೇಗಿದ್ದರೂ ಸ್ವಾತಂತ್ರ್ಯ ದೊರೆತೇ ದೊರೆಯುತ್ತದೆ ಎಂಬುದು ಸಾವರ್ಕರ್‌ಗೆ ತಿಳಿದಿತ್ತು, ಹಾಗಿರುವಾಗ ಅನಗತ್ಯವಾಗಿ ಹೋರಾಟ ನಡೆಸಿ ವೃಥಾ ಶ್ರಮ ಏಕೆ ಪಡಬೇಕು ಎಂಬುದು. ಹಾಗೇ, ಬ್ರಿಟಿಷರಿಗೆ ಅವರು ಬರೆದ ಕ್ಷಮಾಯಾಚನಾ ಪತ್ರ ಕೂಡ ಒಂದು ಚಾಣಾಕ್ಷ ತಂತ್ರ ಎಂಬ ವಾದವನ್ನು ಸಾವರ್ಕರರ ಅನುಯಾಯಿಗಳು ತೇಲಿಬಿಡುತ್ತಿದ್ದಾರೆ. ಸಾವರ್ಕರರ ಕ್ಷಮಾಯಾಚನಾ ಮನವಿಯನ್ನು ಭಗತ್‌ಸಿಂಗ್‌ರ ಪತ್ರದೊಂದಿಗೆ ಹೋಲಿಸಬೇಕು. ತನ್ನ ಮಗನನ್ನು ಬಿಡುಗಡೆ ಮಾಡುವಂತೆ ಪ್ರಾರ್ಥಿಸಿ ಭಗತ್‌ಸಿಂಗ್‌ರ ತಂದೆ ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಬಯಸಿದಾಗ ಹಾಗೆ ಮಾಡಲೇಕೂಡದೆಂದು ಭಗತ್‌ಸಿಂಗ್ ತಮ್ಮ ತಂದೆಗೆ ತಾಕೀತು ಮಾಡುತ್ತಾರೆ. ಕೊನೆಯವರೆಗೂ ತಾವು ಬ್ರಿಟಿಷ್ ಸರ್ಕಾರಕ್ಕೆ ಮಾಡಿದ ವಾಗ್ದಾನವನ್ನು ಸಾವರ್ಕರ್ ಪಾಲಿಸಿದ್ದು ಮಾತ್ರವಲ್ಲದೆ ಹಿಂದುತ್ವದ ಸಿದ್ಧಾಂತವನ್ನು ಪ್ರತಿಪಾದಿಸುವುದರ ಮೂಲಕ ಮತೀಯ ಬಿರುಕುಗಳನ್ನು ಹೆಚ್ಚಿಸಿ ಸ್ವಾತಂತ್ರ್ಯ ಚಳುವಳಿಯನ್ನೆ ಅವರು ಅಸ್ಥಿರಗೊಳಿಸಿದರು.

**(ವೃತ್ತಿಯಿಂದ ಜೀವ ವೈದ್ಯಕೀಯ ಶಾಸ್ತ್ರದ ಪ್ರಾಧ್ಯಾಪಕರಾದ ಡಾ. ರಾಮ್ ಪುನಿಯಾನಿ, ಮುಂಬೈನ ಐ.ಐ.ಟಿ.ಯ ವೈದ್ಯಕೀಯ ಅಧಿಕಾರಿಯಾಗಿದ್ದಾಗ ಸ್ವಯಂನಿವೃತ್ತಿ ಪಡೆದು ದೇಶದಲ್ಲಿನ 'ಮತೀಯ ಮೂಲಭೂತವಾದ' ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಈ ವಿಷಯದ ಬಗ್ಗೆ ಅನೇಕ ಕೃತಿಗಳನ್ನು ರಚಿಸಿದ್ದಾರೆ)**



**(ಕೃಪೆ ಜನತಾ, ಆಗಸ್ಟ್ ೧೨-೧೯, ೨೦೧೮)**

# ರಾಷ್ಟ್ರ, ಪ್ರಭುತ್ವ, ಧರ್ಮ, ಅಧ್ಯಾತ್ಮ ಇತ್ಯಾದಿ

–ಲಕ್ಷ್ಮೀಶ ತೋಳ್ಪಾಡಿ

**ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಇದೇ ಜನವರಿ ೧೨ ಹಾಗೂ ೧೩ರಂದು ಕುಪ್ಪಳಿಯಲ್ಲಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ 'ರಾಷ್ಟ್ರೀಯತೆಯ ಅರ್ಥ-ಅಪಾರ್ಥಗಳು' ಎಂಬ ವಿಷಯ ಕುರಿತು ಆಯೋಜಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಭಾಷಣದ ಆಯ್ದ ಭಾಗಗಳು ಇಲ್ಲಿವೆ-ಸಂ.**

**ಕು**ವೆಂಪು ಅವರು ತಮ್ಮ 'ಮಲೆಗಳಲ್ಲಿ ಮದುಮಗಳು' ಎಂಬ ಅದ್ಭುತವಾದ ಕಾದಂಬರಿಯಲ್ಲಿ ನಿಜಕ್ಕೂ ನಾವು ಮಾಡಬೇಕಾದ ಕೆಲಸ ಏನು? ಎನ್ನುವುದರ ಬಗ್ಗೆ ಸಂದರ್ಭವನ್ನು ಕಟ್ಟುತ್ತಾ ಅಲ್ಲಿ ಒಂದು ಪಾತ್ರದ ಮೂಲಕ ಹೇಳಿಸುತ್ತಾರೆ. ಅದೇನಂತಂದ್ರೆ ನಾವು ಎಚ್ಚರಗೊಳ್ಳುತ್ತಾ, 'ಸ್ಥಳೀಯ ದೇವತೆಗಳನ್ನು ಜಾಗರಗೊಳಿಸುವ, ಎಚ್ಚರಿಸುವ ಕೆಲಸ' ಎಂಬುದಾಗಿ. ಇದು ಬಹಳಾ ಅರ್ಥಪೂರ್ಣವಾದ ಮತ್ತು ಮಾರ್ಗದರ್ಶಕವಾದ ಮಾತು. ನನಗೆ ನಮ್ಮ ನಾಗಭೂಷಣ ಅವರು ತಮ್ಮ ಆರೋಗ್ಯವನ್ನೂ ಮೀರಿದ ಉತ್ಸಾಹ ಮತ್ತು ಅವರ ಸ್ನೇಹಿತರಲ್ಲಿ ಕಾಣುವ ಹುರುಪನ್ನು ನೋಡಿದಾಗ ಇವರು ನಿಜಕ್ಕೂ ಮಾಡುತ್ತಿರುವ ಕೆಲಸ ಈ ಸ್ಥಳೀಯ ದೇವತೆಗಳನ್ನು ಜಾಗರಿಸುವ ಕೆಲಸವೇ ಎಂದು ಅನಿಸುತ್ತಿದೆ. ನಮ್ಮ ಸುತ್ತ ಮುತ್ತ ಇರುವಂತಹ ಜನರನ್ನು ಅವರು ನಿಜವಾಗಿ ಯೋಚಿಸುವಂತೆ ಮಾಡುವ ಕೆಲಸ.

ಪ್ರತಿಯೊಬ್ಬರಲ್ಲಿಯೂ ಯೋಚನೆ ಮಾಡತಕ್ಕ ಸಾಮರ್ಥ್ಯ ಇದೆ. ಮತ್ತು ಪ್ರತಿಯೊಬ್ಬರಲ್ಲೂ ಎರಡು ರೀತಿಯ ಮನಸ್ಸು ಇದೆ. ಒಂದು ಮನಸ್ಸು'ಖಾಸಗಿ'ತನದ ಅಂದರೆ ತನ್ನದೇ ಆಗಿರತಕ್ಕ ವೈಯಕ್ತಿಕ ಮನಸ್ಸು. ಪ್ರೈವೇಟ್ ಮೈಂಡ್ ಎನ್ನುತ್ತೇವಲ್ಲ, ಅದು. ಇನ್ನೊಂದು 'ಮಾಬ್' ಮನಸ್ಸು. ಅದು ಪ್ರತಿಯೊಬ್ಬರಲ್ಲಿಯೂ ಇದೆ. ಮಾಬ್ ಅಂದರೆ ಸಮೂಹ ಸನ್ನಿಗೆ ಒಳಗಾಗುವ ಮನಸ್ಸು. ಇದು ಗುಂಪಿನ ಪ್ರಭಾವಕ್ಕೊಳಗಾಗುವ, ನಾವು ನಾವಾಗಿರದ ಮತ್ತು ಗಲಭೆ ಎಬ್ಬಿಸತಕ್ಕ ಮನಸ್ಸು ಎಂದರೂ ಎನ್ನಬಹುದು. ಆ ಮನಸ್ಸು ಆವರಿಸಿಕೊಂಡಾಗ ನಾವು ಏನಾಗಿರುತ್ತೇವೆ, ಏನು ಮಾಡುತ್ತೇವೆ ಎಂದು ಹೇಳಲು ಯಾವ 'ಜೋಯಿಸ'ರಿಗೂ ಸಾಧ್ಯವಿಲ್ಲ. ಸಾಮಾನ್ಯವಾಗಿ ರಾಜಕೀಯದವರು, ಮುಖಂಡರು, ಸಾಮಾಜಿಕ ನಾಯಕರು ಯಾರೆಲ್ಲ ತಮ್ಮದೇ ಆದ ಒಂದು ಅಜೆಂಡಾವನ್ನು ಇಟ್ಟುಕೊಂಡಿರುತ್ತಾರೋ ಅವರು, ಸತ್ಯವನ್ನು ಈಗಾಗಲೇ ಶೋಧನೆ ಮಾಡಿಯಾಗಿದೆ; ತಾವು ಕಂಡದ್ದೇ ಸತ್ಯ, ಅದನ್ನು ಹೇರುವುದು ಮಾತ್ರ ತಮ್ಮ ಮುಖ್ಯವಾದ ಕೆಲಸ ಎಂದು ತಿಳಿದುಕೊಂಡು ಅದಕ್ಕೆ ಬೇಕಾದ ತಂತ್ರಗಳನ್ನೆಲ್ಲ ಮಾಡುತ್ತಿರುತ್ತಾರೆ.

ಇಂತಹ ಜನರು ಎಲ್ಲ ಕಾಲದಲ್ಲಿಯೂ ಇರುತ್ತಾರೆ. ಈ ತಂತ್ರಗಳಿಗೆ ಬಲಿಯಾಗತಕ್ಕ ಒಂದು ಮನಸ್ಸಿನ ಭಾಗವು ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ಈ ಮನಸ್ಸು ಉದ್ದೀಪನಗೊಂಡರೆ ಅದು ವ್ಯಕ್ತಿಯ ವಿವೇಕವನ್ನು ಕಳೆದು ವಿಚ್ಛಿದ್ರಕಾರಕವಾಗಿ ಪರಿಣಮಿಸುವುದು ನಾವು ನೋಡಿದ್ದೇವೆ. ಹಾಗಾಗಿ ವ್ಯಕ್ತಿಯ ಖಾಸಗಿ ಮನಸ್ಸು ಎಂಬುದಿದೆಯಲ್ಲ, 'ಇದೆಲ್ಲ ಏನು, ಯಾತಕ್ಕೆ, ಏಕೆ ಹೀಗಿದೆ?' ಎಂದು ಪ್ರಶ್ನಿಸಿಕೊಳ್ಳುವ, ವಿಚಾರ ಮಾಡುವ ಮನಸ್ಸು, ಅದನ್ನು ಜಾಗೃತಗೊಳಿಸುವ, ಉದ್ದೀಪನಗೊಳಿಸುವ ಕೆಲಸ ನಿರಂತರವಾಗಿ ಆಗುತ್ತಾ ಇರಬೇಕಾಗುತ್ತದೆ. ಈ ಕೆಲಸವೆಂದರೆ, ಈ 'ಮಾಬ್' ಮನಸ್ಸನ್ನು ಹದ್ದುಬಸ್ತಿಗೆ ತರುವ ಮಾರ್ಗವೆಂದರೆ ನಮ್ಮದೇ ಆದ ಖಾಸಗಿ ಮತ್ತು ಸ್ವತಂತ್ರ ಮನಸ್ಸನ್ನು ಕಂಡುಕೊಳ್ಳುವುದು ಮತ್ತು ಆ ಮನಸ್ಸಿನಿಂದ ಸನ್ನಿವೇಶಗಳನ್ನು ನೋಡುವುದು, ಆಲೋಚಿಸುವುದು ಮತ್ತು ಧ್ಯಾನಿಸುವುದು. ಈ ಕೆಲಸವನ್ನು ನಾಗಭೂಷಣ ಅವರು ನಡೆಸುತ್ತಿರುವಂಥ ಇಂಥ ಸಣ್ಣ ಸಣ್ಣ ಪ್ರಯತ್ನಗಳ, ಪ್ರಯೋಗಗಳ ಮೂಲಕ ಮಾತ್ರ ಆಗಲು ಸಾಧ್ಯ ಮತ್ತು ಅದು ಹಾಗೆಯೇ ಆಗಬೇಕಿದೆ. ಶಿಬಿರಾರ್ಥಿಗಳು ಸಂಖ್ಯೆಯಲ್ಲಿ ಕಡಿಮೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಒಂದು ರೀತಿಯಲ್ಲಿ ಅದು ಒಳ್ಳೆಯದೇ ಅನಿಸುತ್ತದೆ. ಬಹುಶಃ ನೀವು ಗಮನಿಸಿರಬಹುದು ನೋಡಿ, ಒಂದು ಕಡೆ ಜನ ಹೆಚ್ಚಾದಷ್ಟೂ ಅವರ ಮನಸ್ಸಿನಲ್ಲಿ ಒಂದು ರೀತಿಯ 'ಗುಂಗಾಗುವುದು' ಉದ್ರಿಕ್ತಗೊಳ್ಳುವುದು. ಕಡಿಮೆ ಇದ್ದಷ್ಟೂ ಹೆಚ್ಚುಹೆಚ್ಚು ಗಂಭೀರತೆಗೆ ಒಳಗಾಗುವುದು. ಈ ಗಂಭೀರತೆ ಇಲ್ಲದೆ ಯಾವ ನಿಜವಾದ ಪ್ರಶ್ನೆಗಳು ಹುಟ್ಟುವುದೇ ಇಲ್ಲ. ಪ್ರಶ್ನೆ ಹುಟ್ಟದೆ ಉತ್ತರವೂ ಹೊಳೆಯುವುದಿಲ್ಲ. ಹಾಗಾಗಿ 'ನಮ್ಮದೇ ಖಾಸಗಿ ಮನಸ್ಸನ್ನು' ಅದು ಕಳೆದು ಹೋಗದಂತೆ, ಪಡೆಯುವ, ಕಂಡುಕೊಳ್ಳುವ, ಕಾಪಿಟ್ಟುಕೊಳ್ಳುವ ದೊಡ್ಡದಾದ, ಆದರೆ ಮಾಡಲೇಬೇಕಾದ ಕೆಲಸವನ್ನು ನಾಗಭೂಷಣ ಮತ್ತು ಸ್ನೇಹಿತರು ಮಾಡುತ್ತಿದ್ದಾರೆ.

## ರಾಷ್ಟ್ರ ವಿಭಜನೆಯ ವಿವರಣೆ: ಕೆಲವು ಪ್ರಶ್ನೆಗಳು

ನಾನು ನಿನ್ನೆನೆ ಬರಬೇಕಾಗಿತ್ತು. ಮುಖ್ಯವಾದ ಮಾತುಗಳು ನಾನು ತಪ್ಪಿಸಿಕೊಂಡೆ ಎನಿಸಿತು. ಆದರೆ ಅದು ಆಗಿ ಹೋಗಿದೆ. ನಾಗಭೂಷಣ ಅವರು ನನಗಿಂತಲೂ ಎರಡು ವರುಷ ಸಣ್ಣವರಾಗಿದ್ದರಿಂದ ನನ್ನನ್ನು ಕ್ಷಮಿಸಲೇಬೇಕು. ಇವತ್ತು ಬಂದೆ. ಒಳ್ಳೆಯ ಮಾತುಕತೆಗಳೆಲ್ಲ ಕೇಳಲು ಸಿಕ್ಕಿತು ಹಾಗು ಅದರಿಂದ ನನಗೆ ಒಳ್ಳೆಯ ಲಾಭವಾಗಿದೆ. ಬೇರೆಬೇರೆ ರೀತಿಯಲ್ಲಿ ರಾಷ್ಟ್ರ ಎಂಬ ಪರಿಕಲ್ಪನೆಯು, ಅದರ ಬಗ್ಗೆ ಒಂದು ಖಚಿತವಾದ ಮತ್ತು ಒಮ್ಮತದ ನಿಲುವು ಇಲ್ಲದೆ ಇದ್ದದ್ದರಿಂದ, ಸ್ವಾತಂತ್ರ್ಯ ಹೋರಾಟದ ವಿವಿಧ ಧಾರೆಗಳು ಹೊಂದಾಣಿಕೆ ಮಾಡಿಕೊಳ್ಳದೆ ಇದ್ದದ್ದರಿಂದ, ಅಥವಾ ಅದನ್ನು ಪಡೆದುಕೊಳ್ಳುವುದು ಅಷ್ಟು ಸುಲಭಸಾಧ್ಯವಲ್ಲದೇ ಇದ್ದದ್ದರಿಂದಲೇ ಭಾರತ ವಿಭಜನೆಗೆ ಕಾರಣವಾಯಿತು ಎಂಬ ಕುರಿತು ಸಾಕಷ್ಟು ಆಳವಾದ ವಿಚಾರಗಳು ಮೂಡಿಬಂದಿತು. ಸರಿ, ಅದನ್ನು ತಾತ್ವಿಕವಾಗಿ ಒಪ್ಪೋಣ. ಆದರೆ ಕಾಂಗ್ರೆಸ್ಸಿನಲ್ಲಿಯೇ ಆಂತರಿಕವಾಗಿ ಅನೇಕ ಭಿನ್ನ ಭಿನ್ನ ಧಾರೆಗಳು ಇದ್ದಾಗ್ಯೂ, ಬೇರೆಬೇರೆ ತೀರಾ ವಿರುದ್ಧವಾಗಿ ಇರುವಂಥ ಸ್ತರಗಳು ಇದ್ದರೂ ಕೂಡ ಒಂದು ಹಂತ ಬರುವವರೆಗೂ ಅವರೆಲ್ಲರೂ ವಿಭಜನೆಯ ವಿಚಾರಕ್ಕೆ ವಿರುದ್ಧವಾಗಿದ್ದದ್ದು ಏಕೆ? ಒಂದು ಹಂತ ಬಂತು. ಅದು ೧೯೪೭ರ ಸಮಯ. ಆಗ ತೀರ ವಾಸ್ತವವನ್ನು ಒಪ್ಪಿಕೊಂಡವರು, ವ್ಯವಹಾರಿಕವಾಗಿದ್ದವರು ವಿಭಜನೆಯನ್ನು ಒಪ್ಪಿಕೊಳ್ಳುವುದೇ ಒಳ್ಳೆಯದು ಎಂಬ ತೀರ್ಮಾನಕ್ಕೆ ಬರುತ್ತಾರೆ. ಆದರೆ ಅದುವರೆಗೂ ಕಾಂಗ್ರೆಸ್ಸಿನ ಒಳಗೇ, ಭಿನ್ನ ಧಾರೆಗಳಲ್ಲಿ, ಸ್ತರಗಳಲ್ಲಿ ಇದ್ದವರು, ವಿಭಜನೆಗೆ ಒಪ್ಪದೇ ಇದ್ದದು ಏಕೆ? ಆ ಒಪ್ಪದೇ ಇದ್ದಂಥ ಮನಸ್ಸು ಎಂತದ್ದು? ಆ ಒಪ್ಪದೇ ಇದ್ದಂಥ ಮಾನಸಿಕತೆಯಲ್ಲಿ, ಅವರಿಗೇ ಗೊತ್ತಿಲ್ಲದೆ, ರಾಷ್ಟ್ರ ಅಥವಾ ದೇಶ ಎಂಬುದರ ಬಗ್ಗೆ ಒಂದು ಪರಿಕಲ್ಪನೆ ಇದ್ದಿರಬೇಕಲ್ಲ! ಅಂಥ ಪರಿಕಲ್ಪನೆ ಯಾವುದು? ನನ್ನಲ್ಲಿ ಹುಟ್ಟುತ್ತಿರುವ, ಕಾಡುತ್ತಿರುವ ಕೆಲವೊಂದು ಪ್ರಶ್ನೆಗಳನ್ನು ನಿಮ್ಮ ಮುಂದೆ, ನಿಮ್ಮನ್ನು ಇನ್ನಷ್ಟು ಗೊಂದಲಗೊಳಿಸಲು, ಇಡಲು ಇಚ್ಛಿಸುತ್ತೇನೆ.



## ರಾಷ್ಟ್ರ ಮತ್ತು ಧರ್ಮ: ಗಾಂಧಿ-ಜಿನ್ನಾ-ಅಂಬೇಡ್ಕರ್ ಸಂವಾದ

ಜಿನ್ನಾ ಅವರಿಗೆ ಪ್ರತ್ಯೇಕ ರಾಷ್ಟ್ರ ಬೇಕಾಗಿತ್ತು. ಆದರೆ ಅವರು ಯಾವ ರೀತಿಯಿಂದಲೂ ಧಾರ್ಮಿಕರಾಗಿರಲಿಲ್ಲ. ಅವರು ತಥಾಕಥಿತ ಸೆಕ್ಯುಲರ್ ಎನ್ನಿಸಿಕೊಂಡವರು. ಧರ್ಮದ ಬಗ್ಗೆ ಅವರಿಗೆ ವಿಶ್ವಾಸವೇ ಇರಲಿಲ್ಲ. ಮತ್ತು ಪಾಕಿಸ್ತಾನವನ್ನು ಇಸ್ಲಾಮಿಕ್ ರಾಷ್ಟ್ರವನ್ನಾಗಿ ಮಾಡಲು ಇಷ್ಟವಿರಲಿಲ್ಲ. ಆಲೋಚನೆ ಮಾಡಿ. ಹೀಗಿದ್ದರೂ ಕೆಲ ಮತಾಂಧರು, ಮುಲ್ಲಾಗಳ ಒತ್ತಡದಿಂದಾಗಿ ಪಾಕಿಸ್ತಾನವು ಇಸ್ಲಾಮಿಕ್ ರಾಜ್ಯವಾಯಿತು. ಜಿನ್ನಾ ಅವರನ್ನು ಕೊಂದುಹಾಕಿದ್ದು ಎಂಬ ವದಂತಿಯೂ, ವಾದವೂ ಇದೆ ಅದು ಸತ್ಯವಾಗಿರಲಿಕ್ಕೂ ಸಾಕು. ಹೇಳಲು ಬರುವುದಿಲ್ಲ. ಏನೇ ಆಗಲಿ. ಆಮೇಲೆ ಅವರು ಹೆಚ್ಚು ದಿನ ಬದುಕಲೂ ಇಲ್ಲ ಅನ್ನಿ. ಅವರು ಪ್ರತ್ಯೇಕ ರಾಷ್ಟ್ರಕ್ಕೆ ಪಟ್ಟು ಹಿಡಿದಿದ್ದರು.

ಆದರೆ ಅಂಬೇಡ್ಕರ್ ಅವರು ಧಾರ್ಮಿಕವಾಗಿದ್ದವರು. ಅವರು ಪ್ರತ್ಯೇಕ ರಾಜ್ಯ ಕೇಳಬಹುದಾಗಿತ್ತು. ಆದರೆ ಅವರಿಗೆ ಪ್ರತ್ಯೇಕ ಧರ್ಮ ಬೇಕಾಯಿತು. ಪ್ರತ್ಯೇಕ ಮತ ಕ್ಷೇತ್ರಗಳನ್ನು ಕೇಳಿದರು. ಈ ಇಬ್ಬರ ಹತ್ತಿರವೂ ಸಂವಾದ ಮಾಡುವುದಕ್ಕೆ, ಸಂಧಾನ ಮಾಡುವುದಕ್ಕೆ, ಸಾಧ್ಯವಿದ್ದ ಒಬ್ಬನೇ ವ್ಯಕ್ತಿ ಎಂದರೆ ಗಾಂಧಿ ಮಾತ್ರ. ಆ ಇಬ್ಬರಿಗೂ ಗಾಂಧಿಯೊಡನೆ ಮಾತ್ರ ಸಂವಾದ ಮಾಡಲು ಸಾಧ್ಯವಾಗಿತ್ತು. ಇಬ್ಬರ ಮನಸ್ಸನ್ನೂ ಅರ್ಥ ಮಾಡಿಕೊಂಡು ತಮ್ಮ ಮನಸ್ಸನ್ನು ತೋಡಿಕೊಳ್ಳಲು ಸಾಧ್ಯವಾಗಿದ್ದು ಗಾಂಧಿಗೆ ಮಾತ್ರ. ಹಾಗಾದರೆ ತನ್ನ ದೇಶದಲ್ಲೇ ತನ್ನ ಜನರಿಗೆ, ಪ್ರತ್ಯೇಕ ಧರ್ಮವನ್ನು ಮತ್ತು ಪ್ರತ್ಯೇಕ ಮತಗಟ್ಟೆಗಳನ್ನು, ಕೇಳುತ್ತಿರುವ ವ್ಯಕ್ತಿಯನ್ನೂ ತನ್ನ ಸೋದರನಂತೆಯೇ ಬಗೆದು ಸಂವಾದವನ್ನು, ಮಾತುಕತೆಯನ್ನು ಮಾಡಲು ಸಾಧ್ಯವಾಗುವ ಗಾಂಧಿ ಅವರ ರಾಷ್ಟ್ರದ, ಧರ್ಮದ ಕಲ್ಪನೆ ಯಾವುದು? ಇದು ಬಹಳಾ ಯೋಚನೆ ಮಾಡತಕ್ಕಂತ, ಮಾಡಲೇಬೇಕಾದಂತ ವಿಷಯ.

ದುಃಖ ಅರ್ಥವಾಗಬೇಕು. ಮೊದಲಿಗೆ. ಆಳದ ವಿಷಯ ಅರ್ಥವಾಗುವುದು ಎಂದರೆ, ಆಳದ ದುಗುಡ ಅರ್ಥವಾಗುವುದು ಎಂದರೆ, ಆಳದ ದುಃಖ ಅರ್ಥ ಅರ್ಥವಾಗುವುದು ಎಂದು. ಅದು ಬುದ್ಧನಿಂದ ಪ್ರಾರಂಭ ಆಗಿ ಅಂಬೇಡ್ಕರ್ ವರೆಗೆ ಬೆಳೆದು ಬಂದಿದೆ. ಬುದ್ಧನ ಮುಖ್ಯವಾದ ಕಾಣ್ಕೆ ಮತ್ತು ಮೂಲ ಬೋಧನೆಯೇ;

ಈ ಲೋಕದಲ್ಲಿ ದುಃಖ ತುಂಬಿದೆ ಎನ್ನುವುದು. ಈ ದುಃಖ ಅರ್ಥ ಆಗಬೇಕು. ಅರ್ಥ ಮಾಡಿಸುವುದು ಸಾಧ್ಯವಿಲ್ಲ. ಅದು ಅರ್ಥವಾದರೆ ನಮ್ಮ ಲೋಕದೃಷ್ಟಿಯೇ ಬದಲಾಗಿರುತ್ತದೆ. ಅದು ಕರುಣಾಮಯಿಯಾಗಿರುತ್ತದೆ. ಸಂವೇದನಾಶೀಲವಾಗಿರುತ್ತದೆ. ಈ ದುಃಖವನ್ನು ಅರ್ಥ ಮಾಡಿಕೊಳ್ಳುವುದೇ ಗಾಂಧಿ ಅವರ ಲೋಕದೃಷ್ಟಿ. ಆದದ್ದರಿಂದಲೇ ಅವರಿಗೆ ಎಲ್ಲರೊಟ್ಟಿಗೆ ಸಂವಾದ ಸಾಧ್ಯವಾದದ್ದು. ಆದರೂ ನಾನು ಎಷ್ಟೇ ಗಾಂಧಿ ಅಂಬೇಡ್ಕರ್ ಅವರನ್ನು ಓದಿದರೂ ಗಾಂಧಿ ಅವರಿಂದ ಅಂಬೇಡ್ಕರ್ ಅವರಿಗೆ ಅನ್ಯಾಯವಾಯಿತೇನೋ ಎಂಬ ಒಂದಿಷ್ಟು ಅನುಮಾನ ಉಳಿದೇ ಇದೆ. ಗಾಂಧಿ ಜಿನ್ನಾ ಅವರಿಗೆ ತೋರಿದ ಔದಾರ್ಯ ಅಂಬೇಡ್ಕರರಿಗೆ ತೋರಲಿಲ್ಲವೇನೋ! ಎನ್ನಿಸಿದೆ. ಅಲ್ಲಿ ಏನೋ ಒಂದು ರೀತಿಯ ಇರಿಸು ಮುರಿಸು ಇದ್ದ ಹಾಗೆ ಭಾಸವಾಗುತ್ತದೆ ನನಗೆ. ಅದು ಇರಲಿ ಬಿಡಿ, ಹಾಗೇನೇ. ರಾಷ್ಟ್ರದ ವಿಚಾರಕ್ಕೆ ಬರೋಣ. ಈ ರಾಷ್ಟ್ರ ಎಂದರೆ ಏನು. ಅದರಿಂದ ಆಗಬೇಕಾದದ್ದು ಏನು? ಎಂದು ಕೇಳಿಕೊಂಡರೆ, ರಾಷ್ಟ್ರ ಅಂದರೆ ಆ ಪ್ರದೇಶದಲ್ಲಿ ಇರುವ ಜನರು, ಪ್ರಜೆಗಳು ಎಂದು ಅರ್ಥ. ಹಾಗಾದರೆ ನಾವು ಏನಾಗಬೇಕು ಎಂದರೆ ಒಳ್ಳೆಯ ಪ್ರಜೆಗಳಾಗಬೇಕು. ಲೋಕ ಎಂದರೆ ಜನರು ಎಂದರ್ಥ. ರಾಷ್ಟ್ರ ಎಂಬುದಕ್ಕಿಂತಲೂ ಲೋಕ ಎನ್ನುವುದೇ ಹೆಚ್ಚು ಅರ್ಥಪೂರ್ಣವಾದ ಪದ. ಒಳ್ಳೆಯ ಪ್ರಜೆಗಳಾಗಬೇಕು ಎಂಬ ಮಾತಾಡದೆ ನಾವು ರಾಷ್ಟ್ರಭಕ್ತರಾಗಬೇಕು ಎಂಬ ಮಾತನಾಡಿದರೆ ಅದರ ಇಂಗಿತವೇನು? ನಾನು ಆಗಲೇ ಹೇಳಬೇಕಾದ ಒಂದು ಮಾತನ್ನು ಮರೆತೆ. ಈ ಮಾಬ್ ಮೈಂಡ್ ಅನ್ನು ಸೆಟ್ ಮಾಡುವುದು (ಸಮೂಹ ಸನ್ನಿಯನ್ನು ಹಿಡಿಸುವುದು) ಬಹಳಾ ಸುಲಭದ ಕೆಲಸ. ಅದನ್ನು ಅನೇಕ ಸಂಘ ಸಂಸ್ಥೆಗಳು ಮಾಡುತ್ತಲೇ ಬಂದಿವೆ. ಅದಕ್ಕೆ ಬಲಿಯಾಗಿ ತುಂಬಾ ಗಂಭೀರವಾದ ಸಂಗತಿಗಳನ್ನು ಆಲೋಚನೆಗೆ ತೆಗೆದುಕೊಳ್ಳದೆ ಇದ್ದರೆ ಏನಾಗುತ್ತದೆ? ನಮ್ಮ ಅಮೂಲ್ಯವಾದ ಜೀವನವನ್ನು ಹಾಳುಮಾಡಿಕೊಳ್ಳಬೇಕಾಗುತ್ತದೆ. ಅಷ್ಟೇ.

## ರಾಜ್ಯ-ರಾಜ: ನಮ್ಮ ಪರಂಪರೆಯ ನೋಟ

ನಮ್ಮ ಪರಂಪರೆ ಎನ್ನುತ್ತಾರೆ. ಮಾತೆತ್ತಿದರೆ ರಾಮಾಯಣ, ಮಹಾಭಾರತ ಎನ್ನುತ್ತಾರೆ. ಹೇಳುವವರೂ ಸರಿಯಾಗಿ ತಿಳಿದುಕೊಂಡಿರುವುದಿಲ್ಲ. ಕೇಳುವವರೂ ಸಹ. ಮಹಾಭಾರತದಲ್ಲಿ ಒಂದು ಸಂದರ್ಭ ಇದೆ. ಹದಿನೆಂಟು ದಿನಗಳ ಕುರುಕ್ಷೇತ್ರದ ಯುದ್ಧ ಮುಗಿದು ಕೌರವರು ಮತ್ತು ಪಾಂಡವರ ಸೈನ್ಯವೆಲ್ಲ ನಾಶವಾದ ಸಂದರ್ಭದಲ್ಲಿ ಧರ್ಮರಾಯನು ತೀವ್ರ ಶೋಕದಲ್ಲಿ ಮುಳುಗಿರುತ್ತಾನೆ. ಯುದ್ಧದ ದುರಂತವನ್ನು ಕಂಡು ದುಃಖತಪ್ತನಾಗಿ ರಾಜ್ಯದ, ಮತ್ತೆಲ್ಲದರ ಆಸೆಯನ್ನು ಕಳೆದುಕೊಂಡಿರುತ್ತಾನೆ. ಕೃಷ್ಣನೂ ಅವನನ್ನು ಸಂತೈಸಲು ಸಾಧ್ಯವಾಗದೆ ಇದ್ದಾಗ ಶರಶೈಯೆಯಲ್ಲಿ ಮಲಗಿದ್ದ ಭೀಷ್ಮನ ಹತ್ತಿರ ಕಳಿಸುತ್ತಾನೆ. ಆಗ ಭೀಷ್ಮ ಧರ್ಮರಾಯನಿಗೆ ಉಪದೇಶ ಮಾಡುತ್ತಾನೆ. 'ಆದದ್ದು ಆಯಿತು. ಈಗ ಚಕ್ರವರ್ತಿಯಾಗಿದ್ದೀಯ. ಇನ್ನು ನೀನು ರಾಜ ಧರ್ಮವನ್ನು ಪಾಲಿಸಲೇಬೇಕು. ಆದರೆ ಅದಕ್ಕಿಂತ ಮೊದಲು ಇದೊಂದು ಮಾತನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯಾಡಳಿತ ಮಾಡು. ಅದೇನೆಂದ್ರೆ; ಹಿಂದೆ ಒಂದು ಕಾಲ ಇತ್ತು. ಆಗ ಅಲ್ಲಿ ರಾಜನೂ ಇರಲಿಲ್ಲ, ರಾಜ್ಯವೂ ಇರಲಿಲ್ಲ. ತಪ್ಪು ಅಂತಲೂ ಇರಲಿಲ್ಲ, ತಪ್ಪಿಗೆ ಶಿಕ್ಷೆ ಅಂತಲೂ ಇರ್ಲಿಲ್ಲ. ಒಬ್ಬರನ್ನೊಬ್ಬರು ಕಂಡರೆ ಪರಸ್ಪರರನ್ನು ಹೇಗೆ ಕಾಪಾಡುವುದು, ರಕ್ಷಣೆ ಮಾಡುವುದು ಎನ್ನುವ ಭಾವನೆ ಮಾತ್ರ ಅವರಲ್ಲಿ ಮೂಡುತ್ತಿತ್ತಲ್ಲದೆ ಮತ್ತೊಬ್ಬನಿಂದ ಏನನ್ನಾದರೂ ಪಡೆಯಬೇಕೆನ್ನುವ, ಗಿಟ್ಟಿಸಿಕೊಳ್ಳಬೇಕೆನ್ನುವಂಥ ಭಾವನೆಯು ಹುಟ್ಟುತ್ತಿರಲಿಲ್ಲದಂಥ ಕಾಲ ಅದು. ರಾಜ, ರಾಜ್ಯ, ತಪ್ಪು, ಶಿಕ್ಷೆ ಎನ್ನುವಂಥ ಕಲ್ಪನೆಯೇ ಇರದಿದ್ದ ಕಾಲ ಅದು. ತುಂಬಾ ಚೆನ್ನಾಗಿ ಇತ್ತು ಆ ಕಾಲ. ಅದು ನಿಜವಾದ ಧಾರ್ಮಿಕತೆಯ ಅರ್ಥ ಮತ್ತು ಧರ್ಮದ ಕಾಲ'.

ಆದರೆ ಆ ಕಾಲ ಹೋಯಿತು. ಹಾಗೆ ಧರ್ಮವನ್ನು ಕಳೆದುಕೊಂಡಿದ್ದರಿಂದಲೇ ರಾಜ್ಯ, ರಾಜ, ವ್ಯವಸ್ಥೆ, ಸೈನ್ಯ ಇವೆಲ್ಲ ಬೇಕಾಯಿತು. ಅದಿಲ್ಲದಿದ್ದರೆ ಜನ ಪರಸ್ಪರ ಬಡಿದಾಡಿಕೊಂಡು ಕ್ಷೋಭೆಯನ್ನು ಉಂಟುಮಾಡುತ್ತಾರೆ. ಹಾಗಾಗಿ ಭೀಷ್ಮ ಧರ್ಮರಾಯನಿಗೆ, ರಾಜನಾದವನು ನಿಜವಾದ ಈ ಧರ್ಮವು ಸಾಕಾರಗೊಳಿಸುವಂತೆ ರಾಜ್ಯಭಾರ ಮಾಡಬೇಕು ಎಂದು ಸೂಚಿಸಿ ರಾಜ್ಯಭಾರ ವಹಿಸಿಕೊಳ್ಳುವಂತೆ ಹುರಿದುಂಬಿಸುತ್ತಾನೆ. ಇದು ಬಹಳಾ ಮುಖ್ಯ. ಭೀಷ್ಮನು ಉತ್ತಮ ರಾಜ್ಯಭಾರ ಮಾಡಲು ಬೇಕಾದಂತಹ ಸಲಹೆ ಸೂಚನೆಗಳನ್ನು ಕೊಡುತ್ತಲೇ ಅದರ ಜೊತೆಗೆ 'ರಾಜನಿಲ್ಲದ, ರಾಜ್ಯವೂ ಇಲ್ಲದ, ತಪ್ಪು ಇಲ್ಲದ ಮತ್ತು ತಪ್ಪಿಗೆ ಶಿಕ್ಷೆಯೂ ಇಲ್ಲದಂತ'ಹ ಒಂದು ಸಾಮುದಾಯಿಕ ಬದುಕನ್ನು ಏನು ಜನ ನಡೆಸ್ತಾ ಇದ್ರೋ ಅದು ನಿಜವಾದ ಧರ್ಮದ ಜೀವನ ಎಂಬುದನ್ನು ಸೂಚಿಸಿ ತನ್ನ ರಾಜ್ಯಭಾರವು ಇಂತಹ ಧರ್ಮದ ಜೀವನವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಶೀಲವಾಗಬೇಕು ಎಂದು ತಿಳಿಸುತ್ತಾನಲ್ಲ ಈ ಮಾತು ಸರ್ವಕಾಲಕ್ಕೂ ಅನ್ವಯವಾಗಬೇಕಾದಂಥ ಸತ್ವವಾದ ಮಾತು.

ಹೀಗೆ ರಾಜ್ಯ ಎನ್ನುವ ಕಲ್ಪನೆಯನ್ನೇ ಪ್ರಶ್ನಿಸಿ, ಈ ರಾಜ್ಯ, ರಾಜ, ರಾಜ್ಯಭಾರ ಎಲ್ಲವನ್ನೂ ಅದು ಅನಿವಾರ್ಯವಾದ ಕಾರಣದಿಂದ ಒಪ್ಪಿಕೊಳ್ಳಬೇಕಾಗಿದೆ ಎಂದು ಹೇಳಿದರೆ ಈ ರಾಜ್ಯ ಎನ್ನುವ ಕಲ್ಪನೆ ನಿಮಗೆ ಸ್ಪಷ್ಟ ಆಯಿತೋ, ಅಸ್ಪಷ್ಟ ಆಯಿತೋ. ಸ್ಪಷ್ಟವೂ ಆಯಿತು, ಅಸ್ಪಷ್ಟವೂ ಆಯಿತು ಅನ್ನಬಹುದು. ಯಾಕಂದ್ರೆ ಇದು 'ನಮ್ಮ' ದೌರ್ಬಲ್ಯದಿಂದಾಗಿ ಈ ರಾಜ್ಯ, ಮತ್ತುಳಿದೆಲ್ಲವೂ ಅಗತ್ಯವಾಗಿದೆ. ಈ ದೌರ್ಬಲ್ಯವನ್ನು ನಾವು ಮೀರಿದೆವಾದರೆ ನಮಗೆ ಈ ರಾಜ್ಯ, ರಾಜ ಯಾವುದೂ ಬೇಡವಾಗುತ್ತದೆ. ಇದು ಗಾಂಧಿ.

ಕನಿಷ್ಠ ರಾಜ್ಯಾಡಳಿತ ಇರುವಂಥ ವ್ಯವಸ್ಥೆಯನ್ನು ಸಾಕಾರಗೊಳಿಸಲು ಹೆಣಗಾಡಿದವರು ಗಾಂಧಿ. ನಮ್ಮ ಪರಂಪರೆಯ ಆಶಯ, ಸ್ಫೂರ್ತಿ ಗಾಂಧಿಗೆ ಗೊತ್ತಿದ್ದ ಹಾಗೆ ಈ 'ಆರೆಸ್ಸೆಸ್' ನವರಿಗೆ ಗೊತ್ತಾಗಲು ಸಾಧ್ಯವಿಲ್ಲ. ಸಾಧ್ಯವಿಲ್ಲ, ಯಾಕೆಂದರೆ ಅವರಿಗೆ ನಮ್ಮ ಪರಂಪರೆಯಲ್ಲಿ ಇರುವಂತಹ ವಿಪರ್ಯಾಸಗಳನ್ನು ಅರ್ಥ ಮಾಡಿಕೊಳ್ಳುವ ಸಂವೇದನೆಯೇ ಇಲ್ಲ. ಸಮಯವೂ ಇಲ್ಲ. ರಾಮಾಯಣದಲ್ಲಿ ಒಂದು ಅದ್ಭುತವಾದ ಪ್ರಸಂಗವೊಂದಿದೆ. ರಾಮನು ಕಾಡಿಗೆ ಹೊರಟಂಥ ಸಮಯದಲ್ಲಿ ದಶರಥನು ಕೊನೆಯ ಪ್ರಯತ್ನವಾಗಿ ರಾಮನಿಗೆ ಒಂದು ಮಾತು ಹೇಳುತ್ತಾನೆ. 'ನೀನು ಕಾಡಿಗೆ ಹೋಗುವ ಮುನ್ನ ನನ್ನನ್ನು ಕೊಂದುಬಿಟ್ಟಾದರೂ ಈ ಸಿಂಹಾಸನವನ್ನು ಅಲಂಕರಿಸು' ಎಂದು. ಆದರೆ ರಾಮನಿಗೆ ಸಿಂಹಾಸನ ಬೇಕಾಗಿಲ್ಲ. ಅವನನ್ನು ನಾವು ಬಲಾತ್ಕಾರವಾಗಿ ಸಿಂಹಾಸನದ ಮೇಲೆ ಕೂರಿಸಿದ್ರೆ ಅವನ ಕೈಯಲ್ಲಿ ಅಪ್ಪನನ್ನು ಕೊಲ್ಲಿಸಿದ ಹಾಗೆ. ನಾನು ಹೇಳ್ತಾ ಇರೋದು ನಿಮಗೆ ಅರ್ಥವಾಗ್ತಿದೆಯೋ ಇಲ್ವೋ! ನೋಡಿ, ನಮ್ಮ ಪರಂಪರೆಯಲ್ಲಿ ರಾಮನನ್ನು ಪೂಜಿಸ್ತಾ ಬಂದಿರೋದು ಸಿಂಹಾಸನದ ಮೇಲೆ ಕೂತಿರುವ ರಾಮನಿಗಿಂತಾ ವನವಾಸಕ್ಕೆ ಹೋಗಿ ಕಾಡಾಡಿಯಾಗಿ ಸುತ್ತಾಡಿದ ರಾಮನನ್ನೇ.

ನಮ್ಮ ಎರಡೂ ಮಹಾ ಕೃತಿಗಳಲ್ಲಿ –ರಾಮಾಯಣ, ಮಹಾಭಾರತ–ಅದರ ನಾಯಕರು ವನವಾಸಿಗಳಾಗಿ, ಊರೂರು ಅಲೆಯದೇ ಇರುತ್ತಿದ್ದರೆ ದೇಶದಾದ್ಯಂತ ಗ್ರಾಮ ಗ್ರಾಮಗಳಲ್ಲೂ ಅವರನ್ನು ಪೂಜಿಸುವ, ನೆನೆಯುವ ಪರಂಪರೆ ಬೆಳೆದುಬರುತ್ತಿರಲಿಲ್ಲ. ನಮ್ಮ ಊರೂರುಗಳಲ್ಲಿ ರಾಮನಿಗಾಗಲಿ ಕೃಷ್ಣನಿಗಾಗಲೀ ದೇವಸ್ಥಾನಗಳು, ಪಾಂಡವರ ಹೆಸರಿನಲ್ಲಿ ಕೆರೆಗಳಾಗಲಿ, ಕಲ್ಲುಗಳಾಗಲಿ ಇರುವುದಕ್ಕೆ ಮುಖ್ಯ ಕಾರಣವೆಂದರೆ ಅವರು ವನವಾಸಿಗಳಾಗಿ ಕಾಡಿನಲ್ಲಿ ದಶಕಗಳ ಕಾಲ ಅಲೆದಾಡಿ ಅನುಭವಿಸಿದ್ದು. ಇದು ನಮ್ಮ ಮಹಾನ್ ಕೃತಿಗಳ ಮೂಲ ಸ್ಫೂರ್ತಿ. ಇದನ್ನು ಅರ್ಥಮಾಡಿಕೊಳ್ಳದೆ ನಾವು ಇನ್ನೇನೇನೋ ಮುಖ್ಯವಾಗಿಸಿಕೊಂಡರೆ ನಮಗೆ ಆ ಕೃತಿಗಳ ಮೂಲ ಸ್ಪಿರಿಟ್ ಅಥವಾಗಲಿಲ್ಲ ಅಂತಾಯ್ತು. ಈ ಸ್ಪಿರಿಟ್ ಗಾಂಧಿಗೆ ಅರ್ಥವಾಗಿತ್ತು. ಆದ್ದರಿಂದ ಗಾಂಧೀ ಧರ್ಮ ಅಂತ ಹೇಳಿದ್ರೆ ರಾಷ್ಟ್ರ ಅಂತ ಪ್ರಚೆತ್ತಾಗಿಯಾದ್ರು ಹೇಳಿದ್ರೆ–ಅವರು ರಾಷ್ಟ್ರ ಎನ್ನುವ ಮಾತನ್ನು ಅತಿ ಕಡಿಮೆ ಬಳಸಿದ್ದಾರೆ, ಆದರೆ ಹಾಗೆ ಬಳಸಿದಾಗಲೂ ಕೂಡ –ಅದು ಈಗ ಧರ್ಮ ಮತ್ತು ರಾಷ್ಟ್ರ ಎನ್ನುವ ಕಲ್ಪನೆಯನ್ನು ಹೇಗೆ ಅರ್ಥೈಸಲಾಗುತ್ತಿದೆಯೋ ಆ ರೀತಿಯ ಧರ್ಮವಲ್ಲ, ರಾಷ್ಟ್ರವಲ್ಲ. ಇದು ನಮಗೆ ಗೊತ್ತಾಗಬೇಕು. ಇದು ನಮ್ಮ ಪರಂಪರೆಯ ಸ್ಪಿರಿಟ್. ಲೋಕ ಮುಖ್ಯ. ಅಂದರೆ ಜನ ಅಥವಾ ಪ್ರಜೆ ಮುಖ್ಯ, ರಾಜನಲ್ಲ. ರಾಜ್ಯವೂ ಅಲ್ಲ. ಹೀಗೆಲ್ಲ ಇದೆ.

## ಭರತ-ಭಾರತ ; ಅಂಬೇಡ್ಕರ್ ನೋಟ

ಅಂಬೇಡ್ಕರ್ ಅವರಿಗೆ ಕೂಡ ಭಾರತ ಎಂಬ ಹೆಸರು ಇಷ್ಟ. ಅವರು ತಮ್ಮ ಪುಸ್ತಕ 'ಕ್ಷತ್ರಿಯರು ಯಾರು? ಶೂದ್ರರು ಯಾರು?' ನಲ್ಲಿ ಈ ದೇಶಕ್ಕೆ ಭಾರತ ಎಂದು ಹೆಸರು ಬಂದಿದ್ದು ಕ್ಷತ್ರಿಯ ಮೂಲದ ದುಷ್ಯಂತ–ಶಕುಂತಳೆಯರ ಮಗನಾದ ಭರತನಿಂದ ಅಲ್ಲ ಎಂದೂ, ಅದು ಬಂದದ್ದು ನಾಭೀ–ಭರತ–ವೃಷಭ ಎಂಬ ಮೂಲದಿಂದ ಎಂದು ಭಾಗವತದ ಒಂದು ಅಂಶವನ್ನು ಉಲ್ಲೇಖಿಸಿ ಹೇಳುತ್ತಾ ತಮ್ಮನ್ನು, ಈ ಮೂಲದ ಭಾರತಕ್ಕೆ ಸೇರಿದವನು, ಕ್ಷತ್ರಿಯ ಮೂಲದ ಭಾರತಕ್ಕಲ್ಲ ಎಂದು ಹೇಳಿಕೊಳ್ಳುತ್ತಾರೆ. ಅಂದರೆ ಈ ದೇಶದಲ್ಲಿ ಪ್ರತಿಯೊಬ್ಬನು ತಾನು ಸೇರುವುದಕ್ಕೆ, ತನ್ನ ಬೇರನ್ನು ಗುರುತಿಸಿಕೊಳ್ಳುವುದಕ್ಕೆ, ಅರ್ಥಮಾಡಿಕೊಳ್ಳುವುದಕ್ಕೆ ಬೇರೆ ಬೇರೆ ಮೂಲಗಳು ಇದೆ ಅಂತಾಯಿತು. ಇದು ಅರ್ಥವಾದರೆ ಭಾರತ ಅರ್ಥವಾಗುತ್ತದೆ. ಇಲ್ಲಾಂದ್ರೆ ಹಠ ಬೆಳೆಯುತ್ತದೆ. ಭಾರತದ ಇಂದಿನ ಪರಿಸ್ಥಿತಿ ಹೀಗಾಗಿದೆ. ಇದು ನಮಗೆ ಗೊತ್ತಾಗಬೇಕು. ಗೊತ್ತಾಗಬೇಕಂತಾದ್ರೆ ನಾವು ನಾವು ಸೇರಿ ಕೂತು ಮಾತನಾಡಬೇಕು. ಏನೇನು ಆಗ್ತಾ ಇದೆ ಎಂದು ವಿಚಾರ ಮಾಡಬೇಕು. ಮನುಷ್ಯನ ಆಳದ ಸಂವೇದನೆ ಉದ್ದೀಪನಗೊಳ್ಳಬೇಕು. ದುಃಖ ಅರ್ಥವಾಗಬೇಕು. ತನ್ನ ಸ್ವಂತದ ಹಾಗು ಇನ್ನೊಬ್ಬನ ದುಃಖ ಗೊತ್ತಾಗಬೇಕು.

ಈ ರಾಷ್ಟ್ರಾಭಿಮಾನ, ಸ್ವಾಭಿಮಾನ ಅನ್ನುವ ವಿಚಾರ ಬಹಳಾ ಕಷ್ಟದ್ದು. ನನಗೆ ಆಗಾಗ ನೆನಪಾಗ್ತಾ ಇರ್ತದೆ. ಅಮೆರಿಕಾದ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್‌ಗೆ ಒಮ್ಮೆ, ಅವರ ಪ್ರಕಾರ ನಾಗರೀಕನಲ್ಲದ ಒಬ್ಬ ರೆಡ್–ಇಂಡಿಯನ್ ಆದ, ಚೀಫ್ ಸಿಯಾಟಲ್ ಎಂಬ ಮನುಷ್ಯನಿಂದ ಒಂದು ಪತ್ರ ಬರುತ್ತದೆ. ಆ ಪತ್ರದಲ್ಲಿ ಬಹಳ ಮುಖ್ಯವಾದ ಮಾತನ್ನು ಅವನು ಹೇಳುತ್ತಾನೆ. ಅದು ಏನೆಂದರೆ 'ಅಧ್ಯಕ್ಷರೇ, ನೀವು ಈ ಭೂಮಿಯನ್ನು

ಮಾರಾಟ ಮಾಡಿ ಎಂದು ಹೇಳುತಿದ್ದೀರಲ್ಲ? ಭೂಮಿಯನ್ನು ಮಾರಾಟ ಮಾಡುವುದು ಅಂದರೆ ನಮಗೆ ಏನೆಂದೇ ಅರ್ಥವಾಗ್ತಾ ಇಲ್ಲ! ಈ ಭೂಮಿಯಲ್ಲಿ ಬದುಕಲು ಸಾಧ್ಯ. ಆದರೆ ಮಾರಾಟ ಮಾಡಬಹುದು ಎಂಬ ಕಲ್ಪನೆಯೇ ನಮಗೆ ಬರ್ತಾ ಇಲ್ಲ. ನಮ್ಮ ನಿಮ್ಮ ದೇವರು, ಧರ್ಮ ಒಂದೇ ಅಲ್ವಾ'!. ಅತ್ಯಂತ 'ಅನಾಗರೀಕ' ಆದವನು ಮಾತ್ರ ಕೇಳಲು ಸಾಧ್ಯವಾಗುವಂತಹ ಮಾತು ಇದು. ಭೂಮಿಯನ್ನು ಮಾರಾಟ ಮಾಡುವ ಕಲ್ಪನೆಯೇ ಇಲ್ಲ ಅಂತಾದ್ರೆ ಈ ಭೂಮಿ ನಮ್ಮದು ಎನ್ನುವ ಭಾವನೆಯೇ ಇಲ್ಲ. ಹಾಗಾಗಿ ಈ ಭೂಮಿಯಲ್ಲಿ ಬದುಕು ನಡೆಸಲು ಮಾತ್ರ ಸಾಧ್ಯ ಎನ್ನುವ ಭಾವನೆ ಮಾತ್ರ. ಹೀಗಿರುವಾಗ ನಾವು ಮಾತಾಡ್ತಾ ಇರುವ ರಾಷ್ಟ್ರದ ಪ್ರಶ್ನೆ ಎಲ್ಲಿ ಬಂತು? ಆದರೆ, ಅಮೇರಿಕಾ ಮತ್ತು ಯುರೋಪ್ ಪ್ರಾಧಾನ್ಯದಲ್ಲಿ ಬೆಳೆದುಬಂದ ಈ ಆಧುನಿಕ ನಾಗರಿಕತೆಯ ಇತಿಹಾಸ ಏನೆಂದರೆ ಅಮೆರಿಕಾ ದೇಶದ ಮೂಲ ನಿವಾಸಿಗಳಾದ ಮೂವತ್ತು ಲಕ್ಷ ಮಂದಿ ರೆಡ್-ಇಂಡಿಯನ್ ಜನರನ್ನು ಸಂಹಾರ ಮಾಡಿದ್ದು. ಈ ವಾಸ್ತವಿಕತೆಯ ಅರ್ಥವಾದರೆ ನಮಗೆ ಗಾಂಧೀಜಿ ಅವರಿಗೆ ಆಧುನಿಕ ನಾಗರಿಕತೆಯ ಬಗ್ಗೆ ಇದ್ದ ತೀವ್ರವಾದ ಆಕ್ಷೇಪ ಏನೆಂದು ಅರ್ಥವಾಗ್ತದೆ. ಇಲ್ಲದಿದ್ರೆ ಆಗುವುದಿಲ್ಲ. ಹಾಗಾದ್ರೆ ಈ ಆಧುನಿಕತೆಯ ಸಾಧನಗಳೆಲ್ಲ ನಮಗೆ ಬೇಡವೇ? ಅವುಗಳೆಲ್ಲ ನಮ್ಮ ವೈಜ್ಞಾನಿಕತೆಯ, ಮನುಷ್ಯನ ಸೃಷ್ಟಿಶೀಲತೆಯ ಉತ್ಪನ್ನಗಳಲ್ಲವೇ ಅಂತ ಹೇಳಿದ್ರೆ ಗಾಂಧಿ ಕೇಳುವುದು ಒಂದೇ. 'ಎಲ್ಲವು ಹೌದು. ಆದರೆ ಅದು ನಿನಗೆ ನಿಜಕ್ಕೂ ಅಗತ್ಯವೇ? ಇನ್ನೊಬ್ಬನ ಹತ್ತಿರ ಇದೆ ಎಂಬ ಕಾರಣಕ್ಕೆ ಅದು ನಿನಗೆ ಬೇಕು ಅಂತಾದದ್ದಲ್ಲದೇ ವಸ್ತುಸ್ಥಿತಿಯಲ್ಲಿ ಜೀವನಮಾಡಲು ಅದರ ಅಗತ್ಯ ಉಂಟೋ?' ಎಂದು. ಹೀಗೆ ಬಹಳಾ ಮೂಲಭೂತವಾದಂಥ ಪ್ರಶ್ನೆಯನ್ನು ಕೇಳಿಕೊಂಡುಬಿಟ್ಟರೆ ನಮ್ಮ ಈ ದೇಶಾಭಿಮಾನ, ರಾಷ್ಟ್ರಾಭಿಮಾನ, ಧರ್ಮಾಭಿಮಾನ ಎನ್ನುವ ಎಲ್ಲ ಹುಸಿ ಅಭಿಮಾನಗಳ ಮಾಯೆ ಕಳಚಿ ಬೀಳುತ್ತವೆ.

## 'ಅಲ್ಲಿರುವುದು ನಮ್ಮನೆ ಇಲ್ಲಿರುವುದು ಸುಮ್ಮನೆ!'

ಇನ್ನು ಈ ಧರ್ಮದ ವಿಷಯಕ್ಕೆ ಬಂದರೆ ಇದು ಬಹಳಾ ಗಂಭೀರವಾದ ವಿಷಯ. ನಿಜವಾದ ಧರ್ಮ ಇರುವುದು ಆಧ್ಯಾತ್ಮಿಕತೆಯಲ್ಲಿ. ಅಧ್ಯಾತ್ಮವನ್ನು ನೀವು ಬಗೆದು ನೋಡಿದ್ದರೆ, ಆಧ್ಯಾತ್ಮಿಕದ ಒಂದು ಅನುಭವವಾಗಿದ್ದರೆ ಸಹಜವಾಗೇ ನೀವು ಹೇಳ್ತೀರಿ. ನಾನು ಇಲ್ಲಿಯವನಲ್ಲ. ಬಂದವನು. ನಮ್ಮ ಮನೆ ಇಲ್ಲಿ ಇಲ್ಲ. 'ಅಲ್ಲಿರುವುದು ನಮ್ಮನೆ. ಇಲ್ಲಿ ಬಂದೆ ಸುಮ್ಮನೆ' ಅಂತ. ಹೀಗೆ ಮಾತನಾಡಿದ್ರೆ, ಇದನ್ನೆಲ್ಲಾ ನಮ್ಮ ತಥಾಕಥಿತ ಕ್ರಾಂತಿಕಾರಿಗಳು ಕೇಳಿದ್ರೆ ಬರೀ ಅಸಂಬದ್ಧ, ಜೀವನ ವಿರೋಧಿ ಮಾತುಗಳು ಎಂದು ತಳ್ಳಿ ಹಾಕಿಬಿಡುತ್ತಾರೆ. ನನಗೆ ಕೇಳಿದ್ರೆ ಅದು ಹಾಗೆ ಅಲ್ಲವೇ ಅಲ್ಲ. ನಾವು ನಿಜಕ್ಕೂ ಇಲ್ಲಿ ಹೇಗಿರಬೇಕೆಂದರೆ ನಾವು ಇಲ್ಲಿ ಕೇವಲ ಗೆಸ್ಟ್ ಆಗಿ ಬಂದಿರೋದು. ಇದು ನಮ್ಮ ಮನೆಯಲ್ಲ. ಇಲ್ಲಿ ಒಂದಷ್ಟು ದಿನ ಬದುಕಿ ಬಾಳಿ ಹೋರಾಡುತ್ತಿರಬೇಕು ಎಂದು. ಸ್ವಾಮಿ ವಿವೇಕಾನಂದರು ಪ್ರಪಂಚವನ್ನೆಲ್ಲ ಸುತ್ತಾಡಿ ಅಧ್ಯಾತ್ಮದ ವಿಷಯವಾಗಿ ಎಲ್ಲ ಮಾತಾಡಿ ಬಂದರೂ ಅವರಿಗೆ ಕಾಡುತ್ತಿದ್ದ ಪರಮಹಂಸರು ಹೇಳುತ್ತಿದ್ದ ಈ ಸಾಲುಗಳು ಹೀಗಿದೆ. 'ಮನಚಲ ನಿಜ ನಿಕೇತನೇ, ಸಂಸಾರ ವಿದೇಶೇ, ವಿದೇಶರ ವೇಶೇ, ಭ್ರಮಕೇನ ಆಕಾರಣೆ'. ಅದರ ಅರ್ಥ 'ಎಲೆ ಮನಸೇ, ನಿಜವಾದ ನೆಲೆಗೆ ಹೋಗು, ಯಾಕೆ ಇಲ್ಲಿ ವಿದೇಶಿಯ ವೇಷದಲ್ಲಿ ಹೊರಳಾಡುತಿದ್ದೀ'. ಧರ್ಮದ ತಿರುಳಿರುವುದು ಅಧ್ಯಾತ್ಮದಲ್ಲಿ ಎಂದು ನೀವು ಒಪ್ಪಿದರೆ, ಅಧ್ಯಾತ್ಮದ ಅನುಭವವಿದ್ದವರು ಮಾತ್ರ ಸಂತರು ಎಂದು ನೀವು ಒಪ್ಪಿದರೆ–ಮಠಾಧೀಶರು ಅಲ್ಲ, ಸ್ವಾಮಿಗಳೂ ಅಲ್ಲ– ಗಾಂಧೀ ಹೇಳಿದ 'ಹಿಂದೂ ಧರ್ಮ ಎಂದರೆ ಸಂತರ ಧರ್ಮ' ಎಂಬ ಮಾತನ್ನು ಒಪ್ಪಬೇಕಾಗುತ್ತದೆ. ಸಂತರು ಏನು ಹೇಳ್ತಾರೆ ಅಂತಂದ್ರೆ 'ಈ ಲೋಕ ನಮ್ಮದಲ್ಲ. ಈ ಭೂಮಿ ನಮ್ಮದಲ್ಲ, ಇಲ್ಲಿಗೆ ನಾವು ಕೇವಲ ಬಂದವರು'. ಈ ಮಾತು ನಾವು ಈ ಭೂಮಿಯಲ್ಲಿ ಹೇಗೆ ಬದುಕಬೇಕು ಎನ್ನುವುದಕ್ಕೆ ಒಂದು ಮಾರ್ಗದರ್ಶಕವಾಗಿರುವಂತಾ ಮಾತು.

## ಉಳಿಸಬೇಕಾದದ್ದು ಮಕ್ಕಳನ್ನು; ಮಕ್ಕಳಿಗಾಗಿ ಅಲ್ಲ

ನಾವೆಲ್ಲ ಏನು ಮಾಡ್ತಿದ್ದೇವೆಂದರೆ ನಮ್ಮ ಮಕ್ಕಳಿಗೆ ಅಂತ ನಾವು ದುಡಿಯಬೇಕು, ಉಳಿಸಬೇಕು ಅಂತ ನಾವು ಏನು ಮಾಡಿದ್ರು ಅದನ್ನೆಲ್ಲ ಸಮರ್ಥಿಸಿಕೊಳ್ಳುವ ಉಪಾಯವಾಗಿ ನಾವು ಮಕ್ಕಳನ್ನು ಮುಂದೆ ಇಡುತ್ತಿದ್ದೇವೆ. ಸಾಕ್ರಟೀಸ್ ಈ ಸಂಬಂಧ ಒಂದು ಮಾತನ್ನು ಹೇಳುತ್ತಾನೆ. ಅವನು ಸತ್ಯದ ವಿಷಯವನ್ನು ನಿರ್ಭಯದಿಂದ ಮಾತನಾಡಿದ್ದನ್ನು ವ್ಯವಸ್ಥೆ ಅರಗಿಸಿಕೊಳ್ಳಲಾರದೆ, ಸುಳ್ಳು ಆಪಾದನೆಯ ಮೇಲೆ ಅವನಿಗೆ ಮರಣ ದಂಡನೆಯ ಶಿಕ್ಷೆ ನೀಡಿ ವಿಷಪ್ರಾಶನ ಮಾಡಿಸುವ ಮೊದಲು ಅವನು ಆಡಿದ ಕೊನೆಯ ಮಾತು ಅದು. ಅದೇನೆಂದರೆ 'ನಾವು ಮಕ್ಕಳನ್ನು– ಅವರು ಇನ್ನೊಬ್ಬರಾಗದೆ ತಾವಾಗಿ ಉಳಿಯುವಂತೆ–ಉಳಿಸಬೇಕು. ಮಕ್ಕಳಿಗಾಗಿ ಉಳಿಸುವುದಲ್ಲ'. ಬಹಳಾ ಅದ್ಭುತವಾದ ಮಾತು.

ನಾಗರೀಕತೆ ಅಥವಾ ನಿಜವಾದ ಅಧ್ಯಾತ್ಮ ಬೆಳೆಯುವುದು ಹೀಗೆ. ಮತ್ತ್ಯಾವುದರಿಂದಲೂ ಅಲ್ಲ. ಈ ಮೂಲ ಸತ್ವ ಗಾಂಧಿಗೆ ಗೊತ್ತಾದ ಹಾಗೆ ಮತ್ಯಾರಿಗೂ ಗೊತ್ತಾಗಿದೆ ಅಂತ ನನಗೆ ಅನ್ನಿಸುವುದೇ ಇಲ್ಲ. ಹಾಗಾಗಿ ರಾಷ್ಟ್ರ, ನಾಗರೀಕತೆ, ಆಧುನಿಕತೆ ಈ ಎಲ್ಲಾ ಪ್ರಶ್ನೆಗಳನ್ನು ಗಾಂಧಿಯನ್ನು ಕೇಂದ್ರದಲ್ಲಿ ಇಟ್ಟುಕೊಂಡು ವಿಚಾರ ಮಾಡುತ್ತಿರುವುದು ಅತ್ಯಂತ ಸೂಕ್ತ ಮತ್ತು ಸಮಂಜಸವಾಗಿದೆ. ಈ ಕೆಲಸವನ್ನು ಈ ಶಿಬಿರದ ಎರಡು ದಿನ ಮಾತ್ರ ಅಲ್ಲ ವರ್ಷವಿಡೀ ನಾಗಭೂಷಣ ಅವರು ಮಾಡ್ತಾ ಇರುತ್ತಾರೆ. ಅವರೊಟ್ಟಿಗೆ ಕೈಜೋಡಿಸುತ್ತಿರುವ ನಿಮಗೆಲ್ಲರಿಗೂ ವಂದನೆಗಳು. ಇಲ್ಲಿ ನಿಮ್ಮೆಲ್ಲರೊಟ್ಟಿಗೆ ಇದ್ದು ನನ್ನನ್ನೇ ನಾನು ಹೆಚ್ಚು ಸಂವೇದನಾಶೀಲನನ್ನಾಗಿಸಿಕೊಳ್ಳಲು ಸಹಾಯವಾಗಿದೆ. ನಿಮ್ಮೆಲ್ಲರಿಗೂ ಧನ್ಯವಾದಗಳು. ನಮಸ್ಕಾರ.



**(ಪುತ್ತೂರಿನ ಲಕ್ಷ್ಮೀಶ ತೋಳ್ಪಾಡಿಯವರು ಪರಂಪರೆ ಮತ್ತು ಆಧುನಿಕ ಪ್ರಜ್ಞೆಗಳು ಹದವಾಗಿ ಬೆರೆತ ಅಪರೂಪದ ಮನಸ್ಸಿನ ಕನ್ನಡದ ಹಿರಿಯ ಚಿಂತಕರು)**

(ಧ್ವನಿಯಿಂದ ಲಿಪಿಗೆ: **ಬಿ.ವಿ. ಸುರೇಂದ್ರ**)

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಜೂನ್ ೨೦೧೯ರ ಸಂಚಿಕೆಯ ನಿಮ್ಮ 'ಸಂಪಾದಕರ ಟಿಪ್ಪಣಿಗಳು' ಪ್ರಜಾಪ್ರಭುತ್ವ ಮತ್ತು ಚುನಾವಣೆಗಳನ್ನು ಕುರಿತಂತೆ ಒಂದು ಪ್ರಬುದ್ಧ ವಿಶ್ಲೇಷಣೆ. ಇಲ್ಲಿ ಪ್ರಜಾಪ್ರಭುತ್ವದ ಅರೆಕೊರೆಗಳು ಮತ್ತು ಅಪಾಯಗಳನ್ನು ನೀವು ಸ್ಪಷ್ಟವಾಗಿ ಗುರುತಿಸಿದ್ದೀರಿ. ಪ್ರಜಾಪ್ರಭುತ್ವ ಸರ್ವಶ್ರೇಷ್ಠ ವ್ಯವಸ್ಥೆ ಅಲ್ಲ; ಅನ್ಯ ಮಾರ್ಗದ ಕೊರತೆಯಿಂದಾದ ಅನಿವಾರ್ಯದ ಆಯ್ಕೆ. ವ್ಯವಸ್ಥೆಯನ್ನು ಆಯ್ದುಕೊಂಡ ಮೇಲೆ ಅದರ ಅನುಕೂಲ ಮತ್ತು ಅನನುಕೂಲಗಳನ್ನು ಒಟ್ಟಾಗಿ ಒಪ್ಪಿಕೊಳ್ಳುವ ಸಂಕಷ್ಟವನ್ನು ಅನುಭವಿಸಲೇ ಬೇಕು. ಈ ಚುನಾವಣೆಯ ಬಹು ದೊಡ್ಡ ಪಾಠ 'ಜಾತಿ ಮತ್ತು ಕುಟುಂಬ ರಾಜಕಾರಣ ಬಹುಕಾಲ ನಡೆಯದು' ಎನ್ನುವ ನಿಮ್ಮ ಅಭಿಪ್ರಾಯ ನನ್ನದೂ ಸಹ ಹೌದು.

**–ಪ್ರೊ.ಹೆಚ್. ಎಸ್. ಈಶ್ವರ,** ಬೆಂಗಳೂರು

ಇಡೀ ಸಂಚಿಕೆ ಓದುತ್ತಿದ್ದೇನೆ. ನಿಮ್ಮ 'ಸಂಪಾದಕರ ಟಿಪ್ಪಣಿ' ಬಹಳ ಸ್ಪಷ್ಟವಾದ, ಸತ್ಯಾನ್ವೇಷಣೆಯ, ವಾಸ್ತವ ನೆಲೆಗಟ್ಟಿನ ನೇರ ವಿಮರ್ಶೆಯ ಬರಹವಾಗಿದೆ. ರಾಜಕೀಯ ಪಕ್ಷಗಳ ಹೊರಗೆ ನಿಂತು ನೋಡುವವರಿಗೆ ಮಾತ್ರ ಇಂತಹ ರಾಜಕೀಯ ವಿಮರ್ಶೆ ಬರೆಯಲು ಸಾಧ್ಯ. ಚುನಾವಣೆಗಾಗಿಯೇ ರಾಜಕೀಯ ಮಾಡುವ ಎಲ್ಲರೂ ತಿಳಿದುಕೊಳ್ಳಬೇಕಾದ ಸಂಗತಿಗಳು ಮತ್ತು ಎಚ್ಚರಿಕೆಗಳು ನಿಮ್ಮ ಬರಹದಲ್ಲಿವೆ.

**–ಪ್ರೊ. ಬಿ . ಎ . ವಿವೇಕ ರೈ,** ಮಂಗಳೂರು

'ಹೊಸಮನುಷ್ಯ'ದ ಜೂನ್ ಸಂಚಿಕೆ ನಮ್ಮನ್ನು ಅರಿವಿನ ಅಂಚಿಗೆ ತಂದು ನಿಲ್ಲಿಸುವುದರಲ್ಲಿ ಯಶಸ್ವಿಯಾಗಿದೆ. ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಸಮರ್ಥವಾಗಿ ವಿಶ್ಲೇಷಣೆ ಮಾಡಿದ್ದೀರಿ. ನರೇಂದ್ರ ಮೋದಿಯವರು ರಾಷ್ಟ್ರದ ಬಹುಮತದ ನಾಯಕರಷ್ಟೇ ಹೊರತು ಸರ್ವಸಮ್ಮತ ನಾಯಕರಂತೂ ಅಲ್ಲ ಎಂಬುದು ನಿಜ. ರಾಷ್ಟ್ರೀಯತೆಯನ್ನು ಕುರಿತ ಚರ್ಚೆಗಳು ಈ ಸಂಚಿಕೆಯಲ್ಲೂ ಮುಂದುವರಿದಿರುವುದು ಚಿಂತನೆಯ ಆರೋಗ್ಯಕರ ಲಕ್ಷಣಗಳು. ರಾಜೇಂದ್ರ ಚೆನ್ನಿ ಮತ್ತು ರಾಜಾರಾಂ ತೋಳ್ಪಾಡಿ ಅವರ ಎರಡೂ ಲೇಖನಗಳು ಉತ್ಕೃಷ್ಟವಾಗಿವೆ. ಗಾಂಧಿ ಕಂಡ ಬಹುಮುಖಿ ಮತ್ತು ಬಹುತ್ವವುಳ್ಳ ಬಹುಧರ್ಮದ ಸಾಮುದಾಯಿಕ ರಾಷ್ಟ್ರ ಕಲ್ಪನೆ ಬಹಳ ಚೆನ್ನಾಗಿ ಮೂಡಿ ಬಂದಿದೆ. ಭಾರತದ ವಿಭಜನೆಗೆ ಕಾರಣವಾದ ಕಾಲಘಟ್ಟಗಳ ಅನಿವಾರ್ಯತೆಯನ್ನು ಲೇಖಕರು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ನಮ್ಮನ್ನು ಹಸನು ಮಾಡುವ ಇಂತಹ ಲೇಖನಗಳ ಹೊಸಮನುಷ್ಯ ಬಹುಕಾಲ ಜೀವಂತವಿರಲಿ.

**–ಡಾ. ಎಂ.ಜಿ. ಈಶ್ವರಪ್ಪ,** ದಾವಣಗೆರೆ

ನಮ್ಮ ಸಂಸದೀಯ ಪ್ರಜಾಪ್ರಭುತ್ವ ನೀವು ಸೂಚಿಸಿರುವಂತಹ 'ಚುನಾವಣೀಯ ಪ್ರಜಾಪ್ರಭುತ್ವ'ವಾಗುತ್ತಾ ಅವನತಿಗೊಂಡು ಅದೀಗ ಭಾರತದಂತಹ ಬಹು ಭಾಷಾ ಮತ್ತು ಬಹು ಸಂಸ್ಕೃತಿಗಳ ದೇಶಕ್ಕೆ ಅ-ಪ್ರಜಾಸತ್ತಾತ್ಮಕವಾಗಿ ಪರಿಣಮಿಸಿರುವ ಅಧ್ಯಕ್ಷೀಯ ಪ್ರಜಾಪ್ರಭುತ್ವವಾಗಿ ಮಾರ್ಪಡುತ್ತಿರುವುದು ಒಂದು ದುರಂತದ ಸಂಗತಿಯಾಗಿದೆ. ಮತದಾರರಿಗೆ ಮಂಕುಬೂದಿ ಎರಚಿ ಚುನಾವಣೆಗಳನ್ನು ಹೇಗಾದರೂ ಗೆಲ್ಲಲು ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ ಚುನಾವಣಾ

(೧೪ನೇ ಪುಟಕ್ಕೆ

ಯುವಲಹರಿ

# ಕನ್ನಡ ಶಾಲೆಯ ಖವಣೆ

–ವಿಜಯಶ್ರೀ ಹಾಲಾಡಿ



ಸರ್ಕಾರಿ ಕನ್ನಡ ಶಾಲೆಗಳ ಸಮಸ್ಯೆಗಳು ಇಂದು ನಿನ್ನೆಯದಲ್ಲವಾದರೂ ಪ್ರಸ್ತುತ ಪರಿಸ್ಥಿತಿ ಬಿಗಡಾಯಿಸಿದೆ. ಕನ್ನಡ ಶಾಲೆಗಳು ಅಳಿವಿನಂಚಿನಲ್ಲಿವೆಯೋ ಏನೋ ಎಂಬ ಭಯ ಕಾಡಿಬಿಡುತ್ತದೆ. ಪರಿಹಾರವೇನು ಎನ್ನುವ ಕುರಿತು, ಅನೇಕ ಚರ್ಚೆ, ಚಿಂತನೆಗಳು ಆಗಿವೆಯಾದರೂ ಇಂದಿನವರೆಗೂ ಸಮರ್ಥವಾಗಿ ಕಾರ್ಯರೂಪಕ್ಕೆ ಬಂದಿಲ್ಲ.

ಇವತ್ತಿನ ಕನ್ನಡ ಶಾಲೆಗಳ ಈ ಪರಿಸ್ಥಿತಿಯಿಂದ ನೇರವಾಗಿ ಬಳಲುತ್ತಿರುವವರು ಕನ್ನಡ ಶಾಲೆಯ ಮಕ್ಕಳು, ಪೋಷಕರು ಮತ್ತು ಶಿಕ್ಷಕರು. ಆದರೆ ಆಶ್ಚರ್ಯವೆಂದರೆ ಈ ಮೂರು ವರ್ಗದವರು ಆಡಬೇಕಾದ ಮಾತನ್ನು ಇತರರು ಆಡುತ್ತಿರುವುದು! 'ಶಿಕ್ಷಣತಜ್ಞ' ರೆಂದು ಹೇಳಿಕೊಳ್ಳುವ ಹಲವರು, ಲೇಖಕರು, ಸಿನಿಮಾ ಜಗತ್ತಿನವರು ಕನ್ನಡ ಶಾಲೆಗಳ ಕುರಿತು ಮಾತಾಡುತ್ತಿದ್ದಾರೆ. ನಾವೆಲ್ಲ ಕೇಳಿಸಿಕೊಳ್ಳುತ್ತಿದ್ದೇವೆ.... ಸರಿ ಕೇಳಿಸಿಕೊಳ್ಳುವ. ಆದರೆ ಮಾತಾಡಬೇಕಾದವರು ಮಾತಾಡುತ್ತಿಲ್ಲ ಏಕೆ! ಈ ಹೊತ್ತು ಕನ್ನಡ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಿರುವ ಬಹುತೇಕ ಪೋಷಕರು ಸರಿಯಾದ ಶಿಕ್ಷಣವಿಲ್ಲದೆ ಅಜ್ಞಾನದಲ್ಲಿದ್ದಾರೆ ಎಂದು ಒಂದು ಕ್ಷಣ ಒಪ್ಪುವ. ಮಕ್ಕಳಿಗೂ ತಮ್ಮ ಅನುಭವವನ್ನು ಅಕ್ಷರದಲ್ಲಿ ಹಿಡಿದಿಡಲು ಅಡ್ಡಿಗಳಿವೆ ಎನ್ನೋಣ. ಆದರೆ ಶಿಕ್ಷಕರು? ಡಿಇಡಿ, ಬಿಇಡಿ, ಎಂಎ, ಎಂಎಸ್‌ಸಿ ಮುಂತಾದವೆಲ್ಲವೂ ಓದಿ ಸಿಇಟಿ ಬರೆದು ಕೆಲಸಕ್ಕೆ ಆಯ್ಕೆಯಾದ ಪ್ರತಿಭಾನ್ವಿತ ಶಿಕ್ಷಕರೇ ಅಧಿಕ. ಹಾಗಿರುವಾಗ ಅವರೇಕೆ ಮಾತಾಡುತ್ತಿಲ್ಲ ಎಂಬ ಪ್ರಶ್ನೆ ಯಾವಾಗಲೂ ಕಾಡುತ್ತಿರುತ್ತದೆ. ಏಕೆಂದರೆ ಇವತ್ತಿನ ಸಮಸ್ಯೆಯ ಸರಿಯಾದ ರೂಪ ತಿಳಿದಿರುವುದು ಶಿಕ್ಷಕರಿಗೇ ಹೊರತು ಈ ಕ್ಷೇತ್ರದ ಹೊರಗೆ ಕುಳಿತವರಿಗಲ್ಲ. ಅದಕ್ಕಾಗಿ ಶಿಕ್ಷಕರು ಮಾತಾಡಬೇಕು, ತಮ್ಮ ಸುಖ ದು:ಖದ ಅನುಭವವನ್ನು ಹೊರ ಜಗತ್ತಿಗೆ ಇಡಬೇಕು. ಇಲ್ಲವಾದರೆ ಕೆಲ 'ತಜ್ಞರು' ಹೇಳುವ ಭ್ರಮೆಯ ಮಾತುಗಳೇ ನಿಜವೆನಿಸಿಬಿಡುತ್ತವೆ! ಬಹುಶ: ಸರ್ಕಾರಿ ಕೆಲಸವಾದ್ದರಿಂದ 'ಏನು ಮಾತಾಡಿದರೆ ನಾಳೆ ಹೇಗೋ' ಎಂಬ ಆತಂಕ ಕಾಡಿ ಬಹುಮಂದಿ ಶಿಕ್ಷಕರು ಸುಮ್ಮನಿದ್ದಾರೆ ಅನಿಸುತ್ತದೆ.

ಕನ್ನಡ ಶಾಲೆಗಳು ಯಾಕಿವತ್ತು ಅಲಕ್ಷ್ಯಕ್ಕೊಳಗಾಗಿವೆ, ಮಕ್ಕಳ ಕೊರತೆಯಿಂದ ಬಳಲುತ್ತಿವೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಸರ್ಕಾರ ಖಾಸಗಿ ಶಾಲೆಗಳಿಗೆ ಬೇಕಾಬಿಟ್ಟಿ ಪರವಾನಿಗೆ ಕೊಡುತ್ತ ಬಂದದ್ದರಿಂದ ಸುಧೀರ್ಘ ಕಾಲದಲ್ಲಿ ಘಟಿಸಿದ ಅನಾಹುತ ಇದು. ಖಾಸಗಿ ಶಾಲೆಗಳ ದುಡ್ಡಿನ ಹಪಹಪಿ, ಅದರ ಸುತ್ತ ಹಬ್ಬಿಕೊಂಡಿರುವ ವಿವಿಧ ಕೀಳು ರಾಜಕೀಯಗಳು ಇಂದಿನ ದುಸ್ಥಿತಿಗೆ ನೇರ ಕಾರಣ.

ಜನರಲ್ಲಿರುವ ಇಂಗ್ಲೀಷ್ ಭಾಷೆಯ ವ್ಯಾಮೋಹವನ್ನು ಖಾಸಗಿ ಶಾಲೆಗಳು ಸಮರ್ಥವಾಗಿ ಬಳಸಿಕೊಂಡವು. ಸಮಾಜದಲ್ಲಿ 'ಮೇಲುಸ್ತರ'ದವರನ್ನು ಅನುಕರಿಸುವ ಇತರರು ಕ್ರಮೇಣ ಅದೇ ದಾರಿ ತುಳಿದರು. ಪರಿಣಾಮ ನಮ್ಮ ಮುದ್ದು ಮಕ್ಕಳೆಲ್ಲ ಇವತ್ತು ಲಕ್ಷಾಂತರ ಫೀಜ್ ಸುರಿದು ಕಳುಹಿಸಿಕೊಟ್ಟ ಖಾಸಗಿ ಶಾಲೆಯಲ್ಲಿವೆ. 'ಶಾಲೆ ಹೇಗೇ ಇರಲಿ ಅದು ಇಂಗ್ಲೀಷ್ ಮಾಧ್ಯಮದ್ದಾದರೆ ಆಯಿತು' ಎಂಬ ಭಾವನೆ ಜನಸಾಮಾನ್ಯರಲ್ಲಿ ಬೆಳೆದಿದೆ. ಮೇಲ್ಮಮಧ್ಯಮ ವರ್ಗದವರಿಗಂತೂ ತಮ್ಮ ಮಕ್ಕಳು ಪ್ರತಿಷ್ಠಿತ ಶಾಲೆಯ ಕಾರಿಡಾರ್‌ನಲ್ಲಿಯೇ ನಡೆದಾಡಬೇಕೆಂಬ ಹುಚ್ಚು. ಮಕ್ಕಳು ಆಡುವರೋ, ಹಾಡುವರೋ ಬೇಕಾಗಿಲ್ಲ. ಅವರು ನಾಳೆ ಡಾಕ್ಟರೋ, ಇಂಜಿನಿಯರೋ ಆದರೆ ಸಾಕು ಎಂದು. ಇದು ಪ್ರಜ್ಞಾವಂತರೆನಿಸಿಕೊಂಡ ಪೋಷಕರ ಕ್ರೂರತನವಲ್ಲದೆ ಮತ್ತೇನು?

ಮಣ್ಣಲ್ಲಿ, ನೀರಲ್ಲಿ, ಬಿಸಿಲಲ್ಲಿ, ಗಾಳಿಯಲ್ಲಿ ಆಡಿಕೊಂಡು ತಮ್ಮಿಷ್ಟದ ಮನೆ ಭಾಷೆಯಲ್ಲಿ ಮಾತಾಡಿಕೊಂಡು ಹಕ್ಕಿಗಳಂತೆ ಇರಬೇಕಾದ ಕಂದಮ್ಮಗಳು 'ಶಿಸ್ತಾಗಿ' ಬೆಳಿಗ್ಗೆ ಏಳಕ್ಕೆ ಮನೆ ಬಿಟ್ಟು ಬಾಯಿಪಾಠ ಹೊಡೆದುಕೊಂಡು ಸಂಜೆ ಕಾಲೆಳೆಯುತ್ತ ಮನೆ ತಲುಪುತ್ತವೆ. ಈ ಸನ್ನಿವೇಶ ಯಾಕೆ ಪೋಷಕರ ಮನಕಲಕುವುದಿಲ್ಲ ಎನ್ನುವುದು ಪ್ರಶ್ನೆ.

ಹೀಗೆಂದೊಡನೆ ಕನ್ನಡ ಶಾಲೆಗಳು ನೂರಕ್ಕೆ ನೂರು ಸರಿ ಇವೆಯೇ? ಎಂಬ ಮಾತು ಬಂದೇ ಬರುತ್ತದೆ. ನಿಜ. ಪೂರ್ತಿಯಾಗಿ ಎಂದೂ ಯಾವುದು ಸರಿ ಇರುವುದು ಅಪರೂಪ. ಅದೂ ಅಲ್ಲದೆ ಸರ್ಕಾರಿ ಕೆಲಸ ಅಂದರೆ ನಮ್ಮ ಜನರಲ್ಲಿರುವ ಉದಾಸೀನ ಜನಜನಿತವಾದದ್ದು. ಆದರೆ ಏನೇ ಇದ್ದರೂ ಮಗುವಿನ ಸ್ವತಂತ್ರ ಆಲೋಚನೆಗೆ ಆಟವಾಡುವ ತಹತಹಿಕೆಗೆ, ಪ್ರತಿಕ್ಷಣ ಆಳದಲ್ಲಿ ನಡೆಯುವ ವ್ಯಕ್ತಿತ್ವ ವಿಕಸನ ಪ್ರಕ್ರಿಯೆಗೆ ಕನ್ನಡ ಶಾಲೆ ಅಡ್ಡಿಯಾಗುವುದಿಲ್ಲ ಎಂಬುದು ನನ್ನ ಹದಿನೈದು ವರ್ಷಗಳ ಅನುಭವದಲ್ಲಿ ಕಂಡುಕೊಂಡ ಸತ್ಯ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಸರ್ಕಾರಿ ಶಾಲೆಯ ಮಗು, ನಿರ್ಭಯ ವಾತಾವರಣದಲ್ಲಿ ಬೆಳೆಯುತ್ತದಲ್ಲ ಅದೇ ಅದರ ವ್ಯಕ್ತಿತ್ವವನ್ನು ಸಮರ್ಥವಾಗಿ ರೂಪಿಸುವ ಅಂಶ. ಭಯ, ಹಿಂಸೆ, ಏಕಾಕಿತನದ ನೋವು ಕನ್ನಡ ಶಾಲೆಗಳಲ್ಲಿ ಮಗುವಿಗೆ ತೀರಾ ಕಮ್ಮಿ. ಆದರೆ ಇಂತಹ ಮಾತೃಭಾಷೆಯ ಶಿಕ್ಷಣ ಪೋಷಕರಿಗೆ ಬೇಡವೆನಿಸಿದ್ದು ಏಕೆ? ಬಹುಶ: ಇದರ ಹಿಂದೆ ಕೆಲಸ ಮಾಡುತ್ತಿರುವ ಶಕ್ತಿಗಳು ಅಷ್ಟು ಸಮರ್ಥವಾಗಿವೆ. ಇಷ್ಟೆಲ್ಲಾ ಗೊತ್ತಿದ್ದು ಸರ್ಕಾರಿ ಶಾಲೆಯ ಸಮಸ್ಯೆಗಳೆಲ್ಲಕ್ಕೂ ಅಲ್ಲಿನ ಶಿಕ್ಷಕರೇ ಕಾರಣ ಎಂದು ಹಲವರು ದೂರುವುದನ್ನು ಕೇಳುತ್ತೇವೆ.

ಶಿಕ್ಷಕನೊಬ್ಬನ ಕೆಲಸ ನೋಡಿದಷ್ಟು ಸುಲಭವಲ್ಲ. ತುಂಬಾ ಜವಾಬ್ದಾರಿ, ಸೂಕ್ಷ್ಮತೆಯನ್ನು ಬೇಡುವ ಕೆಲಸವಿದು. ಇಲಾಖೆಯ ಒತ್ತಡಗಳು, ಕಚೇರಿ ಕೆಲಸಗಳು ಅದರ ಜೊತೆಗೆ ಹಳ್ಳಿಯ ರಾಜಕೀಯ, ಮೇಲಧಿಕಾರಿಗಳ ಜೊತೆಗಾಗುವ ಸಂಘರ್ಷಗಳು, ಸಹೋದ್ಯೋಗಿಗಳಲ್ಲಿ ಒಗ್ಗಟ್ಟಿನ ಕೊರತೆ ಹೀಗೆ ಹಲವು ಬಿಸಿ ಕಾವಲಿಗಳ ಮಧ್ಯೆ ಏಗಬೇಕಾಗುತ್ತದೆ. ಮುಗ್ಧ ಮಕ್ಕಳ ಮೂಲಕ ಶಿಕ್ಷಕರ ಮೇಲಿರುವ ಯಾವುದೋ ವೈಯಕ್ತಿಕ ಅಸಹನೆಯನ್ನು ತೀರಿಸಿಕೊಳ್ಳುವ ಹಲವು ಪ್ರಕರಣಗಳು ನಡೆಯುತ್ತಿರುತ್ತವೆ. ಈ ಎಲ್ಲದರ ನಡುವೆ ಪಾಠ ಮಾಡುವ ಶಿಕ್ಷಕರು, ಸಿಟ್ಟು, ಸಿನಿಕತನಕ್ಕೆ ಒಳಗಾಗದೆ ಮಗುವಿನ ಹೂವಿನ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳಬೇಕಾದ ಜವಾಬ್ದಾರಿ ಇದೆ. ಮುಖ್ಯವಾದ ವಿಷಯವೆಂದರೆ ಸರ್ಕಾರ ತೀವ್ರ ಇಚ್ಛಾಶಕ್ತಿ ಪ್ರದರ್ಶಿಸಿದರೆ ಇಂದು ಕನ್ನಡ ಶಾಲೆಗಳು ಮುಚ್ಚುವ ಪರಿಸ್ಥಿತಿ ಖಂಡಿತ ಇಲ್ಲ. ಏಕೆಂದರೆ ಅಂಕಿಅಂಶಗಳ ಪ್ರಕಾರ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಗನುಗುಣವಾಗಿ ಶಾಲೆಗಳೇ ನಮ್ಮಲ್ಲಿ ಇಲ್ಲ. ಹಾಗಾದರೆ ತಪ್ಪಾಗಿರುವುದು ಎಲ್ಲಿ?

ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಶಾಲೆಯ ದಾರಿ ತೆರೆಯಬೇಕು. ಇದನ್ನು ಹೇಗೆ ಸಾಧಿಸಬಹುದು ಎಂಬ ನೆಲೆಯಲ್ಲಿ ಸದ್ಯಕ್ಕೆ ಕಾರ್ಯಪ್ರವೃತ್ತರಾಗುವ ತುರ್ತಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ತೀರಾ ಕೆಳಸ್ತರದಲ್ಲಿರುವ ಶೋಷಿತ ಸಮುದಾಯದ ಶಾಲೆಯಿಂದ ಹೊರಗುಳಿದ ಮಕ್ಕಳು ಶಾಲೆಗೆ ಬಂದಾಗ ಸಾಂಪ್ರದಾಯಿಕ ಫಲಿತಾಂಶದಲ್ಲಿ ಏರುಪೇರಾಗುವುದು ಸಹಜ. ಹಾಗಾಗಿ 'ಫಲಿತಾಂಶ'ದ ಹೊಸ ವ್ಯಾಖ್ಯೆಯನ್ನು ಜಾರಿಗೆ ತರಬೇಕಾಗಿದೆ. ಈಗಿರುವ ಹತ್ತನೇ ತರಗತಿ ಪಬ್ಲಿಕ್ ಪರೀಕ್ಷೆ ಅಸ್ತಿತ್ವದಲ್ಲಿರುವ ತನಕ ಶಾಲೆಯಿಂದ ಹೊರಗುಳಿದ ಮಕ್ಕಳು ಶಾಲೆಗೆ ಬರುವ ಹಾದಿಯಲ್ಲಿ ನೂರಾರು 'ಅಡ್ಡಿ ಆತಂಕ'ಗಳು ಎದುರಾಗುತ್ತವೆ!!

ಈ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಾಗಿದೆ. ಈಗ ಒಂಬತ್ತನೆಯ ತರಗತಿಯ ತನಕ ಇರುವ ಸಿಸಿಇ ಮಾದರಿಯ ಮೌಲ್ಯಮಾಪನವನ್ನೇ ಹತ್ತನೆಯ ತರಗತಿಗೂ ಪೂರ್ಣವಾಗಿ ಒಳಪಡಿಸುವಲ್ಲಿ ಯಶಸ್ವಿಯಾದರೆ, ಅನೇಕ ಕಗ್ಗಂಟುಗಳು ಬಿಚ್ಚಿಕೊಳ್ಳುತ್ತವೆ. ಅಲ್ಲದೆ ಹತ್ತನೆ ತರಗತಿಯ ಈಗ ಇರುವ ಅವೈಜ್ಞಾನಿಕ ಪರೀಕ್ಷಾ ಪದ್ಧತಿಗೆ ಒಂದು ಕೊನೆ ಸಿಕ್ಕಂತಾಗುತ್ತದೆ. 'ಹದಿನಾರು ವರ್ಷದೊಳಗಿನ, ಸಮಾಜದ ಎಲ್ಲ ಸ್ತರದ ಮಕ್ಕಳೂ ಶಾಲೆಯಲ್ಲಿ ಇರಬೇಕು' ಎನ್ನುವುದನ್ನು ಘೋಷಾವಾಕ್ಯವಾಗಿಟ್ಟುಕೊಳ್ಳುವುದು ಪ್ರಸ್ತುತ ಕಾಲದ ತುರ್ತಾಗಿದೆ.



**(ಮೂಡುಬಿದ್ರೆ ಬಳಿಯ ನೀರ್ಕೆರೆಯಲ್ಲಿ ಪ್ರೌಢಶಾಲಾ ಶಿಕ್ಷಕಿಯಾಗಿರುವ ವಿಜಯಶ್ರೀ ಹಾಲಾಡಿ ಕವಯತ್ರಿ ಮತ್ತು ಚಿತ್ರ ಕಲಾವಿದರೂ ಕೂಡ.)**

# ಒಂದಿಷ್ಟು ನನ್ನದು...

## (ಬಿ.ಟಿ. ಬೆಳಗಟ್ಟ ಅವರ ಬಾಲ್ಯ ಕಾಲ ಕಥೆಯ ಆಯ್ದ ಭಾಗ)

**ಚಮ್ಮಾರ ಕುಟುಂಬವೊಂದರ ಅಪ್ಪ ಮತ್ತು ಮಗ ಹದಮಾಡಿದ ಚರ್ಮವನ್ನು ತಲೆ ಮೇಲೆ ಹೊತ್ತು, ತಮ್ಮ ಹಳ್ಳಿ ಬೆಳಗಟ್ಟದಿಂದ ಚಿತ್ರದುರ್ಗ ಸಂತೆಗೆ ಹೋಗಿ ಬಂದ ಈ ಅನುಭವ ಕಥನ, ಆ ಅಪ್ಪನ ಥಣ್ಣನೆಯ ಪ್ರಬುದ್ಧತೆ ಮತ್ತು ಮಗನ ಸರಳ ಮುಗ್ಧತೆಗಳ ಚಿತ್ರಗಳೊಂದಿಗೆ ನಮ್ಮ ಮನಸ್ಸಿನಲ್ಲಿ ಹಲವು ಸ್ತರಗಳ ಅಲೆಗಳನ್ನು ಎಬ್ಬಿಸಬಲ್ಲದು-ಸಂ.**



ಚಿತ್ರ: ಗುಜ್ಜಾರಪ್ಪ

**ಕೊ**ಲ್ಲಾರಮ್ಮನ ಗುಡಿಯ ಮುಂದಿನ ವಿಶಾಲವಾದ, ನಾವು ಗೋಲಿ ಗಜ್ಜುಗ, ಚಿನ್ನಿದಾಂಡು ಆಡುವ ಜಾಗವನ್ನು ಭಾನುವಾರ ಅಪ್ಪಯ್ಯ ಆಕ್ರಮಿಸುತ್ತಿದ್ದರು, ಚರ್ಮ ಒಣಗಿಸಲಿಕ್ಕೆ. ಚರ್ಮವನ್ನು ಒಣಗಿಸುವ ಆ ಕಾಯಕದಲ್ಲಿ ನನ್ನ ಪಾತ್ರವೂ ಇರುತ್ತಿತ್ತು. ಒಂದು ಕಡೆ ಅಪ್ಪಯ್ಯ ಹಿಗ್ಗಿ ಎಳೆದರೆ ನಾನು ಮತ್ತೊಂದು ಕಡೆ ನನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಎಳೆದು ಕುಳ್ಳಿರುತ್ತಿದ್ದೆ. ಕೈಯಲ್ಲಿ ಕಬ್ಬಿಣದ ದೊಡ್ಡ ಮೊಳೆಯನ್ನು ಚರ್ಮದ ತುದಿಯಲ್ಲಿ ಮಾಡಿದ ರಂಧ್ರಕ್ಕೆ ತೂರಿಸಿ ಭದ್ರವಾಗಿ ಹಿಡಿದಿರಬೇಕಿತ್ತು ನಾನು. ಚರ್ಮದ ಸುತ್ತ ಅಂಥ ಎಂಟು ಹತ್ತು ಅಥವಾ ಇನ್ನೂ ಹೆಚ್ಚು ರಂಧ್ರಗಳು ಇರುತ್ತಿದ್ದವು. ಭಾನುವಾರ ಬೆಳಿಗ್ಗೆ ಹಾಗೆ ಮೊಳೆ ಹೊಡೆದು ಬಿಟ್ಟುಬಿಟ್ಟರೆ ಅದು ಸಂಜೆ ಹೊತ್ತಿಗೆ ಒಣಗಿ ಮರುದಿನ ಸೋಮವಾರ ಚಿತ್ರದುರ್ಗದ ಸಂತೆಗೆ ಸಿದ್ಧವಾಗಿರುತ್ತಿತ್ತು. ಸೋಮವಾರ ನಸುಕಿನಲ್ಲಿಯೇ ಅಪ್ಪಯ್ಯ ಎದ್ದು, ಅವರ ಎಂದಿನ ದಿರಿಸಾದ ನಿಕ್ಕರು, ಬನಿಯನ್‌ಗಳ ಮೇಲೆ ಪೆಟಾರಿಯಲ್ಲಿ ಮಡಚಿಟ್ಟ ಬಿಳಿ ಅಂಗಿ ಮತ್ತು ಬಿಳಿ ಲುಂಗಿಯನ್ನು ಧರಿಸುವರು. ತಲೆಗೆ ಕಟ್ಟಿದ್ದ ಟವಲನ್ನು ಭದ್ರಪಡಿಸಿಕೊಳ್ಳುವರು. ಮೂರು ಮಡಿಪು ಒಪ್ಪವಾಗಿ ಮಡಿಚಿಟ್ಟ ತಮ್ಮ ಶ್ರಮದ ಫಲವಾದ ಆ ಚರ್ಮವನ್ನು ತಲೆಯ ಮೇಲೆ ಹೊತ್ತು ದುರ್ಗಕ್ಕೆ ಹೊರಡುವರು.

ಚಿತ್ರದುರ್ಗವು ಬೆಳಗಟ್ಟದಿಂದ ಹನ್ನೊಂದು ಕಿ.ಮೀ. ಗಳಷ್ಟು ದೂರ. ಬಸ್ಸುಗಳು ಇದ್ದರೂ ಚರ್ಮದ ಜೊತೆ ಅಪ್ಪಯ್ಯನನ್ನು ಯಾರೂ ಬಸ್ಸು ಹತ್ತಿಸಿಕೊಳ್ಳುತ್ತಿರಲಿಲ್ಲ. ಸೋಮವಾರ ಬೆಳಗಿನ ಬಸ್ಸುಗಳು ಬೆಳಗಟ್ಟಕ್ಕೆ ಬರುವಾಗಲೇ ಭರ್ತಿಯಾಗಿ ಏದುಸಿರು ಬಿಡುತ್ತಾ ಬಂದು ನಿಂತರೆ, ಹತ್ತುವ ಧೈರ್ಯವಿದ್ದವರು ಟಾಪ್‌ಗೆ ಹೋಗುವರು. ಏಣಿ ಅಡರಿ ಕೆಲವರು ನಿಲ್ಲುವರು. ಅಂಥದ್ದರಲ್ಲಿ ಅಪ್ಪಯ್ಯ ಮಾಲುಸಮೇತ ಹತ್ತುವುದಾದರೂ ಹೇಗೆ? ಒಂದು ದಿನ ಕಷ್ಟಪಟ್ಟು ಹಾಗೂ ಹೀಗೂ ಮಾಡಿ ಟಾಪ್‌ಗೆ ಚರ್ಮವನ್ನು ಇಟ್ಟು ಇಳಿಯುವಾಗ ಕಂಡಕ್ಟರ್ ನೋಡಿಬಿಟ್ಟನಂತೆ. ಕೆಟ್ಟ ಮಾತುಗಳಿಂದ ಅಪ್ಪಯ್ಯನನ್ನು ಅವನು ಬೈದು, 'ಇಳಿಸೋ ಮೊದ್ಲು' ಎಂದಾಗ, ಅಷ್ಟು ಜನಗಳ ನಡುವೆ ಅಪ್ಪಯ್ಯ ಇಷ್ಟೇ ಆಗಿಬಿಟ್ಟಿದ್ದರಂತೆ. ಚರ್ಮವನ್ನು ಇಳಿಸಿಕೊಂಡು ಅವರು ತೆಪ್ಪಗೆ ಚಿತ್ರದುರ್ಗದ ಹಾದಿ ಹಿಡಿದಿದ್ದರಂತೆ.

ಭಾರೀ ಭಾರವಿಲ್ಲದಿದ್ದರೂ ಬಹಳ ದೂರವಾದ್ದರಿಂದ ಚರ್ಮ ಹೊತ್ತ ಕತ್ತು ಚಿತ್ರದುರ್ಗಕ್ಕೆ ಬರುವ ಹೊತ್ತಿಗೆ ಅಪ್ಪಯ್ಯನನ್ನು ಸುಸ್ತು ಮಾಡುತ್ತಿತ್ತು. ಹಸಿದುಕೊಂಡೇ ಹೋಗಿದ್ದ ಅವರು ತಮ್ಮ ಮಾಲು ಮಾರಾಟವಾಗುವವರೆಗೆ ಏನನ್ನೂ ತಿನ್ನುವಂತಿರಲಿಲ್ಲ. ಅಪ್ಪಯ್ಯನದು ಒಂದು ಶ್ರೇಷ್ಠ ದರ್ಜೆಯ ಹದವೆಂದು ಆ ಮಾರ್ಕೆಟ್‌ಗೇ ಗೊತ್ತಿತ್ತು. ಅಗಸನಕಲ್ಲು ತಿಪ್ಪಯ್ಯ ಚಿತ್ರದುರ್ಗದ ಯೂನಿಯನ್ ಟಾಕೀಸ್ ಬಳಿ ದೊಡ್ಡದಾದ ಚಪ್ಪಲಿ ಅಂಗಡಿ ಹೊಂದಿದ್ದ ಸಾಹುಕಾರ. ಆತನಿಗೆ ಅಪ್ಪಯ್ಯನು ತಂದ ಚರ್ಮವೇ ಬೇಕು. ನಸು ಹಳದಿ ಬಣ್ಣದಿಂದ ಕಂಗೊಳಿಸುತ್ತಿದ್ದ ಅದು ಅಪ್ಪಯ್ಯ ಹೇಳಿದ ರೇಟಿಗೇ ಹೋಗದಿದ್ದರು, ಆ ಮಾರ್ಕೆಟ್‌ನಲ್ಲಿ ಅತ್ಯಧಿಕ ಬೆಲೆಗೆ ಮಾರಾಟವಾಗುತ್ತಿತ್ತು.

ಕೊಲ್ಲಾರಮ್ಮನ ಗುಡಿಯ ಮುಂದಿನ ವಿಶಾಲ ಅಂಗಳದಲ್ಲಿ ಅಪ್ಪಯ್ಯ ಹದ ಮಾಡಿದ್ದ ಎರಡು ಚರ್ಮಗಳು ಆ ಭಾನುವಾರ ಮೊಳೆಗಳನ್ನು ಸುತ್ತಲೂ ಹೊಡೆದುಕೊಂಡು ಒಣಗುತ್ತಿದ್ದವು. ಆ ದಿನ ಪೂರ್ತಿ ನನಗೆ ಒಂದೇ ಯೋಚನೆ. ಅಪ್ಪಯ್ಯ ಎರಡನ್ನೂ ಹೇಗೆ ಒಟ್ಟಿಗೆ ಚಿತ್ರದುರ್ಗದವರೆಗೆ ಹೊತ್ತು ಒಯ್ಯುತ್ತಾರೆ? ಒಂದನ್ನು ಹೊತ್ತರೇ ಕತ್ತು ನೋಯುತ್ತಪ್ಪ ಎಂದು ಹೇಳುವ ಅವರು, ಈ ಎರಡನ್ನೂ ಹೇಗೆ ಹೊತ್ತು ನಿಭಾಯಿಸುತ್ತಾರೆ? ನಾನೂ ಜೊತೆಗೆ ಹೋದರೆ ಹೇಗೆ? ನಿಧಾನಕ್ಕೆ ನಾನು ಅಪ್ಪಯ್ಯನ ಬಳಿ ಅರ್ಜಿಯಿಟ್ಟೆ. 'ಅಪ್ಪ, ನಾನೂ ದುರ್ಗಕ್ಕೆ ಬರ್ತೀನಿ'. ಅಪ್ಪಯ್ಯ ಸಿಟ್ಟು ಮಾಡಿಕೊಂಡರು, 'ಯಾಕಪ್ಪ? ಏನ್ ತಿನ್ನಕೆ ಬರ್ತಿ ಅಲ್ಲಿ?' ಅಂದರು. ನಾನು ಅಲ್ಲಿಗೆ ನಿಲ್ಲಿಸಿದರೂ, ಸಮಯ ಸಾಧಿಸಿ ಮತ್ತೆ ಅರ್ಜಿ ಗುಜರಾಯಿಸಿದೆ. ಈ ಬಾರಿ ಅಪ್ಪಯ್ಯ 'ನಡಕೊಂಡು ಅಷ್ಟು ದೂರ ಎಂಗೆ ಬರ್ತೀಯೋ? ಕಾಲು ಏನ್ ಗತಿ ಆಗ್ತವೆ? ಬರೀ ಕಾಲು ಬ್ಯಾರೆ' ಅಂದರು. ಅಪ್ಪಯ್ಯನ ದನಿ ಪ್ರಸ್ತವಾಗುತ್ತಿದ್ದಂತೆ ನಾನು ಉತ್ತೇಜಿತನಾಗಿ ಅವರ ಒಪ್ಪಿಗೆ ಸಿಕ್ಕೇ ಬಿಟ್ಟಿತು ಎಂಬಂತೆ, 'ಏನೂ ಆಗಲ್ಲ, ನಾನು ಬರ್ತೀನಿ' ಎಂದು ಉಲ್ಲಸಿತನಾಗಿ ನುಡಿದೆ. ಅಪ್ಪಯ್ಯ ಸುಮ್ಮನಿದ್ದರು. ಮೌನಂ ಸಮ್ಮತಿ ಲಕ್ಷಣಂ! ಅಮ್ಮ ನಾನೂ ಹೊರಟಿದ್ದನ್ನು ಕೇಳಿ ಗಲಿಬಿಲಿಗೊಂಡು ಸೋಮವಾರ ಬೆಳಿಗ್ಗೆ ಹೊತ್ತು ಮುಂಚೆ ಎದ್ದು ನವಣೆ ಅನ್ನವನ್ನು ಮಾಡಿ ಮೊಸರು ಮೆದ್ದು ಉಂಡೆಗಳನ್ನು ಮಾಡಿ ಕಟ್ಟಿಕೊಟ್ಟರು.

ನಾವು ಹೊರಟಾಗ ಹೊತ್ತು ಮೂಡುತ್ತಿತ್ತು. ನಮ್ಮ ಸ್ಕೂಲಿನ ಮುಂದೆ ಬಂದಾಗ? ಸ್ಕೂಲು ಆಗ ತಾನೆ ಕಣ್ಣುಜ್ಜಿಕೊಂಡು ನನ್ನನ್ನು ನೋಡಿ, 'ಏ ಕಳ್ಳ, ಬರಲ್ಲವೇನೋ?' ಎಂದು ಅಂದ ಹಾಗೆ ಆಯಿತು. ನಾನು ಮುಗುಳ್ನಗೆಯನ್ನು ಬೀರಿ ಅಪ್ಪಯ್ಯನ ಹಿಂದೆ ನಡೆದೆ. ಯರಗಾಟನಾಯಕನ ಗುಡಿ ದಾಟಿ, ನಮ್ಮ ಗುಟ್ಟೆ, ಪಿಂಜಾರಗುಟ್ಟೆ ದಾಟಿ ಬರುವ ತಿರುವನ್ನು ಕ್ರಮಿಸಿದ ನಂತರ, 'ಅಪ್ಪ, ಆ ಸಣ್ಣದು ನನಗೆ ಕೊಡಪ್ಪ ನಾನೂ ಸ್ವಲ್ಪ ದೂರ ತಲೆ ಮೇಲೆ ಇಟ್ಟುಕೊಳ್ತೀನಿ' ಅಂದೆ! ಅಪ್ಪಯ್ಯ ನನ್ನ ಕಡೆ ಆಶ್ಚರ್ಯ ಚಕಿತರಾಗಿ ನೋಡಿದರು, 'ಏ, ಸುಮ್ನೆ ಬಾರ, ದಡ್ಡ' ಅಂದರು.

ನಾನು ಬಿಡಲಿಲ್ಲ, ಅವರು ಅದನ್ನು ಕೊಡುವವರೆಗೂ ಗೋಗರೆಯುತ್ತಲೇ ಹೋದೆ. 'ಯಾರನ್ನ ನೋಡಿ, ಓದ ಹುಡುಗನ್ತಲೆ ಮೇಲೆ ಚರ್ಮ ಹೊರಿಸ್ಕೊಂಡೋಗ್ತೀಯಲ್ಲೋ ಬೇಕೂಪ ಅಂದ್ರೆ ಏನೇಳ್ಬೇಕೋ, ಸುಮ್ನೆ ಬಾ' ಎಂದು ಗದರಿದರು. ನಾನು ಜಗ್ಗಲಿಲ್ಲ. 'ಕೊಡಪ್ಪ, ಏನಾಗಲ್ಲ, ಕೊಡಪ್ಪ' ಎಂದು ಬಲವಂತ ಮಾಡುತ್ತಲೇ ಹೋದೆ. ಕೊನೆಗೆ 'ಇವಂದೊಳ್ಳೆ ಕತೆ ಆತಲ್ಲ' ಎಂದು ಜಾಲಗಾರನ ಗುಡಿ ಸ್ವಲ್ಪ ದೂರ ಇರುವಂತೆ ಅಪ್ಪಯ್ಯ ತಮ್ಮ ತಲೆಯ ಮೇಲಿಂದ ಚರ್ಮಗಳನ್ನು ಇಳಿಸಿ, ಕಟ್ಟಿದ ಹುರಿಯನ್ನು ಬಿಚ್ಚಿ, ಚಿಕ್ಕದನ್ನು ನನ್ನ ತಲೆಯ ಮೇಲೆ ಇರಿಸಿದರು. ದೊಡ್ಡ ಭಟುವವನ್ನು ತಾವು ಹೊತ್ತು ಹೊರಟರು. ಹಾಗೆ ಅಪ್ಪಯ್ಯನ ಹಿಂದೆ ನಾನು ಹೋಗುವಾಗ ಧನ್ಯತಾಭಾವ ನನ್ನ ಮನವನ್ನು ಆವರಿಸಿತ್ತು. ನನ್ನ ಉದ್ದೇಶ ಫಲಿಸಿತ್ತು.

ಜಾಲಗಾರನ ಗುಡಿಯನ್ನು ದಾಟಿ ಏರಿ ಹತ್ತುವಾಗ ದೂರದಲ್ಲಿ ಬಸ್ಸು ಬರುವ ಸದ್ದು ಆಲಿಸಿದ ಅಪ್ಪಯ್ಯ ನಿಂತರು. ತಮ್ಮ ತಲೆಯ ಮೇಲಿಂದ ಚರ್ಮವನ್ನು ಇಳಿಸಿ, ನನ್ನದನ್ನೂ ಇಳಿಸಿ, ಒಂದರ ಮೇಲೊಂದನ್ನು ನೆಲದ ಮೇಲಿಟ್ಟು ರಸ್ತೆ ಬಳಿ ಕುಳಿತರು. ಎಲೆ ಅಡಿಕೆ ಚೀಲ ಬಿಚ್ಚಿ, ಎಲೆಗೆ ಸುಣ್ಣ ಸವರುವ ಹೊತ್ತಿಗೆ ಬಸ್ಸು ಬುರ್ರನೆ ಬಂದು ನಮ್ಮನ್ನು ದಾಟಿ ಹೋಯಿತು. ನಮ್ಮೂರಿನವು ಬಾಗಿಲಲ್ಲೇ ನಿಂತಿದ್ದರು. ಏಣಿ ಅಡರಿ ನಿಂತಿದ್ದ ಕೆಲವರು ನಮ್ಮನ್ನೇ ನೋಡಿದರು. ಅಪ್ಪಯ್ಯ ಹಾಕಿಕೊಂಡ ತಾಂಬೂಲ ಬಾಯಿಯಿಂದ ಜಾರದಂತೆ ಕೆಳದುಟಿ ಎತ್ತರಿಸಿ 'ನೋಡ್ದೇನಪ? ಅದ್ಕೇ ನಾನ್ಹೇಳಿದ್ದು ಜನ ನೋಡ್ತರೇ ಅಂತ. ನೋಡು, ನಮ್ಮೂರರು ಎಂಗೆ ನೋಡಿದ್ರು' ಎಂದು ಎಲೆ ಅಡಿಕೆ ಚೀಲವನ್ನು ಜೇಬಿಗಿರಿಸಿ, 'ಬಾ ಒತ್ತಗ್ತೆ' ಎಂದು ಎದ್ದರು. ನಾನು ನನ್ನದನ್ನು ಹೊರಿಸಿಕೊಂಡೆ! ಗೋನೂರು ಇನ್ನು ಮಾರು ದೂರ ಇದ್ದಂತೆ ಅಪ್ಪಯ್ಯ ನನ್ನದನ್ನು ಇಳಿಸಿಕೊಂಡು, ಎರಡನ್ನು ಹೊತ್ತು ಊರು ದಾಟುವವರೆಗೆ ನನಗೆ ಸುಮ್ಮನಿರಲು ಹೇಳಿದರು. ಚಿತ್ರದುರ್ಗದ ಮಿಲಿಟರಿ ರಸ್ತೆ ಬಂದ ಕೂಡಲೇ ನನ್ನಿಂದ ಅದನ್ನು ಸಂಪೂರ್ಣವಾಗಿ ಪಡೆದು ಅಪ್ಪಯ್ಯ ಎರಡನ್ನೂ ಹೊತ್ತು ನಡೆದರು.

ಮಾರ್ಕೆಟ್ಟು ತಲುಪಿದಾಗ ಹೊತ್ತು ನೆತ್ತಿಗೇರುತ್ತಾ ಬಂದಿತ್ತು. ಅಪ್ಪಯ್ಯನ ಸ್ನೇಹಿತರು ಒಬ್ಬರ ಪಕ್ಕದಲ್ಲಿ ಒಬ್ಬರಂತೆ ತಮ್ಮ ಮಾಲುಗಳನ್ನು ಮುಂದೆ ಇಟ್ಟುಕೊಂಡು ಕುಳಿತಿದ್ದರು.

ಯಾರದ್ದೂ ವಾರಾಟವಾಗಿರಲಿಲ್ಲ. ಕೊಳ್ಳುವ ಸಾಹುಕಾರರು ಯಾರೂ ಬಂದಿರಲಿಲ್ಲವೆಂದು ತಿಳಿದುಕೊಂಡು ಅಪ್ಪಯ್ಯ ಬುತ್ತಿ ಬಿಚ್ಚಿ ನನಗೆ ಮೊದಲು ತಿನ್ನಲಿಕ್ಕೆ ಹೇಳಿದರು. ಹೊಟ್ಟೆ ಹಸಿದು ಹೋಗಿತ್ತು. ರುಚಿರುಚಿಯಾಗಿದ್ದ ಮೊಸರು ಮೆದ್ದಿದ್ದ ನವಣೆ ಅನ್ನ, ಜೊತೆಗಿದ್ದ ಕೆಂಪು ಮೆಣಸಿನಕಾಯಿ ಚಟ್ನಿ ಹೊಟ್ಟೆ ತುಂಬಾ ಉಂಡೆವು. ನೀರಿಗಾಗಿ ಸಂತೆ ಹೊಂಡಕ್ಕೆ ಹೋಗೋಣವೆಂದು ಅಪ್ಪಯ್ಯ, ತಮ್ಮ ಸ್ನೇಹಿತರೊಬ್ಬರಿಗೆ ನೋಡಿಕೊಂಡಿರುವಂತೆ ಹೇಳಿ ನನ್ನನ್ನು ಹತ್ತಿರವೇ ಇದ್ದ ಆ ಹೊಂಡಕ್ಕೆ ಅವರು ಕರೆದೊಯ್ದರು.

ಹೊಂಡದ ಕಲ್ಲು ಬಾಗಿಲು ದಾಟಿ ನೋಡಿದರೆ ಎಷ್ಟೊಂದು ಮೆಟ್ಟಿಲು ಆ ಹೊಂಡಕ್ಕೆ ಎತ್ತ ನೋಡಿದರೂ ಮೆಟ್ಟಿಲುಗಳೇ, ಒಂದೊಂದೇ ಮೆಟ್ಟಿಲು ಇಳಿಯುತ್ತಾ ಕೆಳಗಿದ್ದ ನೀರಿನ ಬಳಿ ಬಂದರೆ ಕಂಡ ನೀರು ಬರೀ ಪಾಚಿ! ಅಚ್ಚ ಹಸಿರು ಬಣ್ಣದ ಆ ನೀರನ್ನು ಕುಡಿಯುವುದಾದರೂ ಹೇಗೆ? ಅಪ್ಪಯ್ಯ ಪಾಚಿಯನ್ನು ಎರಡೂ ಕೈಗಳಲ್ಲಿ ಅತ್ತಿತ್ತ ಸರಿಸಿ, ಬೊಗಸೆಯಲ್ಲಿ ನೀರು ತೆಗೆದು ಕುಡಿದರು! ನನ್ನ ಕೈಲಿ ಅದು ಆಗಲಿಲ್ಲ. ಬೊಗಸೆಯಲ್ಲಿ ತೆಗೆದುಕೊಂಡ ನೀರು ಮೂತಿ ಹತ್ತಿರ ತಂದಾಗ ಬಂದ ವಾಸನೆಗೆ ವಾಂತಿ ಬರುವಂತಾಯಿತು. 'ಬಾ, ನೀನು ಇಲ್ಲಿ ಕುಡಿಯದು ಬ್ಯಾಡ' ಎಂದು ಅಪ್ಪಯ್ಯ ನನ್ನನ್ನು ಮೇಲೆ ಹತ್ತಿಸಿ ಹೊಂಡದಿಂದ ಹೊರಕ್ಕೆ ಕರೆತಂದರು. ಅಲ್ಲಿನ ಆಲದ ಮರದ ಆಚೆ ಬದಿಯಿದ್ದ ಕೃಷ್ಣಭವನವನ್ನು ತೋರಿಸಿ, ಸ್ವಲ್ಪದೂರದಲ್ಲಿ ನಿಂತರು. 'ಅಲ್ಲಿ ನೀರು ಕೇಳಿ ಕುಡ್ದು ಬಾ' ಎಂದರು.

ನಾನು ಹೋಟೆಲ್‌ಗೆ ಹೋದೆ. ಒಳಗೆ ಎಡಮೂಲೆಯಲ್ಲಿ ದೊಡ್ಡ ಹಿತ್ತಾಳೆ ಕೊಳಗದ ತುಂಬಾ ನೀರಿತ್ತು. ಪಕ್ಕದ ಟೇಬಲ್ ಮೇಲೆ ಸ್ಟೀಲಿನ ಉದ್ದುದ್ದನೆಯ ಲೋಟಗಳಿದ್ದವು. ಅಲ್ಲಿ ಯಾರೂ ಕಾಣಲಿಲ್ಲ. ಲೋಟ ತೆಗೆದುಕೊಂಡವನೆ ಕೊಳಗದಲ್ಲಿ ಅದ್ದಿ ಅದರ ತುಂಬ ನೀರು ತುಂಬಿಸಿಕೊಂಡು ಗಟಗಟನೆ ಕುಡಿದು ಕುಡಿದು, ಇನ್ನೇನು ಲೋಟ ಕೆಳಗಿಡಬೇಕು, ಮಾಣಿಯ ಕಣ್ಣು ನನ್ನನ್ನು ಕೆಕ್ಕರಿಸುತ್ತಿರುವುದನ್ನು ನಾನು ಕಂಡೆ. ಆತ ಬೇಗ ಬೇಗ ಬಂದು ಹುಲಿಯಂತೆ ನನ್ನ ಮೇಲೆರಗಿದ! ಎದೆ ಪಟ್ಟಿಯನ್ನು ಹಿಡಿದು ಕೆನ್ನೆಗೊಂದು ಫಳೀರನೆ ಕೊಟ್ಟುಬಿಟ್ಟ. ನಕ್ಷತ್ರಗಳು ಮಿಂಚಿ ಮರೆಯಾದವು. 'ಹೋಗೋ ರಾಸ್ಕಲ್! ಬಂದ್ಬಿಟ್ಟ ಕೊಳಗನೆಲ್ಲಾ ಎಂಜಲು ಮಾಡಕೆ. ಇನ್ನೊಂದ್ಸರ್ತಿ ಈ ಕಡೆ ತಲೆ ಹಾಕಿದ್ರೆ ಇಲ್ಲಾ ಅನ್ಸಿಬಿಡ್ತೀನಿ, ಹುಷಾರ್' ಎಂದು ನನ್ನನ್ನು ನೂಕಿಬಿಟ್ಟ. ಎಡಗೆನ್ನೆಯನ್ನು ಎಡಗೈಯಲ್ಲಿ ಮುಚ್ಚಿಕೊಂಡು ನಾನು ಅಪ್ಪಯ್ಯನ ಬಳಿ ಬಂದೆ. ಕಣ್ಣು ತುಂಬ ನೀರು ತುಂಬಿಕೊಂಡಿದ್ದೆ. ಅಪ್ಪಯ್ಯನನ್ನು ತಬ್ಬಿಕೊಂಡು ನಾನು ಜೋರಾಗಿ ಅತ್ತೆ. ಕೆಂಪು ಕೆನ್ನೆಯ ಮೇಲೆ ಬೆರಳುಗಳು ಮೂಡಿದ್ದವು. ಅಪ್ಪಯ್ಯ ನೋಡಿ, ಕೆನ್ನೆ ನೇವರಿಸಿ, 'ಏನಾಯ್ತಪ, ಏನಾಯ್ತೊ' ಎಂದರು. ಅಳುತ್ತ ಅಳುತ್ತ ನಾನು ನಡೆದದ್ದನ್ನೆಲ್ಲಾ ಹೇಳಿದೆ. ತಪ್ಪು ನನ್ನದೇ ಆಗಿತ್ತಾದ್ದರಿಂದ ಅಪ್ಪಯ್ಯ ನನಗೆ ಸಮಾಧಾನ ಹೇಳಿದರು. 'ಕೇಳಿ ಕುಡ್ದು ಬಾ ಅಂತ ನಾನೇಳಿದ್ದೆ. ಕೇಳ್ಬೇಕಾಗಿತ್ತು ಕಣೋ' ಎಂದು ಹೇಳುತ್ತಾ ನನ್ನನ್ನು ಅಲ್ಲಿಂದ ಕರೆದೊಯ್ದರು. ನಾನು ತಿರುತಿರುಗಿ ಆ ಹೋಟೆಲನ್ನೇ ನೋಡುತ್ತಾ ಅಪ್ಪಯ್ಯನ ಹಿಂದೆ ಹೋದೆ.

ಏರು ಬಿಸಿಲು ವಾಲಿದರೂ ವ್ಯಾಪಾರ ಯಾರದು ಆಗಲಿಲ್ಲ. ಅಪ್ಪಯ್ಯನ ಸ್ನೇಹಿತರೆಲ್ಲಾ ಅವರವರ ಊರಿನದು, ಕೇರಿಯದು, ಸಂಸಾರ ತಾಪತ್ರಯ ಮಾತನಾಡುತ್ತಾ ಮಾತನಾಡುತ್ತಾ ಕೊಳ್ಳುವವರು ಯಾರೂ ಬರದಿದ್ದರೆ ಮುಂದೆ ಮಾಡುವುದೇನೆಂದು ಒಳಗೊಳಗೇ ಚಿಂತಿಸುತ್ತಾ ಕಾಲ ತಳ್ಳಿದರು. ನಾನು ಒಂದು ಪರಿಧಿಯಲ್ಲಿ ಅಲ್ಲೆಲ್ಲಾ ಸುತ್ತಿದೆ. ಒಂದೆರಡು ಹೊಸ ಟಿಕ್ಕಿಗಳು ದೊರೆತವು. ರೈಸಿಂಗ್ ಸನ್, ಚಿಟಾಫೈಟ್, ಅನಿಲ್ ಮತ್ತು ಬೇರೆ ಬಣ್ಣದ ನೈಟಿಂಗೇಲ್ ಸಿಕ್ಕವು. ಖಾಲಿ ಬೆಂಕಿ ಪೊಟ್ಟಣಗಳು ಅವು ಆದ್ದರಿಂದ ಅವುಗಳನ್ನು ಮುರಿದು ಚಿತ್ರವಿದ್ದ ಭಾಗವಾದ ಟಿಕ್ಕಿಗಳನ್ನಷ್ಟೇ ಜೇಬಿನಲ್ಲಿಟ್ಟುಕೊಂಡೆ. ಅಪ್ಪಯ್ಯ ತಮ್ಮ ಎಲೆ ಅಡಿಕೆ ಚೀಲದಿಂದ ಹುಡುಕಿ ಹುಡುಕಿ ಐದು ಪೈಸೆಯ ನಾಣ್ಯವನ್ನು ಹೊರಕ್ಕೆ ತೆಗೆದು, ಅದಕ್ಕೆ ಮಾವಿನ ಹಣ್ಣು ಕೊಡಿಸಿದರು. ಅವು ಹಣ್ಣಾಗಿರಲಿಲ್ಲ. ಗಾಳಿಗೆ ಬಿದ್ದುಹೋದ ಕಾಯಿಗಳನ್ನು ಬುಟ್ಟಿಯಲ್ಲಿ ಹೊತ್ತು ತಂದಿದ್ದ. ನಾಲ್ಕೋ, ಐದೋ ಖುಷಿಯಿಂದ ಮೆದ್ದ ನೆನಪು ನನ್ನಲ್ಲಿ ಇನ್ನು ಹಸಿರಾಗಿದೆ.

ಸೂರ್ಯ ಇಳಿಯತೊಡಗಿದ. ಇಳಿಯುವ ಹೊತ್ತನ್ನು ನೋಡುತ್ತಾ ಎಲ್ಲರೂ ಸಪ್ಪೆ ಮುಖಗಳನ್ನು ಹೊತ್ತು ಮೇಲೆದ್ದರು. 'ಇನ್ನು ಯಾರೂ ಬರಲ್ಲ, ಏನಾಯ್ತೋ ಏನೋ ಇವರಿಗೆಲ್ಲ ಇವತ್ತು' ಎಂದು ಅವರು ಗೊಣಗಿಕೊಂಡರು. ಕೊಳ್ಳುವವರನ್ನು ಬೈಯ್ದುಕೊಳ್ಳುತ್ತ ಕುಳಿತು ಕಾಯುವವರು ಅಲ್ಲಿದ್ದರು. ಎದ್ದು ಹೋಗುವವರು ತಮ್ಮ ಮಾಲನ್ನು ಹೊತ್ತುಕೊಂಡು ಹೊರಟರು. ಅಪ್ಪಯ್ಯ ಹೊತ್ತು ಮುಳುಗುವವರೆಗೂ ಏಳಲಿಲ್ಲ. ಹೊತ್ತು ಕಂತುವ ವೇಳೆಯಲ್ಲಿ ಒಮ್ಮೊಮ್ಮೆ ಅಗಸನಕಲ್ಲು ತಿಪ್ಪಯ್ಯ ಮಾಲಿಗಾಗಿ ಬಂದು ಬಿಡುತ್ತಿದ್ದರಂತೆ. ಆತ ಬರುತ್ತಿದ್ದುದು ನೇರವಾಗಿ ಅಪ್ಪಯ್ಯನ ಬಳಿ ತಾನೇ. ಆಗ ಯಾರೋ ಬಂದು ಹೇಳಿದರು, 'ತಿಪ್ಪಣ್ಣ ಊರಲ್ಲಿಲ್ಲವಂತೆ'. ಕೇಳಿ ಅಪ್ಪಯ್ಯ ಇನ್ನು ಕುಳಿತಿರದಾದರು. ಎರಡೂ ಚರ್ಮಗಳನ್ನು ಅದೇ ಹುರಿಯಿಂದ ಬಿಗಿದು 'ಬಾರಪ್ಪ, ತಿಪ್ಪೇಸಮಿ' ಎಂದು ಅವುಗಳನ್ನು ಹೊತ್ತು ನನ್ನ ಕೈ ಹಿಡಿದು ಹೊರಟರು.

ಅಪ್ಪಯ್ಯನ ಹಿಂದೆ ಹೋಗುವಾಗ ನನ್ನ ಗಮನ ನೆಲದ ಮೇಲಿರುತ್ತಿತ್ತು. ಮತ್ತಾವುದಾದರೂ ಹೊಸ ಟಿಕ್ಕಿ ದೊರೆತರೆ? ಒಂದು ಅಂಥದು ಕಂಡಿತು. ಫಕ್ಕನೆ ನಾನು ಎರಡು ಹೆಜ್ಜೆ ಮುಂದಕ್ಕೆ ಬಾಗಿ ಇನ್ನೇನು ಹೋಗಿ ಬಗ್ಗಿ ಕೈಹಾಕಬೇಕು, ಸೈಕಲ್ಲಿನವನೊಬ್ಬ ಗಕ್ಕನೆ ನಿಲ್ಲಿಸಿಬಿಟ್ಟ. 'ಏ ಹುಡುಗನ್ನ ಸರಿಯಾಗಿ ಕರ್ಕೊಂಡ್ಹೋಗೋ' ಅಂದ ಅವ ನಿಂತಲ್ಲೇ. ಅಪ್ಪಯ್ಯ ನನ್ನ ಕಡೆ ನೋಡಿ 'ಸರಿಯಾಗಿ ನೋಡ್ಕಂಡು ಬಾರ' ಎಂದು ಗದರು ದನಿಯಲ್ಲಿ ನುಡಿಯುತ್ತ ನನ್ನ ಕೈಯ್ಯನ್ನು ಜಗ್ಗಿ ತಮ್ಮ ಕಡೆ ಎಳೆದುಕೊಂಡರು. ಆ ಎಳೆತದ ರಭಸದಲ್ಲಿ ಕೋಪವಿತ್ತು. ಆಗ ತಲೆಯೆತ್ತಿ ನಾನು ಅವರ ಮುಖವನ್ನು ನೋಡಿದೆ. ಅಲ್ಲಿ ಕೋಪದೊಂದಿಗೆ ಅಸಹಾಯಕತೆ, ನಿರಾಸೆ ಸೇರಿಕೊಂಡಿದ್ದವು.

ನಾವು ಯೂನಿಯನ್ ಟಾಕೀಸ್ ಬಳಿ ಬಂದೆವು. ದೊಡ್ಡ ಪೋಸ್ಟರು ಸಿನಿಮಾದ್ದು ಕಾಣಿಸಿ, ಕಣ್ಣು ದೊಡ್ಡದು ಮಾಡಿಕೊಂಡು ನಾನು ನೋಡಿದೆ. ಅದು 'ವೀರಕೇಸರಿ'. ಗುಡ್ಡದ ಪಕ್ಕದಲ್ಲಿ ಓಡುತ್ತಿರುವ ಎರಡು ಕುದುರೆಗಳ ಮೇಲೆ ಸವಾರರು, ಪಕ್ಕದಲ್ಲಿ ದೊಡ್ಡದಾದ ಲೀಲಾವತಿಯ ಚಿತ್ರ, ಅಪ್ಪಯ್ಯ ನನ್ನನ್ನು ನಿಂತು ನೋಡಲಿಕ್ಕೆ ಬಿಡದೆ ಪಕ್ಕದಲ್ಲೇ ಇದ್ದ ಚಪ್ಪಲಿ ಅಂಗಡಿಗೆ ಕರೆದೊಯ್ದರು. ಅದು ಅಗಸನಕಲ್ಲು ತಿಪ್ಪಣ್ಣನ ಅಂಗಡಿ. ಆ ಅಣ್ಣ ಇಲ್ಲದ ಆ ಅಂಗಡಿಯಲ್ಲಿ ಕೆಲಸಗಾರರಿಗೆ ಹೇಳಿ ಚರ್ಮವನ್ನು ಅಲ್ಲೇ ಇಟ್ಟು ಬಂದರು ಅಪ್ಪಯ್ಯ. ಮುಂದಿನ ಸೋಮವಾರವೇ ಅವುಗಳ ವ್ಯಾಪಾರ!

ಅಂಗಡಿಯ ಹೊರಗೆ ಅಪ್ಪಯ್ಯ ಸ್ವಲ್ಪ ಹೊತ್ತು ನಿಂತರು. ತಲೆಯೆತ್ತಿ ನಾನು ಮತ್ತೆ ಅವರ ಮುಖವನ್ನು ನೋಡಿದೆ. ಚಿಂತೆ ಎಂಬುದು ಅಲ್ಲಿ ಮಡುಗಟ್ಟಿತ್ತು. ಅಪ್ಪಯ್ಯ ಬಂದ ದಾರಿಯಲ್ಲಿಯೇ ನನ್ನನ್ನು ಕರೆದೊಯ್ದರು. ಟೂರಿಸ್ಟ್ ಹೋಟೆಲಿನ ಎಡಕ್ಕೆ ನೇರವಾಗಿ ಮದೇಹಳ್ಳಿ ರಸ್ತೆಗೆ ನಾವು ಹೋದೆವು. ಅಲ್ಲಿ ಬಲಗಡೆ ಇದ್ದ ಸಾಲು ಅಂಗಡಿಗಳಲ್ಲಿ ಮೂರನೇದು ಬೆಳಗಟ್ಟದವರದ್ದೇ ಆಗಿತ್ತು. ಅದು ನಮ್ಮೂರ ಸಾಹುಕಾರ ಕಂಚಿಕೆರೆ ಬಸಪ್ಪರೆಡ್ಡಿಯವರ ಒಡೆತನದ ಶ್ರೀ ವಿನಾಯಕ ಫರ್ಟಿಲೈಜರ್ಸ್. ಆ ಅಂಗಡಿ ಆಗ ಪ್ರಸಿದ್ಧವಾಗಿತ್ತು. ಅಲ್ಲಿಗೆ ನಾವು ಹೋದಾಗ ಸಂಜೆ ಏಳು ಗಂಟೆ ಇರಬಹುದೇನೋ. ಅಪ್ಪಯ್ಯ ಒಳಗೆ ಹೋಗಲು ಹಿಂದೆ ಮುಂದೆ ನೋಡುತ್ತಾ ಹೊಸ್ತಿಲ ಈಚೆ ನಿಂತಿದ್ದುದನ್ನು ಬಸಪ್ಪ ರೆಡ್ಡಿ ನೋಡಿದರು. 'ಬಾ ಬೋಸಯ್ಯ, ಬಾ ಏನು ನಿನ್ನ ಮಗನೇ?' ಎಂದು ನನ್ನನ್ನು ಗಮನಿಸಿದರು. ಅಪ್ಪಯ್ಯ ಒಳಕ್ಕೆ ಅಡಿಯಿಟ್ಟರು. ತಲೆಗೆ ಸುತ್ತಿದ್ದ ಟವಲನ್ನು ಬಿಚ್ಚಿ ಕೈಯಲ್ಲಿ ಹಿಡಿದು ಕೂದಲಲ್ಲಿ ಬೆರಳಾಡಿಸುತ್ತಾ 'ಗೊಂಚಿಗಾರ' ಎಂದರು. 'ಏನ್ ಹೇಳು, ದುಡ್ಡೇನಾರ ಬೇಕೆ?' ಎಂದರು ಆ ಸಾಹುಕಾರರು! ಅಪ್ಪಯ್ಯ, 'ಗೊಂಚಿಗಾರ, ಚರ್ಮ ತಂದಿದ್ದೆ, ಒಂದೂ ಓಗ್ಲಿಲ್ಲ. ಕರ್ಚಿಗೆ ಏನಾರ ಸ್ವಲ್ಪ ಕೊಟ್ಟಿದ್ರೆ ಚೆನ್ನಾಗಿತ್ತು. ಮುಂದಿನ ಸೋಮವಾರ ತಂದು ಕೊಡ್ತೀನಿ.' ಅಂದರು. ಅಷ್ಟು ಹೇಳುವ ಹೊತ್ತಿಗೆ ಅಪ್ಪಯ್ಯ ಬೆವೆತು ಹೋಗಿದ್ದರು. ಬಸಪ್ಪ ರೆಡ್ಡಿ ದುಡ್ಡು ಕೊಟ್ಟರು. ನಾನು ಗಮನಿಸಿದ ಹಾಗೆ ಟೇಬಲ್ಲಿನ ಮೇಲೆ ಬಲಕ್ಕಿದ್ದ ನೋಟಿನ ಕಂತೆಯಿಂದ ಎತ್ತಿಕೊಂಡದ್ದನ್ನು ಅವರು ಎಣಿಸಲಿಲ್ಲ. ಅಪ್ಪಯ್ಯ ಒಡ್ಡಿದ್ದ ಎರಡೂ ಕೈಗಳಲ್ಲಿ ಅದನ್ನು ಬಸಪ್ಪ ರೆಡ್ಡಿ ಇಟ್ಟರು. ನನ್ನ ಆ ಚಿಕ್ಕ ವಯಸ್ಸಿನ ಮನಸ್ಸಿಗೆ ಅವರು ದೊಡ್ಡವರಾಗಿ ಅಂದು ಕಂಡಿದ್ದರು.

ಅಪ್ಪಯ್ಯ ನನ್ನನ್ನು ಅಲ್ಲಿಂದ ಕರೆದುಕೊಂಡು ಸೀದಾ ಯೂನಿಯನ್ ಟಾಕೀಸ್‌ಗೆ ಬಂದರು. 'ಸಿನಿಮಾಕ್ಕೋಗನೇನಪ ತಿಪ್ಪೇಸಮಿ' ಅಂದರು ಅಪ್ಪಯ್ಯ. ನಾನು ಬಿಟ್ಟ ಬಾಯಿ ಬಿಟ್ಟ ಹಾಗೆ, ಬಿಟ್ಟ ಕಣ್ಣು ಬಿಟ್ಟ ಹಾಗೆ ಅವರನ್ನು ದಿಟ್ಟಿಸಿದೆ. ಹೌದು, ಅವರು ನನ್ನನ್ನು ಸಿನಿಮಾ ತೋರಿಸಲಿಕ್ಕೆಂದೇ ಅಲ್ಲಿಗೆ ಕರೆತಂದಿದ್ದರು. ನಾನು ಅಷ್ಟು ಹೊತ್ತು ತದೇಕಚಿತ್ತನಾಗಿ 'ವೀರಕೇಸರಿ' ಪೋಸ್ಟರ್ ನೋಡಿದ್ದುದನ್ನು ಗಮನಿಸಿದ್ದ ಅವರು ಆ ಉದ್ದೇಶಕ್ಕಾಗಿಯೇ ಬಸಪ್ಪ ರೆಡ್ಡಿಯವರ ಬಳಿ ಸಾಲ ಮಾಡಿ ನನ್ನನ್ನು ಅಲ್ಲಿಗೆ ಕರೆತಂದಿದ್ದರು.

ಸಿನಿಮಾ ನೋಡುವ ಸಂಭ್ರಮ ನನ್ನದು ಹೇಳತೀರದು. ಆರಂಭಕ್ಕೆ ಮುಂಚೆ ಆ ವಿಶಾಲವಾದ ಬಿಳೀ ಪರದೆ, ಇಂಪಾದ ಹಾಡುಗಳು ನನ್ನನ್ನು ಮೈಮರೆಸಿದವು. ದೀಪಗಳನ್ನೆಲ್ಲಾ ಆರಿಸಿ, ಬಾಗಿಲನ್ನು ಹಾಕಿದ ಮೇಲೆ ಮೊದಲು ಮೂಡಿದ 'ಧೂಮಪಾನ ನಿಷೇಧಿಸಿದೆ' ಹಾಗೂ ಮುಂಬರುವ ಚಿತ್ರಗಳ ಪೋಸ್ಟರ್‌ಗಳು, ಸ್ಯೈಡ್ ರೀಲುಗಳು ಒಮ್ಮೆಲೆ ಸ್ತಬ್ಧವಾಗಿ ಸೆನ್ಸಾರ್ ಬೋರ್ಡಿನ ದೊಡ್ಡ ಸರ್ಟಿಫಿಕೇಟು! ಆಗ ಅಪ್ಪಯ್ಯ 'ಸಿನಿಮಾ ಸುರು ಆಗ್ತದೆ ಕಣಪ' ಅಂದರು.

ಆರಂಭಕ್ಕೆ ಸಿನಿಮಾದಲ್ಲಿ ಕುದುರೆಗಳ ಓಟ! ಮುಂದೆ ಮುಸುಕಿನ ಮನುಷ್ಯ. ಹಿಂದೆ ವೀರಕೇಸರಿ ರಾಜಣ್ಣ. ನಂತರ ಗುಡ್ಡವೊಂದರಲ್ಲಿ ಮುಸುಕಿನ ಮನುಷ್ಯನೊಡನೆ ರಾಜಣ್ಣನ ಭರ್ಜರಿ ಕತ್ತಿವರಸೆ. ಆ ವಯಸ್ಸಿಗೆ ಅದು ಎಷ್ಟೊಂದು ಸೊಗಸು! ತಲೆಯೆತ್ತಿ (ಗಾಂಧಿ ಕ್ಲಾಸಿನಲ್ಲಿ ನಾವಿದ್ದುದು) ಬಿಡಿಗಣ್ಣಾಗಿ ನಾನು ಎಲ್ಲವನ್ನೂ ನೋಡಿದೆ. ಕೊನೆಯಲ್ಲಿ ಒಂದೋ ಎರಡೋ ರೀಲುಗಳು ಅದರಲ್ಲಿ ಬಣ್ಣದವು. ಆಗಂತೂ ನನ್ನ ಮನಸ್ಸು ನವಿಲಿನಂತೆ ಗರಿಗೆದರಿ ಕುಣಿದಿತ್ತು. ಬಣ್ಣದಲ್ಲೇ ಇದ್ದ ಒಂದು ಹಾಡನ್ನಂತೂ ನಾನು ಬಹಳ ದಿನ ಗುನುಗಿಕೊಂಡಿದ್ದೆ.

# ನವಿಲುಗರಿ

## ಹೂಗಳ ಮೇಲೆ ಪ್ರೀತಿಯಾದಾಗಲೆಲ್ಲಾ

ನನಗೆ ಹೂಗಳ ಮೇಲೆ ಪ್ರೀತಿಯಾದಾಗಲೆಲ್ಲಾ
ನನಗೆ ಮುಳ್ಳುಗಳ ಮೇಲೆ ನಡೆಯುವುದನ್ನು ಕಲಿಸಿದೆ ನೀನು

ನಾನಂತೂ ನನಗಾಗಿ ಎಂದೂ ನಗಲಿಲ್ಲ
ಪರರ ಗಾಯಗಳ ಮೇಲೆ ಅಳುವುದ ಕಲಿಸಿದೆ ನೀನು

ನಿನ್ನೆಗಳನ್ನೇ ಮೆಲುಕುತ್ತಾ ಹೋದೆ ನಾನು
ಇಂದುಗಳ ಅಪ್ಪುವುದ ಕಲಿಸಿದೆ ನೀನು

ಅಪೂರ್ಣ ಕನಸುಗಳನ್ನೇ ಧ್ಯಾನಿಸುತ್ತಾ ಕೂತೆ ನಾನು
ಕನಸುಗಳೇ ಬೀಳದ ದಾರಿಗಳ ತೆರೆದು ತೋರಿಸಿದೆ ನೀನು

ಬಂದವರ ಲೆಕ್ಕವಿಡುವುದ ಮಾತ್ರ ಕಲಿತೆ ನಾನು
ಒಳಗೆ ಬೆಸೆದುಕೊಂಡ ನಂಟುಗಳನು ದಾಟಿಸಿದೆ ನೀನು

ಬೆಳಕಿನ ಆಸೆಯಿಂದ ಹೆಚ್ಚೆಚ್ಚು
ದೇವರನ್ನು ಸುಡುತ್ತಾ ಹೋದೆ ನಾನು

ನೆಲದ ಮೇಲಿನ ಜೀವಗಳೊಡನೆ
ಹೊತ್ತು ಮೀರಿ ಮಾತಾಡುತ್ತಾ ಹೋದೆ ನೀನು



**–ಸೈಫ್ ಜಾನ್ಸೆ ಕೊಟ್ಟೂರು**



ಚಿತ್ರ: ವಿಜಯಶ್ರೀ ಹಾಲಾಡಿ



## ಮಣ್ಣಲಿಟ್ಟು ಹೋದರು

ಮಣ್ಣ ಮೈಮೇಲೆ ಹಾಕಿಕೊಳ್ಳುವುದು;
ಅವಳ ತಲೆ ಮೇಲೆ ಹೊಯ್ಯುವುದು;
ಮನೆ ಜಗುಲಿ ಮೇಲೆ ಎರಚುವುದು;
ಹಾದಿಬೀದಿಯಲಿ ನಿಂತು ತೂರುವುದು;
ಒಂದೆರಡಲ್ಲ ಮಣ್ಣ ಆಟ!

ಅಜ್ಜಿ ಗದರುವ ತನಕ;
ಅಪ್ಪ ಬರುವ ತನಕ;
ಮಣ್ಣ ಸಂಗ ಬಿಡದು!

ಅಜ್ಜ ಹೋಗಿ ಎಂಟು ವರ್ಷ;
ಅಪ್ಪ ಹೋಗಿ ಎರಡು ವರ್ಷ;
ನಾನೇ ಬಂದು ಮುಕ್ಕಾಲು ವರ್ಷ!
ಅವಳು ಬಂದು ಕಾಲು ವರ್ಷ!

ಮಣ್ಣು ಇಷ್ಟವೆಂದೇ
ನಮ್ಮನೆಲ್ಲ ಕಡೆಯದಾಗಿ ಮಣ್ಣಲಿಟ್ಟರು!

ಮಣ್ಣು ತೂರಿಕೊಂಡು ಬೈದವರು
ಮಣ್ಣ ಮೈತುಂಬ ಹರವಿ
ತುಳಿದು ಹೋದರು!

**–ಟಿ.ಪಿ. ಉಮೇಶ್**

---

ಸಿನಿಮಾ ಮುಗಿದ ಮೇಲೆ ಇರುಳು ಇನ್ನೂ ಬಹಳ ಇತ್ತು. ಮಲಗುವುದಕ್ಕೆ ಜಾಗ ಹುಡುಕುವುದಕ್ಕಿಂತ ಇರುಳು ಪೂರ್ತಿ ಎಚ್ಚರವಾಗಿಯೇ ಕಳೆಯುವ ಇಚ್ಛೆಯಿಂದ ಅಪ್ಪಯ್ಯ ಸಂತೆ ಹೊಂಡದ ಪಕ್ಕದಲ್ಲಿ ಹಾಕಿದ್ದ ನಾಟಕಕ್ಕೆ ನನ್ನನ್ನು ಕರೆದೊಯ್ದರು. ನನಗೆ ಆಗಲೇ ಆಕಳಿಕೆ ಶುರುವಾಗಿದ್ದವು. ಹಗಲು ನಡೆದು ಬಂದಿದ್ದು, ಸಂತೆಯಲ್ಲಿ ಅಲೆದದ್ದು, ಇಲ್ಲಿಯವರೆಗೆ ಸಿನಿಮಾ ನೋಡಿದ್ದು, ಕಣ್ಣುಗಳು ಉರಿಯುತ್ತಿದ್ದವು. ನೆಲ ಸಿಕ್ಕರೆ ನನಗೆ ಸಾಕಾಗಿದ್ದಿತು. ಅದು ಮಹಿಳಾ ನಾಟಕ ಮಂಡಳಿಯ ಕುರುಕ್ಷೇತ್ರ ನಾಟಕವಾಗಿದ್ದಿತು. ಐದು ಹತ್ತು ನಿಮಿಷಗಳಲ್ಲಿಯೇ ನಾನು ನಿದ್ರಾದೇವಿಯ ವಶನಾಗಿದ್ದೆ.

ಅಪ್ಪಯ್ಯ ನನ್ನನ್ನು ಎಬ್ಬಿಸಿದಾಗ ಬೆಳಗಾಗಿ ಹೋಗಿತ್ತು. 'ಥೂ, ಬಾಳ ತಗಣಿ ಕಣಪ್ಪ. ಏಟು ಕಡಿದವೋ ನಿನ್ನ' ಅಂದರು ಅಪ್ಪಯ್ಯ. ಹಾಸಿದ್ದ ಈಚಲ ಚಾಪೆಗಳಲ್ಲಿ ತಿಗಣೆಗಳು ಬಹಳ ಇದ್ದುವಂತೆ. ಹಗಲು ಅದರ ಪದರಗಳಲ್ಲಿ ಅವಿತಿದ್ದು ಇರುಳು ಹೊರಬಂದು ಅತಿಥಿಗಳ ರಕ್ತ ಹೀರುವ, ಪ್ರಾಣ ತಿನ್ನುವ ವಾತಾಪಿ, ಇಲ್ವಲರು! ಆ ರಕ್ಕಸರು ನಮ್ಮ ಮನೆಯಲ್ಲೇ, ನಮ್ಮ ಈಚಲ ಚಾಪೆಗಳಲ್ಲೇ ಸಹಸ್ರ, ಸಹಸ್ರ ಸಂಖ್ಯೆಯಲ್ಲಿ ಇದ್ದುದರಿಂದ ಅಪ್ಪಯ್ಯನ ನುಡಿಯಲ್ಲಿ ಅಚ್ಚರಿಯೇನೂ ಇರಲಿಲ್ಲ. ನಮ್ಮ ಚಾಪೆಗಳನ್ನು ಹಗಲು ಮನೆಯ ಹೊರಗೆ ಬಿಸಿಲಲ್ಲಿ ಪೂರ್ತಿ ದಿನ ಒಣಗಿಸಿಯೇ ರಾತ್ರಿ ನಾವು ಹಾಸಿ ಮಲಗುತ್ತಿದ್ದುದು.

ಅಪ್ಪಯ್ಯ ನನ್ನ ಕೈಹಿಡಿದು ರಂಗಮಂದಿರದಿಂದ ಹೊರಕ್ಕೆ ಬರುವಾಗ ನಮ್ಮೂರಿನವರೇ ಒಬ್ಬರು ಅವರಿಗೆ ಸಿಕ್ಕರು. ಅವರು ಬೆಳಗಟ್ಟದಿಂದ ಎತ್ತಿನ ಗಾಡಿಯಲ್ಲಿ ಹತ್ತಿ ತುಂಬಿ ತಂದಿದ್ದರಂತೆ ಮಾರ್ಕೆಟ್ಟಿಗೆ, ದುರ್ಗದಲ್ಲೇ ಇರುವ ಅವರ ಸಾಹುಕಾರರದ್ದಂತೆ ಹತ್ತಿ. ಇವರು ಅವರ ಮನೆಯ ಆಳು. ದುರ್ಗದಲ್ಲೇ ಇರುವ ಅವರ ಮನೆಯ ಬಳಿ ಮನೆಯ ಬಳಿ ಗಾಡಿ ನಿಲ್ಲಿಸಿದ್ದಾರಂತೆ. ಈಗ ಅದು ಖಾಲಿ. ಅದು ಬೆಳಗಟ್ಟಕ್ಕೆ ಹೊರಟಿದೆಯಂತೆ. 'ಬಾ, ಬೋಸಯ್ಯ ವೋಗನ' ಎಂದದ್ದೇ ಸಾಕಾಯ್ತು ಅಪ್ಪಯ್ಯಗೆ. ಅಲ್ಲೆಲ್ಲೋ ಒಂದು ಟೀ ಅಂಗಡಿಯಲ್ಲಿ ಅವರು ಟೀ ಕುಡಿದರು. ತಿನ್ನಲಿಕ್ಕೆ ನನಗೆ ಅಲ್ಲಿ ಏನೂ ಇರಲಿಲ್ಲ. ಬೇಗ ಬೇಗನೆ ನಾವು ಗಾಡಿಯ ಬಳಿ ಹೋದೆವು.

ಬೆಳಗಟ್ಟದ ದಾರಿಯುದ್ದಕ್ಕೂ ಅಪ್ಪಯ್ಯ ಆತನ ಬಳಿ ಅದು ಇದು ಹೇಳಿಕೊಂಡು 'ವುಡುಗ್ರು ಚೆನ್ನಾಗಿ ಓದ್ತಾರೆ ಕಣಣ್ಣ. ಅವರು ಓದ್ಲಿ. ಏನು ಕಷ್ಟ ಬಂದ್ರು ಸೈಸ್ತೀನಿ. ಒಂದೊಂದು ಸತ್ತಿ ಇಂಗಾಗ್ತದೆ, ಏನ್ಮಾಡನ? ಏನೇನೋ ಮಾಡ್ತೀನಿ ಯಾಪಾರನೇ ಆಗ್ದಿದ್ರೆ ಏನ್ಮಾಡೋದು?' ಅಪ್ಪಯ್ಯ ಅಂತರಂಗವನ್ನು ಬಿಚ್ಚಿ ಬಿಚ್ಚಿ ಅವರ ಜೊತೆ ಹೇಳಿಕೊಳ್ಳುತ್ತಿದ್ದರು. ಅವರು ಹಾಗೆ ಹೇಳಿಕೊಳ್ಳುತ್ತಿರುವಾಗ ನನ್ನ ಮನದಲ್ಲಿ ಭಾವನೆಗಳು ಏಳುತ್ತಿದ್ದವು. ಚೆನ್ನಾಗಿ ಓದಬೇಕು. ಇನ್ನೂ ಚೆನ್ನಾಗಿ. ಒಳ್ಳೆಯ ಕೆಲಸಕ್ಕೆ ಹೋಗಬೇಕು. ದುಡಿಯಬೇಕು. ಅಪ್ಪಯ್ಯನ ಕೈಗೆ ತಂದು ಕೊಡಬೇಕು. ಬಯಕೆ ಎದ್ದು ಉತ್ಸಾಹ ಉಂಟಾಗುತ್ತಿತ್ತು.



**(ಬಿಎಸ್‌ಎನ್‌ಎಲ್‌ನ ನಿವೃತ್ತ ಎಂಜಿನಿಯರ್ ಆದ ಲೇಖಕ ಬೆಳಗಟ್ಟ ಅವರು ಕಥಾ ಮತ್ತು ಕವನ ಸಂಕಲನಗಳನ್ನೂ ಪ್ರಕಟಿಸಿದ್ದು ಈಗ ದಾವಣಗೆರೆಯ ನಿವಾಸಿ)**

**(ಈ ಪುಸ್ತಕದ ಅವಲೋಕನಕ್ಕಾಗಿ ೧೭ನೇ ಪುಟ ನೋಡಿ–ಸಂ.)**

---

**೧೧ನೇ ಪುಟದಿಂದ)**

ತಂತ್ರ ಸಲಹಾ ಪರಿಣತರು ಮತ್ತು ಸಂಸ್ಥೆಗಳನ್ನು ವಿವಿಧ ಪಕ್ಷಗಳು ನೇಮಿಸಿಕೊಳ್ಳತೊಡಗಿರುವುದು ಪ್ರಜಾಪ್ರಭುತ್ವದ ಮೂಲ ಸತ್ವವನ್ನೇ ಬುಡಮೇಲುಗೊಳಿಸುವ ಕೆಲಸವೇ ಆಗಿದೆ. ಆದ್ದರಿಂದ ಈ ರಾಷ್ಟ್ರೀಯ ಪ್ರಜಾಪ್ರಭುತ್ವದ ಬದಲಾಗಿ ಒಕ್ಕೂಟ ಪ್ರಜಾಪ್ರಭುತ್ವದ, ಅಂದರೆ ಪ್ರತಿ ರಾಜ್ಯದ ರಾಜಕೀಯ–ಸಾಮಾಜಿಕ–ಸಾಂಸ್ಕೃತಿಕ ಅಸ್ಮಿತೆಗಳ ಸಮನ್ವಯ ರಾಜ್ಯ ವ್ಯವಸ್ಥೆಗಾಗಿ ಆಗ್ರಹಿಸಲು ಈಗ ಸಕಾಲವಾಗಿದೆ. ಇದಕ್ಕೆ ಅಗತ್ಯವಾದ ಸಂವಿಧಾನ ತಿದ್ದುಪಡಿಯ ಪರವಾಗಿ ನಮ್ಮ ಲೇಖಕರು ಮತ್ತು ಚಿಂತಕರು ಜನಾಭಿಪ್ರಾಯ ಮತ್ತು ಜನಸಂಘಟನೆ ಮಾಡಬೇಕು. ಆಗ ನೀವು ಹೇಳುವಂತೆ ರಾಷ್ಟ್ರದ ಕೆಲವು ರಾಜ್ಯಗಳಿಂದ ಸಾರಾ ಸಗಟಾಗಿ ತಿರಸ್ಕರಿಸಲ್ಪಟ್ಟ ವ್ಯಕ್ತಿ ರಾಷ್ಟ್ರದ ಆಳ್ವಿಕೆದಾರನಾಗುವುದು ಬಹುಪಾಲು ತಪ್ಪುತ್ತದೆ.

**–ಎನ್. ಆರ್ ಮಲ್ಲಿಕಾರ್ಜುನ,** ಮೈಸೂರು

ಗೋವಿಂದರಾಜು ಕಲ್ಲೂರು ಅವರ 'ಯುವಲಹರಿ'ಯಲ್ಲಿನ, ದಲಿತರೇ ದಲಿತರ ಶತ್ರುಗಳಾಗುತ್ತಿರುವ ದೃಷ್ಟಾಂತಸಹಿತ ಲೇಖನ ದಿಟ್ಟವೂ, ಪ್ರಾಮಾಣಿಕವೂ ಆಗಿದೆ. ದಲಿತ ರಾಜಕಾರಣವೂ ಒಂದು ಪಟ್ಟಭದ್ರ ಹಿತಾಸಕ್ತಿಯಾಗುತ್ತಿರುವ ಸಂಗತಿ ಹೊಸದೇನಲ್ಲವಾದರೂ, ಅದರ ವಿರುದ್ಧ ದನಿ ಕೇಳಿಬರದಿರುವುದು ಮಾತ್ರ ಆಶ್ಚರ್ಯಕರ.

**–ಆರ್. ನಂದಕುಮಾರ್,** ಬೆಂಗಳೂರು

(**ತಿದ್ದುಪಡಿ:** ಜೂನ್ ಸಂಚಿಕೆಯ ಸಂಪಾದಕೀಯದಲ್ಲಿ ತೆಲಂಗಾಣದಲ್ಲಿ ಬಿಜೆಪಿಗೆ ಒಂದೇ ಸ್ಥಾನ ಎಂದು ತಿಳಿಸಲಾಗಿತ್ತು. ಆದರೆ ಅದು ನಾಲ್ಕು ಸ್ಥಾನ ಎಂದಾಗಬೇಕು. ಹಾಗೇ ಮಧ್ಯಪ್ರದೇಶದ ಕಾಂಗ್ರೆಸ್ ನಾಯಕರನ್ನು ಮಾಧವರಾವ್ ಸಿಂಧ್ಯಾ ಎಂದು ಹೆಸರಿಸಲಾಗಿತ್ತು. ಅದು ಜ್ಯೋತಿರಾದಿತ್ಯ ಸಿಂಧ್ಯಾ ಎಂದಾಗಬೇಕು. ಈ ಲೋಪಗಳಿಗಾಗಿ ಕ್ಷಮೆ ಇರಲಿ.**–ಸಂ.)**

## ಸಾಹಿತ್ಯ–ಸಂಸ್ಕೃತಿ–ನಾಟಕ–ಸ್ಮರಣೆ ಇತ್ಯಾದಿ : ಗಿರೀಶ್ ಕಾರ್ನಾಡರಿಗೆ ಒಂದು ವಿದಾಯ



ಆಧುನಿಕ ಕನ್ನಡ ನಾಟಕ ಎಂಬುದಕ್ಕೆ ಇನ್ನೊಂದು ಹೆಸರಿನಂತಿದ್ದ ಗಿರೀಶ್ ಕಾರ್ನಾಡ್ ನಮ್ಮನ್ನಗಲಿ ಹೋಗಿದ್ದಾರೆ. ಸಂಸನ ನೆನಪು ಬಿಟ್ಟರೆ ಟಿ.ಪಿ.ಕೈಲಾಸಂ ಅವರ ಸ್ವಲ್ಪ ಸುಧಾರಿತ ರೂಪದಂತಿದ್ದ ಶ್ರೀರಂಗರ ನಾಟಕಗಳ ಸುತ್ತಲೇ ಗಿರಕಿ ಹೊಡೆಯುತ್ತಿದ್ದ ಕನ್ನಡ ರಂಗಭೂಮಿಗೆ ನಿಜವಾದ ಆಧುನಿಕ ರಂಗಪ್ರಜ್ಞೆಯನ್ನು ಪ್ರದಾನ ಮಾಡಿದವರು ಕಾರ್ನಾಡರೇ ಎಂದು ಹೇಳಬೇಕು. ಲಂಕೇಶ್ ಮತ್ತು ಚಂಪಾ ಅವರ ಕಿರು ಅಸಂಗತ ನಾಟಕಗಳು ಎಂದೂ ಕನ್ನಡ ರಂಗಭೂಮಿಯ ಸೊಗಡಿನ ಭಾಗವಾಗಲಿಲ್ಲ ಎಂಬುದನ್ನು ಗಮನಿಸಿ ಈ ಮಾತು ಹೇಳುತ್ತಿರುವೆ.

ಕಾರ್ನಾಡರು ಹತ್ತು–ಹನ್ನೆರಡು ನಾಟಕಗಳನ್ನು ಬರೆದಿರುವರಾದರೂ ಅವರ ನಿಜ ನಾಟಕಗಳು ನನ್ನ ಪ್ರಕಾರ ಮೂರೇ ಮೂರು: 'ಯಯಾತಿ', 'ತುಘಲಕ್' ಮತ್ತು 'ತಲೆದಂಡ'. ಮಿಕ್ಕವು ವಿವಿಧ ಖಯಾಲಿಗಳಿಗೆ ಬರೆದ ನಾಟಕಗಳೆಂದೇ ನಾನು ಭಾವಿಸಿದ್ದೇನೆ. ಚಂದ್ರಶೇಖರ ಕಂಬಾರ ಮತ್ತು ಎಚ್.ಎಸ್ ಶಿವಪ್ರಕಾಶರ ನಾಟಕಗಳೂ ಈ ಸಾಲಿಗೇ ಸೇರಿದವು. ಕಂಬಾರರ ನಾಟಕಗಳಲ್ಲಿ ಕವಿ ಮೇಲುಗೈ ಸಾಧಿಸಿ ನಾಟಕ ತನ್ನ ದೃಷ್ಟಿಕೇಂದ್ರವನ್ನು ಕಳೆದುಕೊಂಡು ಹಿನ್ನೆಲೆಗೆ ಸರಿದರೆ, ಶಿವಪ್ರಕಾಶರ ನಾಟಕಗಳಲ್ಲಿ 'ಪ್ರಗತಿಶೀಲತೆ'ಯ ಕ್ಲೀಷೆಯಾದ ರಾಜಕೀಯ ನುಡಿಗಟ್ಟಿನಲ್ಲಿ ಮೆರೆದಾಡಿ ನೋಡುಗರನ್ನು ಸುಸ್ತು ಮಾಡುತ್ತದೆ. ಕಾರ್ನಾಡರ ಈ ಮೂರು ನಿಜ ನಾಟಕಗಳಿಗೆ, ಅವುಗಳ ನಾಟಕ ಗುಣಗಳಿಗೆ, ಸವಾಲೊಡ್ಡುವ ಕನ್ನಡದ ಏಕೈಕ ನಾಟಕವೆಂದರೆ ಲಂಕೇಶರ 'ಗುಣಮುಖ'. ಇನ್ನು ಇವುಗಳ ಹತ್ತಿರ ಬರಬಲ್ಲವುವೆಂದರೆ, ಜಡಭರತರ 'ಕದಡಿದ ನೀರು' ಮತ್ತು ಬಹಳ ಜನ ಏಕೋ ಮರೆತೇಬಿಟ್ಟಿರುವ ಕಿ.ರಂ. ನಾಗರಾಜರ 'ಕಾಲಜ್ಞಾನಿ ಕನಕ'. ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರ' ಇವೆಲ್ಲವುಗಳಿಗಿಂತ ಹೆಚ್ಚು ದಾರ್ಶನಿಕವಾಗಿದೆಯಾದರೂ ಅದರ ರಂಗಪ್ರಜ್ಞೆ ತುಂಬ ದುರ್ಬಲ. ಈ ದೃಷ್ಟಿಯಿಂದ ಕಾರ್ನಾಡರು ಕನ್ನಡಿಗರು ಬಹುಕಾಲ ನೆನಪಿಟ್ಟುಕೊಳ್ಳಬಯಸುವಂಥ ನಾಟಕಕಾರರೇ ಸರಿ.

ಕಾರ್ನಾಡರು ನಾಟಕಕಾರರಷ್ಟೇ ಅಲ್ಲ, ರಂಗಭೂಮಿ ಮತ್ತು ಚಲನಚಿತ್ರ ನಟರೂ, ನಿರ್ದೇಶಕರೂ ಆಗಿದ್ದರು. ಅವು ಅವರ ವ್ಯಕ್ತಿತ್ವಕ್ಕೆ ವಿಶಿಷ್ಟ ವಿಸ್ತರಣೆಗಳನ್ನೂ ಒದಗಿಸಿದವು. ಆದರೆ 'ಸಂಸ್ಕಾರ' ಮತ್ತು ಇತರ (ಕನ್ನಡ ಹಾಗೂ ಕನ್ನಡೇತರ) ಚಿತ್ರಗಳಲ್ಲಿನ ಅವರ ಅಭಿನಯದಲ್ಲಾಗಲೀ, 'ಕಾಡು' ಹೊರತಾಗಿ ಇತರ ಚಿತ್ರಗಳ ನಿರ್ದೇಶನದಲ್ಲಾಗಲೀ ಅಂತಹ ವಿಶೇಷವೇನೂ ಇರಲಿಲ್ಲ. 'ಕಾಡು'ಗೆ ಕಥೆಯದ್ದೇ ಆದ ವಿಶೇಷ ಶಕ್ತಿ ಇತ್ತು.

ಆದರೂ ಕಾರ್ನಾಡರ ನಿಧನದ ಸಂದರ್ಭದಲ್ಲಿ ಅವರಿಗೆ ಸಿಕ್ಕ ಮಾಧ್ಯಮ ಪ್ರಚಾರ ನಿಜವಾಗಿಯೂ ದಂಗುಬಡಿಸುವಂಥದ್ದು. ಈ ದೃಷ್ಟಿಯಿಂದ ಕನ್ನಡ ಸಂವೇದನೆಗೆ ಕಾರ್ನಾಡರು ನೀಡಿರುವ ಕೊಡುಗೆಯನ್ನು ಇತರ ಕನ್ನಡ ಲೇಖಕರ ಕೊಡುಗೆಯೊಂದಿಗೆ ಹೋಲಿಸುವ ಮನಸ್ಸಾಗುತ್ತದೆ. ಖಂಡಿತ ಅವರು ಕುವೆಂಪು, ಬೇಂದ್ರೆ, ಮಾಸ್ತಿ ಕಾರಂತರಿಗಿಂತ ಯಾವುದೇ ರೀತಿಯಲ್ಲೂ ದೊಡ್ಡವರಲ್ಲ. ಹಾಗೆ ನೋಡಿದರೆ ಲಂಕೇಶ್, ತೇಜಸ್ವಿ ಮತ್ತು ಅನಂತಮೂರ್ತಿಯವರಿಗಿಂತಲೂ ದೊಡ್ಡವರಲ್ಲ. ಮೊದಲಾಗಿ ಅವರು ಕನ್ನಡ ಸಂವೇದನೆಯ ಅವಿಭಾಜ್ಯ ಅಥವಾ ಸಾವಯವ ಅಂಗವಾಗಿದ್ದರೆ? ಎಂಬ ಪ್ರಶ್ನೆಯನ್ನೂ ಕೇಳುವಷ್ಟು ಅವರು, ತಮ್ಮ ನಿವೃತ್ತ ಜೀವನದ ಕೊನೆಯ ಕೆಲ ವರ್ಷಗಳ ಹೊರತಾಗಿ, ಕನ್ನಡ ಸಮಾಜದ ಪರಿಧಿಯಲ್ಲೇ ಇದ್ದವರು.

ಅವರು ತಮ್ಮ ಅತ್ಯುತ್ತಮ ನಾಟಕಗಳನ್ನಾದರೂ ಕನ್ನಡದ ಹೊಕ್ಕುಳಿಂದ ಬರೆದರು ಎಂದು ಯಾರೂ ಹೇಳಲಾರರು. ಅವರು ಕನ್ನಡದಲ್ಲಿ ಬರೆದದ್ದು ಸಹಜವಾಗಲ್ಲ; ಅನಿವಾರ್ಯವಾಗಿ. ಅದೇನೂ ಒಬ್ಬ ಲೇಖಕನ ಅವಗುಣ ಆಗಲಾರದು, ನಿಜ. ಆದರೆ ಕನ್ನಡದ ಮತ್ತು ಇಂಗ್ಲಿಷ್‌ನ ಒಂದೆರಡು ಪತ್ರಿಕೆಗಳು ಇವರ ಸಾವನ್ನು 'ಆಚರಿಸಿ'ದ ರೀತಿ ನೋಡಿದಾಗ ಈ ಪ್ರಶ್ನೆಯನ್ನು ಕೇಳಬೇಕೆನಿಸುತ್ತದೆ. ನಮ್ಮ ಮಾಧ್ಯಮಗಳು ಜನಸಮೂಹದ ಸಂವೇದನೆಯಿಂದ ಎಷ್ಟು ದೂರವಾಗಿ 'ಪ್ರತಿಷ್ಠಿತೆ'ಗೊಂಡಿವೆ ಎಂದರೆ ಅವುಗಳಿಗೆ ಅವುಗಳದ್ದೇ ಆದ ಆಯ್ಕೆ ಮತ್ತು ಖಯಾಲಿಗಳು!

ಇದಕ್ಕೆ ಕಾರಣ, ಇಂದು ಭಾರತದಲ್ಲಿ ಪ್ರಾದೇಶಿಕತೆಯನ್ನು ಮುಳುಗಿಸಿರುವ ರಾಷ್ಟ್ರೀಯತೆಯ ಮರುಳಿಗೆ ನಮ್ಮ ಮಾಧ್ಯಮಗಳೂ, ಒಳಗಾಗಿರುವುದು. ಈ ದೃಷ್ಟಿಯಿಂದ ನೋಡಿದಾಗ ಕಾರ್ನಾಡರದ್ದು ಒಂದು ರಾಷ್ಟ್ರೀಯ ಮಟ್ಟದ ವ್ಯಕ್ತಿತ್ವ. ಅವರು ಆಧುನಿಕ ಕನ್ನಡ ನಾಟಕಕ್ಕೆ ಇನ್ನೊಂದು ಹೆಸರು, ನಿಜ. ಆದರೆ ಅದಕ್ಕಿಂತ ದೊಡ್ಡದಾಗಿ ಅವರು ಆಧುನಿಕ ಭಾರತೀಯ ನಾಟಕಗಳಿಗೂ ಇನ್ನೊಂದು ಹೆಸರಾಗಿದ್ದರು– ಅವರಿಗಿಂತ ಹಿರಿಯರಾದ ಮತ್ತು ಅಷ್ಟೇ ಸಮರ್ಥರಾದ ಮೋಹನ ರಾಕೇಶ್, ಧರ್ಮವೀರ ಭಾರತಿ, ಬಾದಲ್ ಸರ್ಕಾರ್, ವಿಜಯ ತೆಂಡಲ್ಕೂರ್ ಮುಂತಾದ ಸಮಕಾಲೀನರನ್ನು ಮೀರಿ. ಇದಕ್ಕೆ ಕಾರಣ, ಕಾರ್ನಾಡರಿಗೆ ಕನ್ನಡದಲ್ಲಿ ಬರೆಯುವುದು ತಾಂತ್ರಿಕ ಅಗತ್ಯವಾಗಿತ್ತೇ ಹೊರತು ಭಾವನಾತ್ಮಕ ಅಗತ್ಯವಾಗಿರಲಿಲ್ಲ. ಹಾಗಾಗಿಯೇ ಅವರು ತಮ್ಮ ನಾಟಕಗಳನ್ನು ತಾವು ಕನ್ನಡದಲ್ಲಿ ಬರೆದ ನಂತರ ತೃಪ್ತರಾಗದೆ ಕೂಡಲೇ ಅವುಗಳನ್ನು ತಾವೇ ಇಂಗ್ಲಿಷ್‌ಗೆ ಅನುವಾದಿಸುತ್ತಿದ್ದರು. ನಂತರ ಹಿಂದಿಗೂ ಅನುವಾದ ಮಾಡಿಸುತ್ತಿದ್ದರು. ನಂತರ ಅವುಗಳ ರಂಗ ಪ್ರಯೋಗಗಳೂ ನಡೆಯುತ್ತಿದ್ದವು. ಅವರ ಸಂಪರ್ಕಗಳು ಹಾಗಿದ್ದವು. ಅವರಲ್ಲಿದ್ದ ನಾಟಕಕಾರನ ಅಂತಿಮ ಸಾರ್ಥಕತೆ ಅಲ್ಲಿತ್ತು. ನಮ್ಮ ಮಾಧ್ಯಮಗಳ ಸಾರ್ಥಕತೆಯೂ ಅಲ್ಲಿಯೇ ಇದ್ದಂತಿದೆ.

ಜೊತೆಗೆ ಅವರ ಬಹುತೇಕ ನಾಟಕಗಳ ಚಲನಾತ್ಮಕತೆ ನಮ್ಮ ಪುರಾಣ ಮತ್ತು ಇತಿಹಾಸಗಳಲ್ಲಿರುತ್ತಿದ್ದು, ಅದರಿಂದಾಗಿ ಅವಕ್ಕೊಂದು ಅಖಿಲ ಭಾರತ ಬೆಡಗೂ ಒದಗುತ್ತಿತ್ತು. 'ತಲೆದಂಡ'ದಂತಹ ಅಚ್ಚ ಕನ್ನಡ ನಾಟಕದಲ್ಲೂ, ಎಚ್.ಎಸ್. ಶಿವಪ್ರಕಾಶರು ಇತ್ತೀಚಿನ ತಮ್ಮ ಒಂದು ಲೇಖನದಲ್ಲಿ ಗುರುತಿಸಿದಂತೆ ಬಸವಣ್ಣನಂತಹ ಬಸವಣ್ಣ ನಿರ್ಣಾಯಕ ಕ್ಷಣದಲ್ಲಿ ಉಲ್ಲೇಖಿಸುವುದು ಶಂಕರಾಚಾರ್ಯರನ್ನು! ಇದೇ ಲೇಖನದಲ್ಲಿ ಅವರು ಪ್ರಸ್ತಾಪಿಸುವ ಇನ್ನೊಂದು ವಿಷಯವೆಂದರೆ ಕಾರ್ನಾಡರ ನಾಟಕಗಳು ಪುರಾಣ–ಇತಿಹಾಸಗಳ ಒಡಲಲ್ಲೇ ಹುಟ್ಟಿದ್ದರೂ ಅವುಗಳ ಅಂತಿಮ ಸಾರ್ಥಕತೆ ಇರುವುದು ಸಮಕಾಲೀನ ರಾಜಕಾರಣದ ಮೇಲೆ ಕ್ಷ–ಕಿರಣ ಬೀರುವುದು ಎಂಬ ವಿಮರ್ಶೆಯ ಮಾತಿನ ಬಗ್ಗೆ ಮಾಡಿರುವ ಟೀಕೆ. ಕಾರ್ನಾಡರು ತಮ್ಮ ಮುಖ್ಯ ರಾಜಕೀಯ ನಾಟಕಗಳಾದ 'ತುಘಲಕ್'ನಲ್ಲಾಗಲೀ, 'ತಲೆದಂಡ'ದಲ್ಲಾಗಲೀ ತಾವು ತೀವ್ರತೆಯಿಂದ ಕಟ್ಟುತ್ತಾ ಹೋಗುವ ನಾಟಕೀಯತೆಯನ್ನು ಉತ್ತುಂಗಕ್ಕೊಯ್ದು ಧೊಪ್ಪನೆ ಬೀಳಿಸುವುದು ಬದುಕಿನ ದಿಕ್ಕೆಟ್ಟ ಸ್ಥಿತಿಗೆ. ಇದು ನಾಟಕಕಾರನ ದಿಕ್ಕೆಟ್ಟ–ದರ್ಶನರಹಿತ–ಸ್ಥಿತಿಯೂ ಹೌದು. ಈ ಟೀಕೆ ನಾಟಕ ಮೀಮಾಂಸೆಯ ಹಿನ್ನೆಲೆಯಲ್ಲಿ ಇನ್ನಷ್ಟು ವಿವರವಾಗಿ ಚರ್ಚಿತವಾಗಬೇಕಾದರೂ ಶಿವಪ್ರಕಾಶರ ಮಾತನ್ನು ಸುಲಭಕ್ಕೆ ತಳ್ಳಿ ಹಾಕುವಂತಿಲ್ಲ.

ಇನ್ನು ಕಾರ್ನಾಡರ ರಾಜಕೀಯ ನಿಲುವುಗಳ ಬಗ್ಗೆ. ನಮ್ಮ ಎಡಪಂಥೀಯರಂತೂ ಇವರ 'ಪ್ರಗತಿಶೀಲತೆ'ಯ ಕುರಿತು ಹುಚ್ಚೆದ್ದು ಕುಣಿಯುತ್ತಿದ್ದಾರೆ. ಇವರು ಗೌರಿ ಲಂಕೇಶ್ ಮತ್ತು ಕಾರ್ನಾಡರನ್ನು ಮುಂದಿಟ್ಟುಕೊಂಡು ತಮ್ಮ ರಾಜಕೀಯ ರಥವನ್ನು ಮುನ್ನಡಿಸಿದ್ದೇ ಮೋದಿ ದಿಗ್ವಿಜಯಕ್ಕೆ ಒಂದು ಮುಖ್ಯ ಕಾರಣವಾಗಿದೆ ಎಂಬುದನ್ನು ಅವರು ಆದಷ್ಟು ಬೇಗ ಅರ್ಥ ಮಾಡಿಕೊಂಡರೆ ಒಳ್ಳೆಯದು. ಅನಂತಮೂರ್ತಿಯವರಾಗಲೀ, ಕಾರ್ನಾಡರಾಗಲೀ ಮೋದಿ ಪ್ರಣೀತ ಹಿಂದೂವಾದಿ ರಾಜಕಾರಣದ ವಿರುದ್ಧ ಬಾಯಿಬಿಡತೊಡಗಿದ್ದು ಯಾವಾಗ, ಸ್ವಲ್ಪ ನೆನಪಿಸಿಕೊಂಡರೆ ಒಳ್ಳೆಯದು. ಹಿಂದೂವಾದಿ ರಾಜಕಾರಣದ ಪ್ರಯೋಗ ಆರಂಭವಾದ ೨೦೦೨ರ ಗುಜರಾತ್ ಹತ್ಯಾಕಾಂಡವಾದಾಗ ಇವರೇನು ಮಾಡುತ್ತಿದ್ದರು? ಇವರು ಹೇಳಲಿ. ಇವರಿಬ್ಬರೂ ಹಿಂದೂವಾದಿ ರಾಜಕಾರಣದ ಅನಾಹುತಗಳ ಬಗ್ಗೆ ಮಾತಾಡತೊಡಗಿದ್ದು ಇವರು ವ್ಯವಸ್ಥೆಯಿಂದ ಪಡೆಯಬೇಕಾದ್ದನ್ನೆಲ್ಲ ನಿಶ್ಚಿಂತೆಯಿಂದ ಪಡೆದು ತಮ್ಮೆಲ್ಲ ಕಸುಬುದಾರಿಕೆಯಿಂದ ನಿವೃತ್ತಿ ಹೊಂದಿದ ನಂತರವಷ್ಟೇ. ಕಾರ್ನಾಡರು ಭೈರಪ್ಪನವರ 'ವಂಶವೃಕ್ಷ' ಮತ್ತು 'ತಬ್ಬಲಿಯು ನೀನಾದೆ ಮಗನೆ' ಸಿನಿಮಾ ಮಾಡುವಾಗ ಇವರ 'ಪ್ರಗತಿಶೀಲತೆ' ಎಲ್ಲಿ ಅಡಗಿಕೊಂಡಿತ್ತು? ಆಯಿತು, ನಂತರವಾದರೂ ಇಷ್ಟು ಮಾಡಿದರಲ್ಲ ಎಂದು ಅವರನ್ನು ಮೆಚ್ಚೋಣ. ಆದರೆ ಅವರನ್ನು ಅದಕ್ಕಾಗಿ ದೊಡ್ಡ ಹೀರೋಗಳನ್ನಾಗಿ ಮಾಡುವುದು ಬೇಡ. ಅದು ಜನಸಾಮಾನ್ಯರನ್ನು ಇನ್ನಷ್ಟು ರೇಗಿಸುತ್ತದೆ. ಕಾರ್ನಾಡರು ಜ್ಞಾನಪೀಠ ಪ್ರಶಸ್ತಿ ಬಂದಾಗ ಯಾವುದೇ ಸನ್ಮಾನವನ್ನು ಒಪ್ಪಿಕೊಳ್ಳದಿದ್ದುದು ಅವರು ಖಾಸಗಿತನವನ್ನು ಎಷ್ಟು ಪ್ರೀತಿಸುತ್ತಿದ್ದರು ಎಂಬುದರ ದ್ಯೋತಕವಂತೆ. ತಮ್ಮ ಇಡೀ ಜೀವನವನ್ನು ಹಲವು ಖ್ಯಾತಿಗಳ ಉಜ್ವಲ ಬೆಳಕಿನಲ್ಲೇ ಕಳೆದ ಅವರಿಗೆ ಕನ್ನಡಿಗರು ಮಾಡಬಹುದಿದ್ದ ಸನ್ಮಾನ ಯಾವ ಲೆಕ್ಕಕ್ಕೆ?

ಈ ಸಂದರ್ಭದಲ್ಲಿ ನಾನು ಎಲ್ಲೋ ಓದಿದ 'ಟಿಕ್ ಟಿಕ್ ಗೆಳೆಯ ಡಿಕ್ ಟಿಕ್ ಟಿಕ್' ಎಂಬ ಶಿಶುಗೀತೆಗೆ ಕಾರ್ನಾಡರು ಬರೆದಿದ್ದ ವಿಡಂಬನಾತ್ಮಕ ಪ್ರಾಯೋಗಿಕ ವಿಮರ್ಶೆ ನೆನಪಿಗೆ ಬರುತ್ತಿದೆ. ಬಹುಶಃ ಅವರ ಅಭಿಮಾನಿಗಳು ಅವರನ್ನು ಕುರಿತು ಮಾಡುತ್ತಿರುವುದೂ ಅವರು ವಿಡಂಬಿಸಿದಂತಹ ಪ್ರಾಯೋಗಿಕ ವಿಮರ್ಶೆಯನ್ನೇ ಇರಬಹುದು. ಕಾರ್ನಾಡರನ್ನು ಅವರ ಪಾಡಿಗೆ ಬಿಡೋಣ. ಎಲ್ಲರಂತೆ ಅವರು ಕಾಲನ ಪರೀಕ್ಷೆಯಲ್ಲಿ ಉಳಿಯಬಲ್ಲಷ್ಟು ಮಾತ್ರವೇ ಉಳಿಯುವರು.

**–ಡಿ.ಎಸ್. ನಾಗಭೂಷಣ**

**ಧರ್ಮವಿಚಾರ ಪುಟ**

# ರಾಮಾನುಜರ ವಿಶಿಷ್ಟಾದ್ವೈತ ವಿಚಾರಗಳು



**ಕ್ರಿಸ್ತಶಕ ೧೧ನೇ ಶತಮಾನದ ಆರಂಭದಲ್ಲಿ ತಮಿಳ್ನಾಡಿನ ಪೆರಂಬದೂರಿನ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ಶ್ರೀರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ಸಿದ್ಧಾಂತದ ಮೂಲಕ ಶ್ರೀವೈಷ್ಣವ ಪಂಥದ ಪ್ರವರ್ತಕರಾದವರು. ಬಾಲ್ಯದಿಂದಲೂ ನೆರೆಹೊರೆಯ ಕೆಳಜಾತಿಗಳ ಜನರೊಂದಿಗೆ ಬೆರೆಯತೊಡಗಿದ್ದ ರಾಮಾನುಜರು, ಆ ಜನರಲ್ಲಿದ್ದ ಅಧ್ಯಾತ್ಮಿಕ ಜ್ಞಾನವನ್ನು ಕಂಡು ಬೆರಗಾಗಿ ಸಮುದಾಯದ ಕಂಚಿಪೂರ್ಣ ಎಂಬ ವಿಷ್ಣು ಭಕ್ತನನ್ನು ತನ್ನ ಗುರುವನ್ನಾಗಿ ಸ್ವೀಕರಿಸಿದ್ದರು. ನಂತರ ವಿಧ್ಯುಕ್ತ ವೈದಿಕ ಶಿಕ್ಷಣದ ಗುರುಗಳಾದ ಯಾದವಪ್ರಕಾಶರು, ರಾಮಾನುಜರು ಶಂಕರರ ಅದ್ವೈತ ತತ್ವವನ್ನು ನಿಷ್ಠುರ ವಿಮರ್ಶೆಗೊಳಪಡಿಸಿ ವಾದ ಮಾಡತೊಡಗಿದಾಗ ಅವರನ್ನು ಕೊಲ್ಲಿಸುವ ಸಂಚು ಹೂಡಲಾಗಿ, ಅದು ಗೊತ್ತಾಗಿ ಅವರು ತಲೆ ತಪ್ಪಿಸಿಕೊಂಡು ದೇಶಾಂತರ ಹೋಗಬೇಕಾಯಿತು. ಆಗ ಅವರಿಗೆ ವಿವಿಧ ಜಾತಿಗಳ, ಪಂಥಗಳ ಜನರ ಒಡನಾಟ ಒದಗಿ ಬಂದು ಅವರು 'ಉಭಯ ವೇದಾಂತಿ'ಗಳೆನಿಸಿಕೊಂಡರು ಎಂದು ಹೇಳಲಾಗುತ್ತದೆ.**

**ದೇಶಾಂತರದಿಂದ ವಾಪಸು ಬಂದು ಕಂಚಿಪೂರ್ಣರ ಸೂಚನೆಯಂತೆ ವಿಶಿಷ್ಟಾದ್ವೈತ ತತ್ವದ ಹೊಳಹು ಕಂಡು ಅದನ್ನಿನ್ನೂ ಒಂದು ಸ್ವಯಂಪೂರ್ಣ ಸಿದ್ಧಾಂತವಾಗಿ ಮಂಡಿಸಲಾಗದಿದ್ದ ಯಾಮುನಾಚಾರ್ಯರನ್ನು ಕಾಣಲು ಶ್ರೀರಂಗಕ್ಕೆ ಹೋದರು. ಆದರೆ ಆ ಹೊತ್ತಿಗೆ ಯಾಮುನಾಚಾರ್ಯರು ಗತಿಸಿಹೋಗಿದ್ದುದರಿಂದ ಅಲ್ಲಿಯೇ ನೆಲೆಸಿ ವ್ಯಾಸರ ಬ್ರಹ್ಮ ಸೂತ್ರಕ್ಕೆ ವಿಶಿಷ್ಟಾದ್ವೈತದ ಭಾಷ್ಯ ಬರೆದು ಯಮುನಾಚಾರ್ಯರ ಕೆಲಸವನ್ನು ಪೂರ್ಣಗೊಳಿಸಿದರು. ಇದಕ್ಕಾಗಿ ಪತ್ನಿಯನ್ನು ತ್ಯಜಿಸಿ ಸಂನ್ಯಾಸ ಸ್ವೀಕರಿಸಿದರು.**

**ಚೋಳರಾಜ ಶಿವಭಕ್ತನಾಗಿ ವಿಷ್ಣುಭಕ್ತರಿಗೆ ಕಿರುಕುಳ ಕೊಡಲಾರಂಭಿಸಿದಾಗ ಕರ್ನಾಟಕಕ್ಕೆ ಬಂದ ರಾಮಾನುಜಾಚಾರ್ಯರು ಮೈಸೂರು ಮಂಡ್ಯ-ತುಮಕೂರು-ಹಾಸನ ಸುತ್ತಮುತ್ತಲ ಸ್ಥಳಗಳಲ್ಲಿ ಯಾತ್ರೆ ಕೈಗೊಂಡು ವಿಶಿಷ್ಟಾದ್ವೈತ ಪಂಥವನ್ನು ಹರಡಿದರು. ಅನೇಕ ಜೈನರಿಗೆ, ಶೂದ್ರರಿಗೆ, ಅಸ್ಪೃಶ್ಯರಿಗೆ ವೈಷ್ಣವ ದೀಕ್ಷೆ ನೀಡಿದರು.**

*** *** ***

'ಬ್ರಹ್ಮ ಸತ್ಯ ಜಗನ್ಮಿಥ್ಯ' ಎಂಬುದು ಅದ್ವೈತ ತತ್ವ. ಆದರೆ ಜಗತ್ತೂ ಸತ್ಯ ಎಂದು ವಿಶಿಷ್ಟಾದ್ವೈತ ಪ್ರತಿಪಾದಿಸುತ್ತದೆ. ಎಲ್ಲ ವಿದ್ಯಮಾನಗಳೂ ನಮ್ಮ ಗ್ರಹಿಕೆಗೆ, ಅನುಭವಕ್ಕೆ ಒದಗುವುದು ಅದರ ಗುಣವಿಶೇಷಗಳ ಮೂಲಕವೇ ಆದ್ದರಿಂದ ಅದ್ವೈತವು ವಿಶಿಷ್ಟಾದ್ವೈತವಾಗಿ ಪರಿಷ್ಕಾರಗೊಳ್ಳುವುದು ಎನ್ನುತ್ತಾರೆ ರಾಮಾನುಜರು.

ಇಂದ್ರಿಯಗಳ ಮೂಲಕ ಗ್ರಹಿಸಲ್ಪಡುವ ಎಲ್ಲ ವಿದ್ಯಮಾನಗಳೂ ಅಸತ್ಯ ಮತ್ತು ಅಶಾಶ್ವತ ಎಂದು ಶಂಕರರ ಅದ್ವೈತ ಹೇಳುತ್ತದೆ. ಆದರೆ ರಾಮಾನುಜರು ಅವು ಬ್ರಹ್ಮದಂತೆ ಸತ್ಯವಷ್ಟೇ ಅಲ್ಲ, ಶಾಶ್ವತವೂ ಎಂದು ಪ್ರತಿಪಾದಿಸಿದರು. ಆದರೆ ಅವೆಲ್ಲ ಬ್ರಹ್ಮವಸ್ತುವಿನ ನಿಯಂತ್ರಣದಲ್ಲಿರುತ್ತವೆ ಎಂದು ವಿವರಿಸಿದರು. ಹಲವು ರೂಪಗಳಿರಬಹುದು, ಆದರೆ ದೇವರು ಒಬ್ಬನೇ ಹೌದು; ಏಕೆಂದರೆ ಅವನಿಲ್ಲದೆ ಅವು ಇರಲಾರವು. ಅವಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಅವೆಲ್ಲ ಬ್ರಹ್ಮ ವಸ್ತುವಿನ ಪ್ರಕಾರಗಳು, ಶೇಷಗಳು ಅಥವಾ ನಿಯಮ ರೂಪಗಳು.

ರಾಮಾನುಜರ ಸಿದ್ಧಾಂತದ ಪ್ರಕಾರ, ಅವರು ನಾರಾಯಣನೆಂದು ಕರೆದಿರುವ ಪರವಸ್ತು ಅಥವಾ ಭಗವಂತನಿಗೆ ಎರಡು ಪ್ರಕಾರಗಳಿವೆ: ಒಂದು (ಜಡ)ಜಗತ್ತು, ಇನ್ನೊಂದು ಜೀವಾತ್ಮಗಳು. ಇವುಗಳ ಸಂಬಂಧ, ದೇಹ ಮತ್ತು ಆತ್ಮಗಳ ಸಂಬಂಧವಿದ್ದಂತೆ. ಜಡವಸ್ತು ಮತ್ತು ಜೀವಗಳು ಸೇರಿದರೆ ಭಗವಂತ ಅಥವಾ ಪರವಸ್ತು. ಅದೇ ಅಥವಾ ಆತನೆ ಜಡ ಮತ್ತು ಜೀವಗಳೆರಡರ ನಿಯಂತ್ರಕ. ಜಡ ಜಗತ್ತು ಮತ್ತು ಜೀವ ಅವನ/ಅದರ ವಿಶೇಷಣಗಳು. ಅದು/ಆತ ವಿಶೇಷ್ಯ.

ರಾಮಾನುಜರ ಪ್ರಕಾರ ಜ್ಞಾನ ಮತ್ತು ಆಚರಣೆ ಇಲ್ಲದೆಯೂ ಉಪನಿಷತ್ತುಗಳ ಅಧ್ಯಯನದಿಂದ ಬ್ರಹ್ಮಜ್ಞಾನ ಉಂಟಾಗಬಹುದು ಎಂಬ ಅದ್ವೈತದ ವಾದ ತಪ್ಪು. ಅವರ ಪ್ರಕಾರ ಆಧ್ಯಾತ್ಮಿಕ ಅಜ್ಞಾನವನ್ನು ತೊಡೆದುಹಾಕುವ ಬ್ರಹ್ಮಜ್ಞಾನ ಶಾಬ್ದಿಕ ಸ್ವರೂಪದ್ದಾಗಿರದು. ಅದು ಧ್ಯಾನಸ್ಥವಾದದ್ದು. ಭಕ್ತಿ ಉದ್ದೀಪಕವಾದದ್ದು.

ವಿಶೇಷಣಗಳಿಲ್ಲದ ಬ್ರಹ್ಮವಸ್ತುವಿರಬಲ್ಲದೆಂಬ ಅದ್ವೈತಿಗಳ ಗ್ರಹಿಕೆಗೆ ಬೆಂಬಲವಾದ ಯಾವ ಜ್ಞಾನ ಮೂಲಗಳೂ ಇಲ್ಲ ಎನ್ನುವ ರಾಮಾನುಜರು, ಎಲ್ಲ ವಸ್ತುಗಳೂ ಇನ್ನೊಂದರಿಂದ ಭಿನ್ನವಾಗಿರುವ ಮೂಲಕವೇ ನಮ್ಮ ಗ್ರಹಿಕೆಗೆ ಸಿಗುವುದು ಎನ್ನುತ್ತಾರೆ. ಪ್ರತಿ ವಸ್ತುವೂ ಅಸ್ತಿತ್ವದಾಚೆಯ ಅವುಗಳ ಗುಣಗಳಿಂದಲೇ ನಮ್ಮ ಅನುಭವಕ್ಕೆ ಒದಗುವುದು. ಯಾವುದೇ ವಸ್ತುವಿನ (ಶಾಬ್ದಿಕ) ಸಾಕ್ಷ್ಯ ವ್ಯಕ್ತವಾಗುವುದೂ ಅದರ ಗುಣಗಳ ಕ್ರಿಯಾಶೀಲತೆಯಿಂದಲೇ. ಆದ್ದರಿಂದ ಗುಣವಿಶೇಷಗಳಿಲ್ಲದ ಅಸ್ತಿತ್ವವೊಂದಿದೆ ಎಂಬ ಅದ್ವೈತ ಸಿದ್ಧಾಂತವೇ ತಪ್ಪು ಎಂದು ತೀರ್ಮಾನಿಸುತ್ತಾರೆ ರಾಮಾನುಜರು.

ರಾಮಾನುಜರು ಜಗತ್ತಿನಲ್ಲಿನ ಜೀವಾತ್ಮಗಳ ವಿಶೇಷಗಳನ್ನು, ಅವುಗಳ ಸಂಭ್ರಮವನ್ನು ನಿರಾಕರಿಸಲು ಕಾರಣವಿಲ್ಲ ಎಂದರು. ಲೋಕ ರುಚಿಯ ಮೂಲಕವೇ ಲೋಕಮೂಲದ ಗುರುತು ಮತ್ತು ಗೌರವಗಳು ಆಚರಿಸಲ್ಪಡಬೇಕೆಂದರು. ಹಾಗಾಗಿಯೇ ಶ್ರೀವೈಷ್ಣವ ಪಂಥದಲ್ಲಿ ಹಾಡು-ಹೂವು-ಗಂಧ-ನೃತ್ಯ-ಭಕ್ಷ್ಯ-ಭೋಜ್ಯಗಳ ರಸ ಸಂಭ್ರಮ!

**-ಡಿಎಸ್ಸೆನ್** (ಸಾಧಾರ)

## ಧಾರ್ಮಿಕ ಬಂಡಾಯಗಾರ ರಾಮಾನುಜ

ರಾಮಾನುಜ ದಿನವೂ ಶ್ರೀರಂಗಂನ ಕಾವೇರಿಯಲ್ಲಿ ಸ್ನಾನಕ್ಕೆ ಹೋಗುವ ಮೊದಲು ಬ್ರಾಹ್ಮಣ ಶಿಷ್ಯರ ಹೆಗಲ ಮೇಲೆ ಕೈ ಹಾಕಿಕೊಂಡು ಹೋಗುತ್ತಿದ್ದ. ಸ್ನಾನದ ನಂತರ ದಲಿತ ಶಿಷ್ಯ ಧರ್ನುದಾಸನ ಹೆಗಲ ಮೇಲೆ ಕೈಹಾಕಿಕೊಂಡು ದೇವಸ್ಥಾನಕ್ಕೆ ಬರುತ್ತಿದ್ದ. ಈತ ಸ್ವಾಮಿಯಾಗುವ ಮೊದಲು ತಿರುಕೋಟ್ಟಿಯೂರ್‌ನಲ್ಲಿನ ಗೋಷ್ಠಿಪೂರ್ಣ ಎಂಬ ಗುರುವಿನ ಬಳಿ ಮುಕ್ತಿಮಾರ್ಗದ ಮಂತ್ರ ಕಲಿಯಲು ಹೋಗುತ್ತಾನೆ. ೧೮ ಬಾರಿ ಪ್ರಯತ್ನಿಸಿದರೂ ಆ ಗುರು ಮಂತ್ರ ಹೇಳಿಕೊಡಲು ನಿರಾಕರಿಸುತ್ತಾನೆ. ಕೊನೆಗೆ ೧೯ನೇ ಬಾರಿ ಬೇರಾರಿಗೂ ಹೇಳಿಕೊಡಬಾರದೆಂಬ ಷರತ್ತು ಹಾಕಿ ಅದನ್ನು ಗುಟ್ಟಾಗಿ ಕಿವಿಯಲ್ಲಿ ಬೋಧಿಸುತ್ತಾನೆ.

ಆಚೆ ಬಂದ ರಾಮಾನುಜ ದೇವಸ್ಥಾನದ ಗೋಪುರವೇರಿ ಊರಿನ ಸಮಸ್ತರನ್ನೂ ಕೂಗಿ ಕರೆದು ತನ್ನ ಗುರು ಬೋಧಿಸಿದ ಮುಕ್ತಿಮಾರ್ಗ ಮಂತ್ರವನ್ನು ಜೋರಾಗಿ ಹೇಳುತ್ತಾ ಎಲ್ಲರೂ ಅದನ್ನು ಪಠಿಸುವಂತೆ ಸೂಚಿಸುತ್ತಾನೆ. ಆ ಮಂತ್ರ, 'ಓಂ ನಮೋ ನಾರಾಯಣ!'. ಇದರಿಂದ ಅವನ ಗುರು ಕುಪಿತಗೊಂಡಾಗ ರಾಮಾನುಜ ನಿನಗೆ ನರಕವೇ ಗತಿ ಎಂದು ಶಪಿಸಿದಾಗ ರಾಮಾನುಜ ಹೇಳಿದ್ದು: 'ಸ್ವಾಮಿ, ನಾನು ಮಾಡಿದ ತಪ್ಪಿನಿಂದ ಈ ಸಮಸ್ತರೂ ಸ್ವರ್ಗಕ್ಕೆ ಹೋಗುವುದಾದರೆ ನಾನೊಬ್ಬ ನರಕಕ್ಕೆ ಹೋಗಲು ಸಿದ್ಧ!'

***

೧೪ ವರ್ಷಗಳ ಕಾಲ ಕರ್ನಾಟಕದಲ್ಲಿದ್ದ ರಾಮಾನುಜನಿಂದ ದೀಕ್ಷೆ ಪಡೆದ ಸಸ್ಯಾಹಾರಿಗಳು ಮತ್ತು ಮಾಂಸಾಹಾರ ಬಿಟ್ಟ ಶೂದ್ರರೂ, ದಲಿತರೂ ಬ್ರಾಹ್ಮಣರಾದರು. ಬಿಡಲಾಗದವರು ದಾಸಗೌಡರು, ನಾಮಧಾರಿಗಳು, ದಾಸಯ್ಯಗಳು ಎನಿಸಿಕೊಂಡರು. ದಲಿತರಿಗೆ ದೇವಸ್ಥಾನದ ಮುಂದಿನ ಗರುಡನನ್ನು ಗರುಡಗಂಭದ ರೂಪದಲ್ಲಿ ಶಂಖ-ಚಕ್ರ ಜಾಗಟೆಗಳ ಲಾಂಛನದೊಂದಿಗೆ ನೀಡಿ ಅವರನ್ನು ನಡೆದಾಡುವ ದೇವರುಗಳನ್ನಾಗಿ ಮಾಡಿದ. ತನ್ನ ದೀಕ್ಷೆಗೆ ಸಸ್ಯಾಹಾರದ ವ್ರತವನ್ನಾಗಲೀ, ಕಠಿಣ ಧಾರ್ಮಿಕ ನಿಯಮಗಳನ್ನಾಗಲೀ ವಿಧಿಸದೆ ಉದಾರಿಯಾಗಿದ್ದ ರಾಮಾನುಜ ಮೇಲುಕೋಟೆಯ ಬೆಟ್ಟದ ಮೇಲಿನ ದೇವಸ್ಥಾನವನ್ನು ದಲಿತರಿಗಾಗಿ ಕಟ್ಟಿಸಿದ ಎನ್ನಲು ವೈರಮುಡಿ ಉತ್ಸವದ ಹಲವು ಆಚರಣೆಗಳು ಸಾಕ್ಷಿಯಂತಿವೆ.

***

ರಾಮಾನುಜನರ ಮತ್ತೊಂದು ವಿಸ್ಮಯದ ಸೃಷ್ಟಿ ಎಂದರೆ ಬೇಬಿ ನಾಚಿಯಾರ್ ಎಂಬ ಮುಸ್ಲಿಂ ದೇವತೆ! ಮೇಲುಕೋಟೆಯ ಚೆಲುವನಾರಾಯಣನ ಮೂರ್ತಿಯನ್ನು ದರೋಡೆಕೋರರು ಕದ್ದು ದೆಹಲಿಗೆ ಕೊಂಡೊಯ್ಯುತ್ತಾರೆ. ರಾಮಾನುಜ ಅದನ್ನು ಹುಡುಕಿಕೊಂಡು ಹೋಗಿ ನವಾಬನ ಬಳಿ ಇದ್ದ ಅದನ್ನು ವಾಪಸ್ ತರುತ್ತಾನೆ. ಆದರೆ ಆ ಮೂರ್ತಿಗೆ ಒಲಿದು ಆಟವಾಡುತ್ತಿದ್ದ ನವಾಬನ ಮಗಳು ಅದನ್ನು ಬಿಡಲಾಗದೆ ಭಟರೊಂದಿಗೆ ಮೇಲುಕೋಟೆಗೆ ಬರುತ್ತಾಳೆ. ರಾಮಾನುಜ ಆಕೆಗೆ ಅದರ ಪೂಜೆ ಮಾಡಲು ಅನುಮತಿ ಕೊಡುತ್ತಾನೆ. ಆಕೆ ಅಲ್ಲೇ ನೆಲೆಗೊಂಡು ಮುಂದೆ ನಿತ್ಯಪೂಜೆಗೊಳ್ಳುವ ದೇವತೆಯಾಗುತ್ತಾಳೆ. ಊರ ಹೊರಗಿದ್ದ ಈ ದೇವತಾಮೂರ್ತಿ ಈಗ ಚೆಲುವನಾರಾಯಣನ ಗರ್ಭಗುಡಿಯೊಳಗೇ ನೆಲೆಸಿ ಪೂಜೆಗೊಳ್ಳುತ್ತಿದೆ. ಮೇಲುಕೋಟೆಯಲ್ಲಿ ಮಾತ್ರವಲ್ಲ, ತಿರುಪತಿಯೂ ಸೇರಿದಂತೆ ರಾಮಾನುಜ ಪರಂಪರೆಯ ಎಲ್ಲ ದೇವಾಲಯಗಳಲ್ಲಿ ಬೇಬಿ ನಾಚಿಯಾರ್‌ಗೆ ನಿತ್ಯ ಪೂಜೆ ಸಲ್ಲುತ್ತದೆ.

ಆಂಧ್ರದ ಗುಂಟೂರಿನ ದೇವಸ್ಥಾನವೊಂದರಲ್ಲಿ ನಾಚಿಯಾರ್‌ಳ ಗಂಡ ಎಂದು ಬಾಲಾಜಿಯನ್ನು 'ದಾಮಾದ್ (ಅಳಿಯ) ಬಾಲಾಜಿ' ಎಂಬ ಹೆಸರಿನಲ್ಲಿ ಪೂಜಿಸುತ್ತಾರೆ.

**-ಎನ್.ಕೆ ಮೋಹನರಾಂ (*'ದಲಿತರ ದೇವಸ್ಥಾನ ಪ್ರವೇಶದ ಸಾವಿರ ವರ್ಷ: ದಲಿತರು ಮರೆತ ರಾಮಾನುಜ'* ಪುಸ್ತಕದಿಂದ)**

## ಪುಸ್ತಕಾವಲೋಕನ

ಪು: ಒಂದಿಷ್ಟು ನನ್ನದು... ಲೇ: ಬಿ.ಟಿ. ಬೆಳಗಟ್ಟ ಪ್ರ: ಕೆಳಗಳಮನೆ ಬೋಸಯ್ಯ ಪುಸ್ತಕಮಾಲೆ, ದಾವಣಗೆರೆ ಪು: ೧೬೮ ಬೆಲೆ: ರೂ.. ೧೨೦/-

### ಸರಳ ಸುಂದರ ದಲಿತ ಬಾಲ್ಯ ಕಾಲ ಕಥನ



ಕನ್ನಡದಲ್ಲಿ ಹಲವು ಅನುವಾದಗಳೂ ಸೇರಿದಂತೆ ಸಾಕಷ್ಟು ದಲಿತ ಆತ್ಮಕತೆಗಳು ಬಂದಿವೆ. ಆದರೆ ಬಿ.ಟಿ. ಬೆಳಗಟ್ಟ ಎಂಬ ನಾಮಾಂಕಿತದೊಂದಿಗೆ ಬರೆದಿರುವ ಬಿ.ಟಿ ತಿಪ್ಪೇಸ್ವಾಮಿಯವರ 'ಒಂದಿಷ್ಟು ನನ್ನದು...' ಪುಸ್ತಕ ಈ ಎಲ್ಲ ಆತ್ಮಕತೆಗಳಿಗಿಂತ ಭಿನ್ನವಾಗಿದೆ. ನಮ್ಮ ಸಿದ್ಧಲಿಂಗಯ್ಯ ಅವರ 'ಊರುಕೇರಿ' ಮತ್ತು ಮರಾಠಿಯಿಂದ ಬಂದ ನರೇಂದ್ರ ಜಾಧವ್, ಅವರ ತಂದೆ ಮತ್ತು ಮಗಳ ಆತ್ಮವೃತ್ತಾಂತಗಳನ್ನೊಳಗೊಂಡ 'ಬಹಿಷ್ಕೃತ'ಗಳ ಹೊರತಾಗಿ ಬಹಳಷ್ಟು ದಲಿತ ಆತ್ಮಕತೆಗಳು ದಲಿತತ್ವದ ಅವಮಾನ-ಸಂಕಷ್ಟಗಳ ನಿರೂಪಣೆಯ ಮಧ್ಯೆಯೇ ಲೇಖಕರ ವೈಯಕ್ತಿಕ ಬದುಕಿನ ಕಥೆಗಳನ್ನು ಹೇಳುತ್ತವೆ. ಆದರೆ ಈ ಪುಸ್ತಕ ಆ ಅವಮಾನ-ಸಂಕಟಗಳನ್ನು ಹೇಳಿಯೂ ಹೇಳದಂತಹ ತನ್ನದೇ ಗ್ರಾಮ ಮುಗ್ಧತೆಯೊಂದಿಗೆ ಚಿತ್ರದುರ್ಗ ಜಿಲ್ಲೆಯ ಬೆಳಗಟ್ಟ ಎಂಬ ಕುಗ್ರಾಮವೊಂದರ ಮ್ಯಾಸ ಮಾದಿಗರ ಕುಟುಂಬವೊಂದರ ಸಾಧನೆಯ ಹಾದಿಯನ್ನು ಬಿಚ್ಚಿಡುತ್ತದೆ. ವಿಶೇಷವೆಂದರೆ ಈ ಪುಸ್ತಕ ಅಂಬೇಡ್ಕರ್ ಸೇರಿದಂತೆ ಯಾರ, ಯಾವ ಸೈದ್ಧಾಂತಿಕ ಸ್ಫೂರ್ತಿ ಇಲ್ಲದೆ ಕೇವಲ ಬದುಕನ್ನು ಕುರಿತ ಪ್ರೀತಿಯಿಂದ, ಚೆನ್ನಾಗಿ ಬದುಕಬೇಕೆಂಬ ಛಲದಿಂದ ಮಾತ್ರ ಬದುಕು ಕಟ್ಟಿಕೊಂಡ ಓದು ಭಾರವಿಲ್ಲದ ಸರಳ ಸುಂದರ ಕಥೆಯಾಗಿ ನಮ್ಮನ್ನು ಓದಿಸಿಕೊಂಡು ಹೋಗುತ್ತದೆ.

ಈ ಪುಸ್ತಕದಲ್ಲಿ ಲೇಖಕರು ತಮ್ಮ ಕತೆಯನ್ನು ತಮ್ಮ ಶಾಲಾ ವಿದ್ಯಾಭ್ಯಾಸ ಮುಗಿಸುವವರೆಗೆ ಮಾತ್ರ ನಿರೂಪಿಸಿರುವರಾದರೂ, ಅದಷ್ಟೇ ಒಂದು ಸಾಧನೆಯ ಸಮಗ್ರತೆಯೊಂದಿಗೆ ನಮ್ಮನ್ನು ಸೆಳೆಯಲು ಕಾರಣ. ಅವರು ತಮ್ಮ ಹಟ್ಟಿ, ಹಳ್ಳಿ, ಪ್ರೌಢಶಾಲಾ ಶಿಕ್ಷಣಕ್ಕಾಗಿ ಹೋದ ಚಿತ್ರದುರ್ಗ ನಗರ ಅದರಲ್ಲಿನ ತಮ್ಮ ಶಾಲೆ ಮತ್ತು ಹಾಸ್ಟೆಲ್‌ನ ಬದುಕನ್ನು-ಅಂದಿನ ದಲಿತ ರಾಜಕಾರಣಿಗಳ ಕುತೂಹಲಕಾರಿ ಚಿತ್ರಣಗಳೂ ಸೇರಿದಂತೆ- ತಿಪ್ಪೇಸ್ವಾಮಿಯವರ ಇಡೀ ಬಾಲ್ಯ ನಮ್ಮ ಕಣ್ಮುಂದೆ ಹಾದುಹೋಗುವಂತೆ ಜೀವಂತವಾಗಿ ನಿರೂಪಿಸಿರುವುದು..

ಚರ್ಮ ಹದ ಮಾಡಿ ಮಾರುವ, ಚಪ್ಪಲಿ ರಿಪೇರಿ ಮಾಡುವ ಮತ್ತು ಮಳೆ ಇದ್ದರೆ ತಮ್ಮ ಅರ್ಧ ಎಕರೆ ಕಲ್ಲುಭೂಮಿಯಲ್ಲಿ ಜೋಳ, ನವಣೆ, ಸಜ್ಜೆಗಳನ್ನು ಬೆಳೆಯುವ ಕಡುಬಡ ಕುಟುಂಬವೊಂದರಲ್ಲಿ ಹುಟ್ಟಿ ತಮ್ಮ ಗುಡಿಸಿಲು ಮತ್ತು ಹಳ್ಳಿಯ ಬ್ರಾಹ್ಮಣರೂ ಸೇರಿದಂತೆ ವಿವಿಧ ಜಾತಿಗಳ ಗುಡಿಸಲು ಮತ್ತು ಮನೆಗಳಲ್ಲಿ ಸಿಗುವ ಚಂದಮಾಮ, ರಾಮಾಯಣ ಮಹಾಭಾರತ ಮುಂತಾದ ಪುರಾಣ ಪುಣ್ಯ ಕಥೆಗಳು, ಅವರ ಕಾಲದ (ಒಂದು ಪೋಲಿ ಕಾದಂಬರಿಯೂ ಸೇರಿದಂತೆ) ಆಧುನಿಕ ಕಥೆ-ಕಾದಂಬರಿಗಳೆಲ್ಲವನ್ನೂ ಮುಕ್ಕಿ ಓದುತ್ತಾ ತನ್ನ ಭಾವಲೋಕವನ್ನು ವಿಸ್ತರಿಸಿಕೊಳ್ಳುವ ಬಾಲಕ ತಿಪ್ಪೇಸ್ವಾಮಿ ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ತನ್ನ ಹಟ್ಟಿಯಲ್ಲಿನ ಉಗಾದಿ ಜೂಜಾಟದ ಮಧ್ಯೆ 'ಸಂಪಾದಿಸಿದ' ಹಣದಿಂದ ಚಿತ್ರದುರ್ಗಕ್ಕೆ ಹೋಗಿ 'ವಚನ ಭಾರತ'ವನ್ನು ಕೊಂಡು ಓದುವ ಹುಚ್ಚು ಹತ್ತಿಸಿಕೊಂಡವನು. ಜೊತೆಗೆ ಚಿತ್ರ ಬಿಡಿಸುವ, ಸಿನಿಮಾ, ನಾಟಕಗಳ ಹಾಡು ಹೇಳುವ ಹವ್ಯಾಸ. ಹಾಗಾಗಿಯೇ ಈ ಹುಡುಗ ಪ್ರೌಢಶಾಲೆಯಲ್ಲಿ ಸವರ್ಣೀಯ ಜಾತಿಗಳ ಮೇಷ್ಟ್ರ ಮೆಚ್ಚುಗೆಗೂ ಪಾತ್ರವಾಗಿ ಶಾಲೆಯ ವಾರ್ಷಿಕ ಪತ್ರಿಕೆಯ ಸಹ ಸಂಪಾದಕನೂ ಆಗಿಬಿಡುವನು!

ಈ ಹುಡುಗನನ್ನು ಅವರ ತಂದೆ-ತಾಯಿ-ದೊಡ್ಡಪ್ಪ-ದೊಡ್ಡಮ್ಮಂದಿರು ಕಡು ಬಡತನದಲ್ಲೇ ಪ್ರೀತಿಯಿಂದ ಪ್ರೋತ್ಸಾಹಿಸಿದ, ಇದಕ್ಕಾಗಿ ತಂದೆ ಬೋಸಯ್ಯ ಹಳ್ಳಿಯ ರೆಡ್ಡಿ ಸಾಹುಕಾರರ ಕುಟುಂಬಗಳ ಈರ್ಷ್ಯೆ-ನಿಂದನೆ-ಮೆಚ್ಚುಗೆಗಳ ನಡುವೆ ತಿಳಿ ಮನಸ್ಸಿನಿಂದಲೇ ಸಹಾಯಕ್ಕೆ ಕೈಯೊಡ್ಡಬೇಕಾದ ಪ್ರಸಂಗಗಳು ಇಲ್ಲಿ ಯಾವುದೇ ಕಹಿ ಇಲ್ಲದೆ ವರ್ಣಿಸಲ್ಪಟ್ಟು ಅಸ್ಪೃಶ್ಯ ಕುಟುಂಬವೊಂದು ಹೇಗೂ ತನ್ನ ಪಾಡಿಗೆ ತಾನು ಸಾರ್ಥಕ ಬದುಕು ಕಟ್ಟಿಕೊಳ್ಳುವ ಕಥೆ ಇಂದಿನ ದಲಿತ ಸಾಹಿತ್ಯ ಕೃತಿಗಳ ಗಲಭೆ-ಗದ್ದಲಗಳ ನಡುವೆ ತನ್ನದೇ ಆರ್ದ್ರ ಚೆಲುವಿನೊಂದಿಗೆ ಗಮನ ಸೆಳೆಯುತ್ತದೆ. ಬೋಸಯ್ಯನವರ ಆರು ಜನ ಗಂಡು ಮಕ್ಕಳಲ್ಲಿ ಇಬ್ಬರು ಕಾಲೇಜು ಅಧ್ಯಾಪಕರು, ಇಬ್ಬರು ವೈದ್ಯರು, ಮತ್ತಿಬ್ಬರು-ತಿಪ್ಪೇಸ್ವಾಮಿಯುವರೂ ಸೇರಿದಂತೆ- ಇಂಜಿನಿಯರುಗಳಾದರು ಎಂದರೆ ನೀವು ನಂಬುತ್ತೀರಾ?

-ಡಿಎಸ್ಸೆನ್

ಪು: ಮಲೆಗಳಲ್ಲಿ ಮದುಮಗಳು-೫೦ ಸಂ: ಡಿ.ಎಸ್. ನಾಗಭೂಷಣ ಪ್ರ: ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು ಪುಟ: ೯೮ ಬೆಲೆ ರೂ. ೯೦/-

### 'ಮದುಮಗಳು' : ಸಮಕಾಲೀನ ಸ್ಪಂದನ



ಐವತ್ತು ವರ್ಷಗಳ ನಂತರ ಕುವೆಂಪು ಅವರ ಕೃತಿ 'ಮಲೆಗಳಲ್ಲಿ ಮದುಮಗಳ'ನ್ನು ಮತ್ತೆ ನೋಡುವ ಪ್ರಯತ್ನವೇ 'ಮಲೆಗಳಲ್ಲಿ ಮದುಮಗಳು-೫೦' ವಿಮರ್ಶಾ ಕೃತಿ. ಇಲ್ಲಿ ಹನ್ನೊಂದು ಸಮಕಾಲೀನ ಸ್ಪಂದನಗಳಿವೆ. ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯ, ತಾತ್ವಿಕ ಧೋರಣೆಯ, ರುಚಿ-ಅಭಿರುಚಿಯ ಮನಸ್ಸುಗಳು ಬೇರೆಬೇರೆಯ ದಿಕ್ಕಿನಿಂದ ಈ ಕೃತಿಗೆ ಮುಖಾಮುಖಿಯಾಗಿವೆ. ಈ ಎಲ್ಲ ನೋಟಗಳೂ ಕೃತಿಯ ಒಟ್ಟಂದವನ್ನು, ಸೊಬಗು ಸೌಂದರ್ಯಗಳನ್ನು, ತಾತ್ವಿಕ ನಿಲುವನ್ನು, ಧ್ವನಿಶಕ್ತಿಯ ಆಳ-ಅಗಲಗಳನ್ನು ಗ್ರಹಿಸಲು ಅಗತ್ಯವಾದ ಒಳನೋಟಗಳನ್ನು ಒದಗಿಸಿವೆ. ಹಾಗೆಯೇ ಐವತ್ತು ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಮದುಮಗಳಿಗೆ ಸಿಕ್ಕದೇ ಹೋದ ವಿಮರ್ಶೆ ನ್ಯಾಯದ ಬಗ್ಗೆ, ಅದಕ್ಕಿರಬಹುದಾದ ಕಾರಣಗಳ ಬಗ್ಗೆ ಇಲ್ಲಿ ವಿಶ್ಲೇಷಣೆಗಳಿವೆ. ದೇವನೂರು, ಡಿ.ಎಸ್.ನಾಗಭೂಷಣ ಮತ್ತು ರಾಜೇಂದ್ರ ಚೆನ್ನಿ ಅವರ ನೋಟಗಳು ಅರ್ಥಪೂರ್ಣವಾಗಿ ಈ ದಿಕ್ಕಿನಲ್ಲಿ ಚಿಂತಿಸಿವೆ. ಕನ್ನಡ ಮಾತ್ರವಲ್ಲ, ಭಾರತೀಯ ಕಾದಂಬರಿಗಳ ಗಡಿರೇಖೆಗಳನ್ನು ವಿಸ್ತರಿಸಿದ ಈ ಕಾದಂಬರಿ ಜಾಗತಿಕ ಮಟ್ಟದಲ್ಲಿ ಹೇಗೆ ನಿಲ್ಲಬಲ್ಲದೆಂಬುದನ್ನೂ ಈ ನೋಟಗಳು ಕಾಣಿಸಿವೆ.

ಹೆಣ್ಣನ್ನು ಕುರಿತ ಸಾಂಪ್ರದಾಯಿಕ ನಿಲುವುಗಳನ್ನು ಈ ಮದುಮಗಳು ಹೇಗೆ ಪ್ರಶ್ನಿಸುತ್ತದೆ ಮತ್ತು ಉಲ್ಲಂಘಿಸುತ್ತದೆ ಎಂಬುದನ್ನು ವಿನಯಾ ಒಕ್ಕುಂದ ಅವರ ಲೇಖನ ತೋರಿಸಿಕೊಟ್ಟರೆ, ಸಬಿತಾ ಬನ್ನಾಡಿ ಅವರ ನೋಟದಲ್ಲಿ, 'ಕುವೆಂಪು ಅವರಿಗೆ ಹೆಣ್ಣುಗಂಡಿನ ಸಂಬಂಧ ಎನ್ನುವುದು ಸಹಜೀವನ, ಸಹಭಾಗಿತ್ವ, ಸಮನ್ವಯ, ಸಮ್ಮಿಲನ ಮತ್ತು ಆ ಮೂಲಕ ಒಂದು ಪೂರ್ಣದೃಷ್ಟಿ'. ಈ ಎರಡು ನೋಟಗಳಿಗೆ ಪೂರಕವೆನ್ನುವಂತೆ ಚೆನ್ನಿ, 'ಅತ್ಯಂತ ಗಂಭೀರವೂ, ಮುಖ್ಯವೂ ಆದ ನೈತಿಕ ತೀರ್ಮಾನಗಳನ್ನು ಈ ಕಾದಂಬರಿಯಲ್ಲಿ ಹೆಂಗಸರೇ ಮಾಡುವುದನ್ನು' ಗುರುತಿಸುತ್ತಾರೆ. ಜಿ.ರಾಜಶೇಖರ ಅವರ ಲೇಖನ ಕುವೆಂಪು ಶೈಲಿಯ ಹೊರಮೈ ಲಕ್ಷಣವನ್ನು ಮತ್ತು ಕಾದಂಬರಿಯ ಶಕ್ತಿಮೂಲವನ್ನು ತೋರಿಸುತ್ತದೆ. ೧೯ನೇ ಶತಮಾನದ ಕೊನೆಯಲ್ಲಿ ಮಲೆನಾಡಿನಲ್ಲಿ ನಡೆದ ಮತಾಂತರ ಯತ್ನಗಳ ಬಗ್ಗೆ ಮದುಮಗಳಲ್ಲಿ ಅಪೂರ್ವ ಒಳನೋಟಗಳಿವೆ ಎನ್ನುತ್ತಾರೆ ರಾಜಶೇಖರ. ನಿಸರ್ಗದ ಪರಿಪೂರ್ಣತೆಯನ್ನು ಅರಿಯಲು ಅಡ್ಡಿಯಾಗುವ ಎಲ್ಲ ಉಪಾಧಿಗಳನ್ನು ಮೀರಲು ಯತ್ನಿಸುವ, ಅನಿಕೇತನವಾಗುವ ದಿಕ್ಕಿನತ್ತ ಚಲಿಸುವ ಈ ಕಾದಂಬರಿಯಲ್ಲಿ ಕುವೆಂಪು ಹೇಗೆ ರಾಮಕೃಷ್ಣರಿಗೆ ಹತ್ತಿರವಾಗಿದ್ದಾರೆ ಎಂಬುದನ್ನು ಲಕ್ಷ್ಮೀಶ ತೋಳ್ಪಾಡಿ ವಿಶ್ಲೇಷಿಸುತ್ತಾರೆ.

'ಈ ಕಾದಂಬರಿಗೆ ಕೇಂದ್ರವೇ ಇಲ್ಲ' 'ವಿವರಗಳಲ್ಲಿ ಸೊಕ್ಕಿದೆ' ಇತ್ಯಾದಿ ನವ್ಯರ ಟೀಕೆಗೆ ಪರೋಕ್ಷ ಉತ್ತರಗಳೂ ಇಲ್ಲಿವೆ. ಮಹಾದೇವ ಸೂಕ್ಷ್ಮವಾಗಿ ಹೇಳುವ ಮಾತೊಂದಿದೆ: 'ನನ್ನ ಭಾವಕೋಶದೊಳಗೆ ಇರುವ ರಾಮಾಯಣದ ಅರಣ್ಯವನ್ನು ಬಿಟ್ಟರೆ ಬಹುಶಃ ಮಲೆಗಳಲ್ಲಿ ಮದುಮಗಳುವಿನಲ್ಲಿ ಅರಣ್ಯ ಬೃಹತ್ ಆಗಿ ಮೈತಾಳಿರುವುದು.' ನಿತ್ಯಾನಂದ ಬಿ.ಶೆಟ್ಟಿ, 'ಅರಣ್ಯವಿಲ್ಲದಿದ್ದರೆ ಈ ಕಾದಂಬರಿಯೇ ಇಲ್ಲವೇನೋ ಎನ್ನುವಷ್ಟು ತೀವ್ರವಾಗಿ ಈ ಕಾದಂಬರಿಯಲ್ಲಿ ಅರಣ್ಯದ ಉಪಸ್ಥಿತಿ ಇದೆ' ಎನ್ನುತ್ತಾರೆ.

ಈ ಕಾದಂಬರಿಯ ಸಾಮಾಜಿಕ ವಿನ್ಯಾಸದ ಬಗ್ಗೆ ಚಿಂತಿಸಿರುವ ಕೆ.ವೈ.ನಾರಾಯಣ ಸ್ವಾಮಿ, ಈ ಕಾದಂಬರಿಯನ್ನು 'ಜೀವಯಾನ ಮತ್ತು ಕಾಲಯಾನ ಪ್ರಯಾಣಗಳ ಮಹಾಕಥನ' ಎಂದು ಭಾವಿಸುತ್ತಾರೆ. ಈ ಕಾದಂಬರಿಯ ರಚನಾ ವಿನ್ಯಾಸ 'ವಿಶಿಷ್ಟವಾದದ್ದು'. 'ಇದರ ರಚನೆಯಲ್ಲಿಯೇ ಈ ಕೃತಿಯಲ್ಲಿ ಬರುವ ಸಾಮಾಜಿಕ ವಿದ್ಯಮಾನಗಳನ್ನು ಕುರಿತ ವಿಮರ್ಶೆಯೂ ಜೊತೆಜೊತೆಗೇ ನಡೆದಿದೆ' ಎನ್ನುವ ಅಭಿಪ್ರಾಯವನ್ನು ತಳೆಯುತ್ತಾರೆ.

'ಶೂದ್ರತ್ವದ ನಿರ್ವಚನವಾಗಿ' ಮದುಮಗಳನ್ನು ಓದುವ ವಾಸುದೇವ ಬೆಳ್ಳೆ, ಈ ಕೃತಿಯಲ್ಲಿ ಕುವೆಂಪು ಜಾತೀಯತೆಗೆ ಪ್ರಬಲ ಪ್ರತಿರೋಧ ಒಡ್ಡಿರುವುದನ್ನು, ಶೂದ್ರ ಮತ್ತು ದಲಿತ ಲೋಕವನ್ನು ಚಿತ್ರಿಸುವುದರ ಮೂಲಕ ಕನ್ನಡದಲ್ಲಿ ಶೂದ್ರ ಚಿಂತನೆಯ ದಾರಿಯನ್ನು ತೆರೆದರೆಂಬುದನ್ನು ಹೇಳುತ್ತಾರೆ. ಹಿಂದೂ ರಾಷ್ಟ್ರೀಯತೆ, ಬ್ರಾಹ್ಮಣ್ಯದ ಪ್ರಾಬಲ್ಯ, ಪುರಾಣ, ನಂಬಿಕೆಗಳನ್ನು ಸಂಪೂರ್ಣವಾಗಿ ತಿರಸ್ಕರಿಸದೆ ಕುವೆಂಪು ಅವುಗಳ ಒಳಗಡೆಯೇ ಬದಲಾವಣೆ ಮಾಡಿಕೊಳ್ಳುವುದು ಇತ್ಯಾದಿ ಈಗಾಗಲೇ ಚರ್ಚಿತವಾಗಿರುವ ವಿಚಾರಗಳನ್ನು ಇಲ್ಲಿ ಮತ್ತೆ ವಿವರಿಸಲಾಗಿದೆ.

-ಜಿ.ಪಿ. ಬಸವರಾಜು

ಪು: **ಅತೀತ ಲೋಕದ ಮಹಾ ಯಾತ್ರಿಕ** ಲೇ: **ಡಾ. ಲೋಕೇಶ ಅಗಸನಕಟ್ಟೆ** ಪ್ರ: **ಶ್ರೀ ವೀರಪ್ರತಾಪ ಮೀಡಿಯಾ ಟ್ರಸ್ಟ್** (ರಿ), ಬೆಂಗಳೂರು ಪು: ೪೧೬ ಬೆ: **ರೂ. ೨೦೦/–**

## 'ಅತೀತಗ'ಳ ಒಂದು ಲೋಕ ಕಥನ



**ಈ** ಪುಸ್ತಕವು ಸರಳ ವ್ಯಾಖ್ಯಾನಕ್ಕೆ ಸಿಗಲೊಲ್ಲದ ಬೆಲಗೂರು ಬಿಂದುಮಾಧವ ಶರ್ಮರೆಂಬ ಧರ್ಮಗುರುಗಳೊಬ್ಬರನ್ನು ಕುರಿತ ಕಥನವಾಗಿದೆ. ಇಹಕ್ಕೆ ಬರುವಾಗಲೆ ತಂದೆಯನ್ನು ಪರಲೋಕಕ್ಕೆ ಕಳುಹಿಸಿದವನು ಎಂಬ ನಿಂದೆಗೆ ಒಳಗಾಗುವ ಬಾಲಕ, ಸಮಾಜದ ತಿರಸ್ಕಾರ, ತಾಯಿಯ ಮಮತೆ, ಬಡತನದ ಸಂಕಟ, ಶಾಲಾ ಕಲಿಕೆಯಲ್ಲಿ ನಿರಾಸಕ್ತಿ, ತುಂಟಾಟಗಳು ಅವಮಾನಗಳ ಮಧ್ಯೆ ದುಡಿಯುವ ಮಾರ್ಗಕ್ಕೆ ತೆರಳಿ ಬೇಕರಿ, ದರ್ಜಿ, ಅಡುಗೆ, ಕೊನೆಗೆ ನೇಗಿಲು ಹಿಡಿದು ಕೃಷಿಕನಾಗುತ್ತಾನೆ. ಬಾಲ್ಯದಿಂದಲೂ ಬಂದ ಸಂಕಟಕ್ಕೆ ಸ್ಪಂದಿಸುವ ಗುಣ ಗಟ್ಟಿಯಾಗುತ್ತಿರುವಾಗಲೆ, ಅಸ್ವಸ್ಥವಾದ ಮಂಗನ ಮರಿಯನ್ನು ಆಂಜನೇಯನ ಕಿರುಗುಡಿಯಲ್ಲಿ ಇರಿಸಿ ಉಪಚರಿಸುತ್ತಾರೆ. ಅದೇ ಮಾರುತಿಯ ಆವಾಹನೆಗೂ ಕಾರಣವಾಗುತ್ತದೆ! ಮುಂದಿನದು ಅಲೌಕಿಕ ಚರಿತೆಯೆ! ಸೋದರ ಕುಟುಂಬವನ್ನು ಸಲುಹಿ, ಊರಿಗೆ ಗುರುಗಳಾಗಿ ಆಂಜನೇಯ ರಾಯರ ಸಾಂಸ್ಥಿಕಗಳಿಗೆ ಧರ್ಮಗುರುಗಳಾಗುವ ಚರಿತ್ರೆ!

ವೈದಿಕ ಮಠದ ಗುರುಗಳಾದರೂ, ಅಲ್ಲಿ ಆಂಜನೇಯನ ಜಯಂತಿಯೇ ಆಕರ್ಷಣೆ. ಅಲ್ಲಿ ಕ್ರೈಸ್ತರು, ಮುಸ್ಲಿಮರು, ದಲಿತರು, ಶ್ರೀಮಂತರು– ಬಡವರೆನ್ನದೆ ಎಲ್ಲರೂ ಒಳಗೊಳ್ಳುತ್ತಾರೆ. ಹಿತ ಕಾಣುತ್ತಾರೆ. ಅವರು ಕಟ್ಟಿದ ಅತೀತಗಳನ್ನು ಅಂದರೆ ಪವಾಡಗಳ ಕಥಾನಕವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಇದಕ್ಕೆ ಸಮರ್ಥನೆಯಾಗಿ ಲೇಖಕರು ಈ 'ಅತೀತ' ವಿದ್ಯಮಾನ ಕುರಿತ ಪೂರ್ವ–ಪಶ್ಚಿಮಗಳ ಚಿಂತನೆಯ ಒಂದು ಹಿನ್ನೆಲೆ ನೀಡಿ ಚೈತನ್ಯ, ಪರಮಹಂಸ, ಬುದ್ಧ, ಬಸವಣ್ಣ ಮುಂತಾದವರಲ್ಲದೆ ಶಿರಡಿ, ತರಳಬಾಳು, ಸಾಯಿಬಾಬಾರ ಜೀವನ ಕಥನಗಳ ತುಣುಕುಗಳನ್ನು ತಮ್ಮ ನಿರೂಪಣೆಯೊಂದಿಗೆ ಜೋಡಿಸಿದ್ದಾರೆ. 'ಇಲ್ಲಿನ ಅತೀತ ಸಂಗತಿಗಳು ಚಮತ್ಕಾರ, ಅಸಾಧ್ಯ ಎಂಬ ಭಾವನೆ ಕೆಲವರಿಗೆ ಇದ್ದರೂ, ಅತೀತ ಕಥನಗಳು ನನ್ನನ್ನು ವಿಸ್ಮಯಗೊಳಿಸುತ್ತವೆ. ನಾನು ಇವುಗಳನ್ನು ನಿರಾಕರಿಸಲಾರೆ... ಇವು ನಮಗೆ ನಿರಾಕರಿಸುವುದನ್ನು ಕಲಿಸಿವೆಯೇ ಹೊರತು ಸ್ವೀಕರಿಸಿ ವಿಶ್ಲೇಷಿಸುವುದನ್ನು ಕಲಿಸಿಲ್ಲ' ಎಂಬ ಲೇಖಕರ ನಿಲುವಿನ ಪ್ರತಿಪಾದನೆಯೊಂದಿಗೆ ಬಿಂದು ಮಾಧವರೆಂಬ ಈ ಪವಾಡ ಪುರುಷನ ಕಥನ ಮುವ್ವತ್ತು ಅಧ್ಯಾಯಗಳಲ್ಲಿ ವಿಸ್ತರಿಸಿ ನಿರೂಪಣೆಗೊಂಡಿದೆ.

ಪುಸ್ತಕದಲ್ಲಿ ವಿಶ್ಲೇಷಣೆಗಿಂತ ಸಂಗತಿಗಳ ಸ್ವಾರಸ್ಯಕರ ಕಥನವೇ ಪ್ರಧಾನವಾಗಿದೆ. ನನ್ನ ಓದಿಗೂ ಒಲಿಯದ ಸಂಗತಿಗಳೂ ಇಲ್ಲಿ ಹಲವಿವೆ. ಈ ಗುರುವರ್ಯರು ಒಂದು ಕಡೆ ಅನ್ನದಾನಿಯಾಗಿ, ಸಿರಿವಂತರ–ಬುದ್ಧಿವಂತರ ಮನ ಗೆಲ್ಲುತ್ತಾ ಸಮುದಾಯಗಳಿಗೆ ಹತ್ತಿರವಾಗಿ ದುಃಖನಿವಾರಕರಾಗಿ ಕಂಡರೆ, ಇನ್ನೊಂದೆಡೆ ಎದೆಯಲ್ಲಿನ ಜಾರಿದ ಸ್ಟಂಟನ್ನು ಸರಿಪಡಿಸುವ, ಚಲಿಸಲಾರದೆ ನಿಂತ ವಾಹನವನ್ನು ಚಲಿಸುವಂತೆ ಮಾಡುವ, ನವವಧೂವರರ ಮೇಲೆ ಬೀಳುತ್ತಲಿದ್ದ ಅರಳಿಮರವನ್ನು ಭಸ್ಮವಾಗಿಸುವ ಸಂಗತಿಗಳು ಇವರ ಸುತ್ತ ಇಲ್ಲಿ ಕಟ್ಟಲ್ಪಟ್ಟಿವೆ. ಇವೆಲ್ಲ ಮಾನಸಿಕ–ದೈಹಿಕವಾಗಿ ದುರ್ಬಲರಾದ ಜನಸಮುದಾಯ ಕಟ್ಟಿದವು! ಗಾಂಧಿ ಕೂಡ ಇಲ್ಲಿ ಲೇವಡಿಗೆ ಒಳಗಾಗುತ್ತಾರೆ. ಮುಟ್ಟಾಗಿರುವವರೆಂದು ಅನುಮಾನಿಸಲ್ಪಟ್ಟ ಮಹಿಳೆಗೆ ಪ್ರವೇಶ ನಿಷೇಧಿತವಾಗುತ್ತದೆ. ಆದರೂ ಲೇಖಕರ ಪ್ರಕಾರ ಇಲ್ಲಿನ ಕಥಾ ನಾಯಕ ಸಮಾಜವಾದಿ ಸಂತ! ಸಮಾಜವಾದಿ ಎಂಬ ಶಬ್ದ ಇಷ್ಟು ಸಡಿಲವಾಗಿ ಬಳಕೆಯಾಗಬಾರದಲ್ಲವೆ?

ಇಬ್ಬರು ಮಠಾಧೀಶರಿಗೆ ಹತ್ತಿರದವರಾದ ಈ ಲೇಖಕರು ಆಕಸ್ಮಿಕವೆಂಬಂತೆ ಬಿಂದು ಮಾಧವರ ವಲಯ ಪ್ರವೇಶಿಸಿ, ಅವರ ಕಥನವನ್ನು ಬರೆದು ಧರ್ಮಗುರುಗಳ ಸಂಗ, ನಿರೂಪಣೆ ಸಲ್ಲದು ಎಂಬ 'ಆಧುನಿಕ ವೈಚಾರಿಕತೆ'ಯನ್ನು ಮೀರಿ ಎರಡರ ನಡುವೆ ಒಂದು ಸೇತುವೆ ಕಟ್ಟುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಭಾರತದ ಆತ್ಮದಂತಿರುವ ಧರ್ಮದ ಒಳಗಿರುವವರ ಚಿತ್ರಣ ಇಲ್ಲಿ ನಿರರ್ಗಳವಾಗಿ ನಿರೂಪಿತವಾಗಿದೆ.

ಕಡುಬಡವರು, ಸಿರಿವಂತರು, ದುರ್ಬಲರು, ಕಳ್ಳರು–ಸುಳ್ಳರು ಎಲ್ಲರೂ ನಿರಂತರವಾಗಿ ಎಡತಾಕುವ ಕ್ಷೇತ್ರಗಳು, ಗುರುಗಳು ನೀಡುವ 'ಒಂದು ತುತ್ತು ಅನ್ನ' ಅನೇಕ 'ಅತೀತ' ಕತೆಗಳ ಉತ್ಪಾದನೆಗೆ ಕಾರಣವಾಗಬಹುದು. ಈ ಬಗ್ಗೆ ಬರೆಯುವುದೆಂದರೆ ಜೇನುಗೂಡಿಗೆ ಕೈಹಾಕಿದಂತೆ. ಓದುಗರು ಕುಶಲರಾಗಿರದಿದ್ದರೆ ಜೇನಿಗಿಂತ ಹುಳುಗಳಿಂದ ಕಚ್ಚಿಸಿಕೊಳ್ಳುವುದೇ ಹೆಚ್ಚಾಗಬಹುದು.

**–ಡಾ. ಎಚ್.ಟಿ.ಕೃಷ್ಣಮೂರ್ತಿ**

ಪು: **ಬೀಳದ ಗಡಿಯಾರ** (ಕಥೆಗಳು ಪ್ರ: **ಪ್ರೇಮ ಪ್ರಕಾಶನ,** ಮೈಸೂರು ಪುಟ: ೧೦೮ ಬೆಲೆ: ರೂ. ೯೦/– ಪು: **ಓಡಿ ಹೋದ ಹುಡುಗ** ಪ್ರ: **ಅಭಿನವ** ಬೆಂಗಳೂರು ಪುಟ: ೧೫೬ ಬೆಲೆ: ರೂ, ೧೫೦/– ಲೇ: **ಬಸು ಬೇವಿನಗಿಡದ**

## ಮಕ್ಕಳ ಸಾಹಿತ್ಯಕ್ಕೆ ಸಾರ್ಥಕ ಕೊಡುಗೆಗಳು




**ಅ**ದ್ಭುತರಮ್ಯ, ಪುರಾಣ ಕಥೆಗಳು ಅಡುಗೂಲಜ್ಜಿಯ ಕಥೆಗಳು, ಪಂಚತಂತ್ರ ಮೊದಲಾದ ಕಥೆಗಳ ಕಾಲ ಕಳೆದು ವಾಸ್ತವ ಬದುಕಿನ ವರ್ತಮಾನದ ಅನೇಕ ಸಂಗತಿಗಳನ್ನು ಕಥೆಗಳನ್ನಾಗಿ ಮಾಡುವ ಕಥನ ಕಲೆ ಕನ್ನಡಕ್ಕೆ ಹೊಸದೇನಲ್ಲ. ಆದರೂ 'ಬೀಳದ 'ಗಡಿಯಾರ' ನಮ್ಮ ವಿಶೇಷ ಗಮನ ಸೆಳೆಯುವ ಕಥಾ ಸಂಕಲನ. ಯಾವುದೇ ಬೋಧನೆಯಿಲ್ಲದೆ ನವಿರಾಗಿ ನೇರವಾಗಿ ನಮಗೇ ಅರಿವಾಗುವಂತೆ ಘಟನೆಗಳ ಮೂಲಕ ಹೆಣೆದ ತಿಳುವಳಿಕೆ ನೀಡುವ ಮಾದರಿ ಇಲ್ಲಿದೆ. ಡಾ||ಬಸು ಲೇಖಕರು ಅದಕ್ಕೆಂದೇ ಕೃತಿಗೆ ಮಕ್ಕಳಿಗೆ ಹೊಸಕಾಲದ ಕಥೆಗಳು ಎಂದು ಅಡಿಟಿಪ್ಪಣಿಯನ್ನೂ ನೀಡಿದ್ದಾರೆ. ಈ ಕೃತಿಯ ಎಂಟೂ ಕಥೆಗಳು ವಾಸ್ತವದಲ್ಲಿ ನಮ್ಮ ಮಕ್ಕಳಲ್ಲಿ ಕಾಣುವ ಸಿಟ್ಟು, ಮತ್ಸರ, ಸಂತಸ, ಜಗಳ ಇತ್ಯಾದಿ ಸಹಜ ಆಗುಹೋಗುಗಳ ವಾತಾವರಣದಲ್ಲಿಯೇ ಹುಟ್ಟಿಕೊಂಡ ಕಥೆಗಳಾಗಿವೆ. ಇಂಗ್ಲಿಷ್‌ನ 'ಫ್ರೆಂಡ್ಸ್ ಅಂಡ್ ನೈಬರ್ಸ್' ಎಂಬ ಕಥಾಮಾಲಿಕೆಗಳ ನೆನಪೊಂದು ಇಲ್ಲಿ ಹಾದು ಹೋಗುತ್ತದೆ. ಇಲ್ಲಿ ಮಕ್ಕಳು ರೈಲು ಹತ್ತಿ ಇಳಿಯುವ, ಚಿಲ್ಲರೆ ಇಲ್ಲದೆ ಟಿಕೆಟ್‌ಗೆ ಪರದಾಡುವ, ದಾರಿಯಲ್ಲಿ ತಮ್ಮದೇ ಓರಗೆಯ ಹುಡುಗನೊಬ್ಬ ಬೂಟುಪಾಲಿಷ್ ಮಾಡುವುದನ್ನು ಗಮನಿಸುವ, ದಾರಿತಪ್ಪಿ ನಗರದಲ್ಲೆಲ್ಲೋ ಹೋಗಿ ಇಳಿಯುವ, ದಾರಿ ಹುಡುಕಿ ಬರುವ ಸಾಕುಪ್ರಾಣಿಗಳು ವಾಹನಗಳ ಮಧ್ಯೆ ಬಂದಾಗ ಆಗುವ ಗಲಿಬಿಲಿ ಇವೆಲ್ಲವನ್ನೂ ಮಕ್ಕಳ ಅನುಭವದಲ್ಲಿ ಹಿಡಿದಿಟ್ಟಿವೆ.

ಈ ಕಥಾಸಂಕಲನವು ಎಂಟು ಕಥೆಗಳನ್ನೊಳಗೊಂಡಿದ್ದು ಶೀರ್ಷಿಕೆಯ ಕಥೆಯಲ್ಲಿ ಗಂಗಾಧರನೆಂಬ ಬಾಲಕ, ಅಪ್ಪ ಅಮ್ಮನ ಮುದ್ದಿನಿಂದ ಹಟಮಾರಿತನ ಸಿಟ್ಟು ಸೆಡವು ಸ್ವಭಾವವನ್ನು ಹೊಂದಿರುತ್ತಾನೆ. ಇದರಿಂದ ತಂದೆ ತಾಯಿಗಳು ಅನುಭವಿಸುವ ಕಿರಿಕಿರಿ ಮಗನ ದೆಸೆಯಿಂದ ಮನೆಮಾಲೀಕರಿಂದ ಬಯ್ಯಿಸಿಕೊಳ್ಳುವುದು, 'ಮಕ್ಕಳನ್ನು ದ್ವೇಷಮಾಡುವ ಮನೆಯಲ್ಲಿ ಹೆಂಗ್ರೀ ಇರೋದು' ಅಂತ ಹೆಂಡತಿ ಹೇಳಿದರೂ ಅಲ್ಲೇ ವಾಸಿಸುವುದು. ಗಂಗಾಧರ ಒಮ್ಮೆ ಜೋರಾಗಿ ಬಾಗಿಲು ಹಾಕಿದಾಗ ಗೋಡೆಯ ಗಡಿಯಾರ ಬಿದ್ದು ಚೂರಾಗುವುದು. ತಾಯಿ ಸಹನೆಯಿಂದ ಅವನ್ನೆಲ್ಲ ಎತ್ತಿಟ್ಟು ಮತ್ತೆ ಮುದ್ದಿಡುವುದು. ಕೊನೆಗೆ ಗಂಗಾಧರನಿಗೆ ಶಾಲೆಯಲ್ಲಿ ಗಡಿಯಾರ ಬಹುಮಾನವಾಗಿ ಬಂದಾಗ ಅವನೇ ಅಪ್ಪನಿಗೆ ಜೋರಾಗಿ ಬಾಗಿಲು ಹಾಕಬೇಡ ಗಡಿಯಾರ ಬೀಳುತ್ತದೆ ಎಂದು ಹೇಳಿದಾಗ ಅವನ ವರ್ತನೆಯಲ್ಲಿ ಆದ ಬದಲಾವಣೆ ಇಡೀ ಸಮಾಜದ ಚಿತ್ರಣ ಹಾಗೂ ಮನೋವಿಕಾಸದ ದೃಷ್ಟಿಯಿಂದ ಅತ್ಯುತ್ತಮ ಕಥೆಯಾಗಿದೆ. ಇಲ್ಲಿ ಬರುವ ಗಾದೆಗಳು, ಚಿಕ್ಕ ಪದ್ಯಗಳು, ಗೀಗೀ ಪದಗಳು, ಪ್ರಾಣಿ ಪಕ್ಷಿ ಲೋಕದ ಕಾಳಜಿ ಎಲ್ಲವೂ ಮಕ್ಕಳ ಮನೋಲೋಕವನ್ನು ಪ್ರಭಾವಿಸಬಲ್ಲ ಕಥೆಗಳ ಸಂಕಲನ ಇದಾಗಿದೆ.




ಇನ್ನು 'ಓಡಿಹೋದ ಹುಡುಗ' ಕಿರುಕಾದಂಬರಿ ವಿಭಿನ್ನ ಕಥಾವಸ್ತುವನ್ನು ಒಳಗೊಂಡಿದ್ದು ಕುತೂಹಲದಿಂದ ಓದಿಸಿಕೊಳ್ಳುತ್ತದೆ. ಹಳ್ಳಿಯ ಪರಿಸರ, ಭಾಷೆ, ಮಕ್ಕಳೊಂದಿಗೆ ಮುದನೀಡುತ್ತದೆ. 'ಗಜ್ಯಾ'ಎಂಬ ಹುಡುಗನೊಬ್ಬ ತನ್ನ ದೈಹಿಕ ಚಟುವಟಿಕೆ, ಪಾದರಸದಂತಹ ಚುರುಕಿನಿಂದ ಹೇಗೆ ಎಲ್ಲರ ಪ್ರೀತಿಗೆ ಪಾತ್ರನಾಗುತ್ತಾನೆ, ತ್ಯಾಗ ಸಹನೆಯ ನಡವಳಿಕೆಗಳಿಂದ ನಾಯಕ ಗುಣ ಹೊಂದುತ್ತಾನೆ, ಗ್ರಾಮೀಣ ಹುಡುಗನೊಬ್ಬನಲ್ಲಿರುವ ಅಂತಃಸತ್ವ ಹೇಗೆ ಇಡೀ ಸಮುದಾಯವನ್ನು ಒಂದುಗೂಡಿಸುವ ಶಕ್ತಿಯಾಗುತ್ತದೆ ಎಂದು ಗಜ್ಯಾನ ಅನೇಕ ಹೋರಾಟ–ಸಾಹಸಗಳನ್ನು ಹಳ್ಳಿಯ ತಂದೆತಾಯಂದಿರು ತಮ್ಮ ಮಕ್ಕಳಿಗೆ ಮಾದರಿ ವ್ಯಕ್ತಿಯನ್ನಾಗಿ ತೋರಿಸುತ್ತಾರೆ. ಎಲ್ಲರೂ ಒಂದೇ ಎಂಬ ಭಾವನೆಯನ್ನು ಕಾದಂಬರಿ ಯಶಸ್ವಿಯಾಗಿ ತಲುಪಿಸುತ್ತದೆ. ನಿಜಕ್ಕೂ ಇಂದಿನ ಮಕ್ಕಳಿಗೆ ಬೇಕಾದ ಮೌಲ್ಯಗಳನ್ನು ತಣ್ಣಗೆ ಉಪದೇಶವಿಲ್ಲದೆ ಹೇಳುವ ಈ ಎರಡೂ ಕೃತಿಗಳ ಲೇಖಕರಾದ ಡಾ||ಬಸೂ ಬೇವಿನಗಿಡದ ಅವರ ಪ್ರಯತ್ನಕ್ಕೆ ಅಭಿನಂದನೆಗಳು ಸಲ್ಲುತ್ತವೆ.

**–ಮಂಜುಳಾ ಎಂ. ರಾಜು**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**-ಡಾ. ಕೆ. ಮರುಳಸಿದ್ಧಪ್ಪ**

– ಮತ್ತು ಕುಟುಂಬ

– ಬೆಂಗಳೂರು

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**–ಶ್ರೀಮತಿ ಸುವರ್ಣ ಕಾಡನಕುಪ್ಪೆ**

ಮತ್ತು **ಕುಟುಂಬ**

**ಮೈಸೂರು**

‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು




**ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ**

**ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ**

**ಬೆಂಗಳೂರು**

## ತಿಂಗಳ ಸಾಲುಗಳು...



ಆಡಬೇಕಾದ ಮಾತನ್ನು ಆಡಬೇಕಾದಾಗ ಆಡದೇ ಇರುವ ಕ್ಷಣದಲ್ಲೇ ನಿಮ್ಮ ಬದುಕಿನ ಅಂತ್ಯ ಆರಂಭವಾದಂತೆ.

–ಮಾರ್ಟಿನ್ ಲೂಥರ್ ಕಿಂಗ್ (ಜೂ)

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**

**ಲೆಕ್ಕ ಪರಿಶೋಧಕರು, ಮೈಸೂರು**

ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568

Rgd No.KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, ‘Hosa Manushya’, ’HIG-5, ‘Nudi’, Kallahalli Extension, Vinoba Nagara, Shivamogga -577204 ( Karnataka)